ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 7 ಗುರುವಾರ 2023

ಸಂಪುಟ: 44 | ಸಂಚಿಕೆ: 143 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕಾವೇರಿ ಜಲ ವಿವಾದ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ

ಸೆ.21ಕ್ಕೆ ಮುಂದೂಡಿಕೆ

ಕಾವೇರಿ ನಿರ್ವಹಣಾ ಪ್ರಾಧಿಕಾರದ ಆದೇಶ ಪಾಲನೆ ಇನ್ನು ಅನಿವಾರ್ಯ

ಬೆಂಗಳೂರು, ಸೆ.6–ಕಾವೇರಿ ನದಿ ನೀರು ಹಂಚಿಕೆ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂದೂಡಿರುವುದರಿಂದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ರಾಜ್ಯ ಸರ್ಕಾರ ಪಾಲಿಸುವುದು ಅನಿವಾರ್ಯವಾಗಿದೆ.



ಕರ್ನಾಟಕವು ಬಿಳಿಗುಂಡ್ಲು ಮಾಪನದಲ್ಲಿ ಪ್ರತಿದಿನ 5 ಸಾವಿರ ಕ್ಯುಸೆಕ್ ನೀರು ಹರಿಯುವುದು ದಾಖಲಾಗುವಂತೆ 15 ದಿನಗಳವರೆಗೆ ತಮಿಳುನಾಡಿಗೆ ನೀರು ಬಿಡುವಂತೆ ಪ್ರಾಧಿಕಾರ ಸೂಚಿಸಿತ್ತು. ಇದನ್ನು ಪ್ರಶ್ನಿಸಿ ತಮಿಳುನಾಡು ಹಾಗೂ ಕರ್ನಾಟಕ ಸರ್ಕಾರಗಳು ಸುಪ್ರೀಂಕೋರ್ಟ್ ಮೊರೆ ಹೋಗಿದ್ದವು. ಇಂದು ವಿಚಾರಣೆಗೆ ಕೈಗೆತ್ತಿಕೊಂಡ ಸುಪ್ರೀಂಕೋರ್ಟ್‌ನ ವಿಶೇಷ ಪೀಠವು ಮುಂದಿನ ವಿಚಾರಣೆಯನ್ನು ಸೆ.21ಕ್ಕೆ ಮುಂದೂಡಿದೆ. ತಮಿಳುನಾಡು ಸರ್ಕಾರ ಪ್ರತಿನಿತ್ಯ 24 ಸಾವಿರ ಕ್ಯುಸೆಕ್ ನೀರನ್ನು ಕರ್ನಾಟಕದಿಂದ ಹರಿಸುವಂತೆ ನ್ಯಾಯಾಲಯದ ಮೊರೆ ಹೋಗಿದ್ದರೆ, ಕರ್ನಾಟಕ ಸರ್ಕಾರ ಪ್ರಾಧಿಕಾರದ ಆದೇಶವನ್ನು ಪ್ರಶ್ನಿಸಿತ್ತು.

ಇಂದು ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಬಿ.ಆರ್.ಗವಾಯಿ, ಒಬ್ಬರು ನ್ಯಾಯಮೂರ್ತಿ ರಜೆಯಲ್ಲಿದ್ದಾರೆ. ನಾನು ಮುಂದಿನ ವಾರ ವಿಚಾರಣೆಗೆ ಲಭ್ಯವಿಲ್ಲ. ಹೀಗಾಗಿ ಮುಖ್ಯ ನ್ಯಾಯಮೂರ್ತಿ ಪೀಠದ ಮುಂದೆ ಹೋಗಿ ಹೊಸ ಪೀಠಕ್ಕೆ ಮನವಿ ಮಾಡಿ ಎಂದು ತಮಿಳುನಾಡು ಪರ ವಕೀಲ ಮುಕುಲ್ ರೋಹಟಗಿಗೆ ಸೂಚಿಸಿದರು.

● 6ನೇ ಪುಟಕ್ಕೆ




ಸಂಪ್ರದಾಯದಂತೆ ತೂಕ ಮಾಡಿಸಲು ಅರಮನೆಯಿಂದ ಮೆರವಣಿಗೆ ಮೂಲಕ ದಸರಾ ಆನೆಗಳನ್ನು ವೇಬ್ರಿಡ್ಜ್‌ಗೆ ಕರೆದೊಯ್ಯಲಾಯಿತು. ಈ ವೇಳೆ ಜನ ಕುತೂಹಲದಿಂದ ಆನೆಗಳನ್ನು ವೀಕ್ಷಿಸಿದರು. ಕೆಲವರು ಅವುಗಳಿಗೆ ನಾನಾ ತಿನಿಸುಗಳನ್ನು ನೀಡಿ, ಸಂಭ್ರಮಿಸಿದರು. ಪೊಲೀಸರು ಬಿಗಿ ಭದ್ರತೆ ಕಲ್ಪಿಸಿದ್ದರು. [ವರದಿ ಪುಟ–5]

ಮೈಸೂರಿನ ಕೆ.ಜಿ.ಕೊಪ್ಪಲ್ ಬಳಿಯ ರೈಲ್ವೆ ಕೆಳ ಸೇತುವೆ 100 ಅಡಿಗೆ ವಿಸ್ತರಣೆ

- ಅಂತರರಾಷ್ಟ್ರೀಯ ಮೆಟ್ರಿಕ್‌ನಿಂದ ಮೌಲ್ಯಮಾಪನ
- ಟ್ರಾಫಿಕ್ ಜಾಮ್ ತಪ್ಪುತ್ತದೆ; ಅಪಘಾತ ಮುಕ್ತವಾಗುತ್ತೆ
- ಕ್ರಾಫರ್ಡ್ ಹಾಲ್ ಬಳಿ ಅಂಡರ್ ಪಾಸ್ ನಿರ್ಮಾಣ

ಸಂಸದ ಪ್ರತಾಪ್ ಸಿಂಹ ಸ್ಥಳ ಪರಿಶೀಲನೆ



ಮೈಸೂರು, ಸೆ.6(ಬಿಎಲ್‌ಯು)– ದೀರ್ಘಕಾಲಿಕ ವಾಹನ ದಟ್ಟಣೆಯಿಂದ ಜನ ಸಾಮಾನ್ಯರಿಗೆ ತೀವ್ರ ತೊಂದರೆ ಆಗುತ್ತಿರುವ ಮೈಸೂರಿನ ಕೆ.ಜಿ.ಕೊಪ್ಪಲ್‌ನ ರೈಲ್ವೆ ಕೆಳ ಸೇತುವೆ (ರೈಲ್ವೆ ಅಂಡರ್ ಬ್ರಿಡ್ಜ್) 100 ಅಡಿ ವಿಸ್ತರಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಶೀಘ್ರದಲ್ಲೇ ಡಿಪಿಆರ್ (ಸಮಗ್ರ ಯೋಜನಾ ವರದಿ) ತಯಾರಿಸಲು ನಿರ್ಧರಿಸಲಾಗಿದೆ.

ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಇಂದು ರೈಲ್ವೆ ಅಧಿಕಾರಿಗಳ ಜೊತೆ ಕೆ.ಜಿ.ಕೊಪ್ಪಲ್ ಬಳಿಯ ರೈಲ್ವೆ ಕೆಳ ಸೇತುವೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಸ್ತುತ ರೈಲ್ವೆ ಕೆಳ ಸೇತುವೆ 50 ಅಡಿ ಅಗಲವಿದೆ. ಆ ಸ್ಥಳದಲ್ಲಿ ವಾಹನಗಳ ಸಂಚಾರ ಹೆಚ್ಚಾಗಿರುವ ಕಾರಣ ಕಿರಿದಾದ ಸೇತುವೆ ಬಳಿ ಪ್ರತಿದಿನ ಟ್ರಾಫಿಕ್ ಜಾಮ್ ಆಗುತ್ತಿದೆ ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ, ಟಿ.ಕೆ.ಬಡಾವಣೆ, ಜಯನಗರ ಸೇರಿದಂತೆ ಹಲವು ಬಡಾವಣೆಯ ಜನರು ಇತರೆಡೆ ಹೋಗಲು ಈ ಸ್ಥಳ ಸಂಪರ್ಕ ಕಲ್ಪಿಸುವ ಕೇಂದ್ರವಾಗಿದೆ. ಇನ್ನು ಬಲ್ಲಾಳ್ ಸರ್ಕಲ್, ಕೃಷ್ಣರಾಜ ಬುಲೇವಾರ್ಡ್ ರಸ್ತೆ ಸೇರಿದಂತೆ ಇತರೆಡೆಯಿಂದ ಬರುವ ಜನರು ಕುವೆಂಪುನಗರ, ರಾಮಕೃಷ್ಣನಗರ ಸೇರಿದಂತೆ ಬಡಾವಣೆಗೆ ಹೋಗಲು ಕೂಡ ಇದೇ ರೈಲ್ವೆ ಕೆಳ ಸೇತುವೆಯ ಜಂಕ್ಷನ್ ಮೂಲಕವೇ ಹಾದು ಹೋಗಬೇಕು.

ರೈಲ್ವೆ ಕೆಳ ಸೇತುವೆ ಬಳಿ ಸಿಗ್ನಲ್ ಲೈಟ್ ಇರುವ ಕಾರಣ, ಎಲ್ಲಾ ನಾಲ್ಕು ಪಥದಲ್ಲೂ ವಾಹನಗಳ ಉದ್ದನೆ ಸಾಲು ಕಂಡು ಬರುತ್ತದೆ. ರೈಲ್ವೆ ಬ್ರಿಡ್ಜ್ ಕೆಳಗೆ ಏಕ ಕಾಲಕ್ಕೆ ಒಂದೊಂದು ಬಸ್ ಹೋಗಬಹುದಷ್ಟೆ. ತಾವು ಬೇಗ ಹೋಗುವ ಧಾವಂತದಲ್ಲಿ ವಾಹನ ಸವಾರರು ಓವರ್ ಟೇಕ್ ಮಾಡಿದ ಸಂದರ್ಭದಲ್ಲಿ ಪ್ರತಿ ದಿನ ಅಪಘಾತಗಳಾಗುತ್ತಿವೆ. ಈ ತನಕ ನಡೆದಿರುವ ಅಪಘಾತದಿಂದ ಬಹಳಷ್ಟು ಜನರು ಸಾವನ್ನಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ರೈಲ್ವೆ ಕೆಳ ಸೇತುವೆಯನ್ನು ಈಗಿರುವ 50 ಅಡಿ ಅಗಲದಿಂದ 100 ಅಡಿ ತನಕ ವಿಸ್ತರಣೆ ಮಾಡಲು ತೀರ್ಮಾನಿಸಲಾಗಿದೆ. ರೈಲ್ವೆ ಕೆಳ ಸೇತುವೆಯ ಪೂರ್ವ–ಪಶ್ಚಿಮ ದಿಕ್ಕಿನಲ್ಲಿ 100 ಅಡಿ ● 6ನೇ ಪುಟಕ್ಕೆ

ಪೌರಕಾರ್ಮಿಕ ನಾಯಕ ರಾಜುಗೆ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಸ್ಥಾನ ನೀಡಲು ಆಗ್ರಹ



ಮೈಸೂರು,ಸೆ.6(ಜಿಎ)–ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರನ್ನಾಗಿ ಪೌರ ಕಾರ್ಮಿಕರ ಮಹಾಸಂಘದ ರಾಜ್ಯಾಧ್ಯಕ್ಷ ಡಿ.ಆರ್.ರಾಜು ಅವರನ್ನು ನೇಮಕ ಮಾಡುವಂತೆ ನಗರಪಾಲಿಕೆ ಕಾಯಂ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಪರಿಶಿಷ್ಟ ಸಮುದಾಯದ ಕನ್ನಡ ಮಾದಿಗ, ಬೆಂಗಳೂರು ಮಾದಿಗ, ಜೋಗಿ ಮಾದಿಗ ಸಮುದಾಯಗಳಿಗೆ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಇದುವರೆಗೂ ಆದಿ ದ್ರಾವಿಡ ಮಾದಿಗ ಸಮುದಾಯಕ್ಕೆ ಯಾವುದೇ ನಿಗಮ ಮಂಡಳಿಗಳಲ್ಲಿ ಅಧ್ಯಕ್ಷ ಸ್ಥಾನಮಾನ ನೀಡಿಲ್ಲದಿರುವುದು ಬೇಸರದ ಸಂಗತಿಯಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ಸುಮಾರು 30 ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ತೊಡಗಿರುವ ಡಿ.ಆರ್.ರಾಜು ಅವರು ಎಲ್ಲಾ ಜಿಲ್ಲೆಗಳಲ್ಲಿಯೂ ಪೌರಕಾರ್ಮಿಕ ಸಮುದಾಯದ ಮತಗಳು ಕಾಂಗ್ರೆಸ್‌ಗೆ ಬರುವಂತೆ ನೋಡಿಕೊಳ್ಳುತ್ತಿದ್ದಾರೆ. ಜೊತೆಗೆ, ಕೆಪಿಸಿಸಿ ಪ್ರದೇಶ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಸಂಚಾಲಕರಾಗಿಯೂ ಕೆಲಸ ಮಾಡುತ್ತಿದ್ದಾರೆ. ಇವರನ್ನು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದರೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಅನುಕೂಲವಾಗಲಿದೆ. ಆದ್ದರಿಂದ ನೇಮಕ ಮಾಡಬೇಕೆಂದು ಸಿಎಂ ಸಿದ್ದರಾಮಯ್ಯ, ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಅವರಲ್ಲಿ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಶ್ರೀನಿವಾಸ್, ಬ್ಯಾಂಕ್ ರಂಗಣ್ಣ, ಮಂಚಯ್ಯ, ನರಸಿಂಹ ಹಾಗೂ ಇತರರು ಉಪಸ್ಥಿತರಿದ್ದರು.

ಭಾರತ ಪ್ರಗತಿಯಾಗಬೇಕಾದರೆ ಅದು ಗಾಂಧಿ ಮಾರ್ಗದಿಂದ ಮಾತ್ರ ಸಾಧ್ಯ

ಗಾಂಧಿ ಚಿಂತಕ ಎಲ್.ನರಸಿಂಹಯ್ಯ ಅಭಿಮತ



ಮೈಸೂರು,ಸೆ.6–ಗಾಂಧಿ ಯುಗವೆಂದರೆ ಭಾರತದ ಸ್ವಾತಂತ್ರ್ಯಾಂದೋಲನದ ಕಾಲಘಟ್ಟ ಎಂದೇ ಅರ್ಥ. ಗಾಂಧೀಜಿಯವರ ಧ್ಯೇಯ–ಉದ್ದೇಶಗಳು ಹಾಗೂ ಬೋಧನೆಗಳು ಭಾರತೀಯರನ್ನು ಪ್ರಭಾವಿಸಿವೆ. ಭಾರತದಲ್ಲಿ ಜೀವನದ ಮೂಲಭೂತ ಮೌಲ್ಯಗಳು ಶ್ರೀ ಸಾಮಾನ್ಯರಿಂದ ಅಂಗೀಕೃತವಾಗಿ ಅನುಷ್ಠಾನದಲ್ಲಿವೆ; ಗಾಂಧಿಗ್ರಾಮ ಭಾರತದಲ್ಲಿನ್ನು ಉಳಿದಿದೆ, ಗಾಂಧೀ ಚಿಂತನೆಗಳು, ಗ್ರಾಮೀಣರ ಶಕ್ತಿ, ಅಭ್ಯುದಯ ಹಾಗೂ ಸುಖಗಳನ್ನು ಬೆಳೆಸುತ್ತಲಿವೆ ಎಂದು ತುಮಕೂರಿನ ಹಿರಿಯ ಶಿಕ್ಷಣ ತಜ್ಞ–ಗಾಂಧಿ ಚಿಂತಕ ಎಲ್.ನರಸಿಂಹಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು

ಕರ್ನಾಟಕ ಸರ್ವೋದಯ ಮಂಡಲ, ಬೆಂಗಳೂರು ನಗರ ಜಿಲ್ಲಾ ಘಟಕ ಮತ್ತು ಭಾರತ ಸೇವಾದಳ, ಸಂಯುಕ್ತಾಶ್ರಯದಲ್ಲಿ ಕುಮಾರ ಪಾರ್ಕ್ ಪೂರ್ವದ ನಾ.ಸು. ಹರ್ಡಿಕರ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ ಪ್ರಯುಕ್ತ ಸ್ವಾತಂತ್ರ್ಯ ಅಮೃತ ಮಹೋತ್ಸವ–ಪೂರ್ವೋತ್ತರಗಳು ಮತ್ತು ನಾವು ಕುರಿತು ವಿಶೇಷ ಉಪನ್ಯಾಸ ಹಾಗೂ ಗುರುವಂದನೆ ಸ್ವೀಕರಿಸಿ ಮಾತನಾಡುತ್ತಿದ್ದರು. ಕರ್ನಾಟಕ ಸರ್ವೋದಯ ಮಂಡಲ ಅಧ್ಯಕ್ಷ ಡಾ.ಎಚ್.ಎಸ್.ಸುರೇಶ್ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಗೌರವ ಕಾರ್ಯದರ್ಶಿ ಡಾ.ಯ.ಚಿ.ದೊಡ್ಡಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೋಶಾಧಿಕಾರಿ ವಿರೂಪಾಕ್ಷ ಟಿ.ಹುಡೇದ್, ಡಾ. ಗುರುರಾಜ ಪೋಶೆಟ್ಟಿಹಳ್ಳಿ ಹಾಗೂ ಭಾರತ ಸೇವಾದಳದ ದಳಪತಿ ಕಾಶೀನಾಥ ಹಂದ್ರಾಳ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಲ್ಲಿ ಬುಧವಾರ ಸುರಿದ ಧಾರಾಕಾರ ಮಳೆ ಸಂದರ್ಭದಲ್ಲಿ ದಿವಾನ್ಸ್ ರಸ್ತೆಯ ವಾಣಿಜ್ಯ ತೆರಿಗೆ ಕಚೇರಿ ಮುಂಭಾಗ ಬೃಹತ್ ಗಾತ್ರದ ಮರ ನೆಲಕ್ಕುರುಳಿತು. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಅಭಯ ತಂಡದ ಸದಸ್ಯರು ಸ್ಥಳಕ್ಕಾಗಮಿಸಿ, ಮರವನ್ನು ತೆರವುಗೊಳಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಕಾರ್ಯಾಚರಣೆಯಲ್ಲಿ ಇರ್ಷಾದ್, ನವೀನ್, ಪುನೀತ್, ಅವಿನಾಶ್ ಪಾಲ್ಗೊಂಡಿದ್ದರು.

ನಿಧನ

ಅಲ್ಲಂಡ ನೀಲವ್ವ



ಮೈಸೂರು, ಸೆ.6–ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಕಡಂಗಮುರೂರ್ ಗ್ರಾಮದ ನಿವಾಸಿ ದಿವಂಗತ ಪೂವಯ್ಯ (ಮಣಿ) ಅವರ ಪತ್ನಿ ಅಲ್ಲಂಡ ನೀಲವ್ವ (ಲಕ್ಷ್ಮಿ–ನಳಿಯಂಡ–ಬಾವಲಿ) ಅವರು ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಪುತ್ರಿಯ ಮನೆಯಲ್ಲಿ ಬುಧವಾರ ಬೆಳಗ್ಗೆ ನಿಧನರಾದರು. ಅವರಿಗೆ 88 ವರ್ಷ ವಯಸ್ಸಾಗಿತ್ತು. ಮೃತರು ಐವರು ಪುತ್ರಿಯರು, ಅಳಿಯಂದಿರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜುಬೇದಾ ನಯೀಮ್



ಮೈಸೂರಿನ ಬನ್ನಿಮಂಟಪ 'ಸಿ' ಬಡಾವಣೆ ನಿವಾಸಿ ನಯೀಮುದ್ದೀನ್ ಅವರ ಪತ್ನಿ ಜುಬೇದಾ ನಯೀಮ್ (70) ಸೆ.2 ರಂದು ಯುಎಸ್‌ಎನ ನ್ಯೂಜೆರ್ಸಿಯಲ್ಲಿ ನಿಧನರಾದರು. ಅವರು ಜಯಲಕ್ಷ್ಮಿಪುರಂ ಸೇಂಟ್ ಜೋಸೆಫ್‌ನ ಎನ್‌ಎಸ್‌ಟಿ ಮತ್ತು ಟಿಸಿಹೆಚ್ ಕಾಲೇಜಿನ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದರು. ಮೃತರು ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ನವಾಜ್–ಇ–ಜನಾಜ ನಡೆದ ನಂತರ ಸೆ. 3 ರಂದು ನ್ಯೂ ಜೆರ್ಸಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯಮ್ಮ



ಮೈಸೂರು ತಾಲೂಕು, ಇಲವಾಲ ಹೋಬಳಿಯ ಗಣಗರ ಹುಂಡಿ ಗ್ರಾಮದ ನಿವಾಸಿ ಶ್ರೀಮತಿ ಜಯಮ್ಮ (52) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತಿ ಶಿವಕುಮಾರ್, ಮಕ್ಕಳಾದ ಜಿ.ಎಸ್.ಶಿಲ್ಪಶ್ರೀ, ಜಿ.ಎಸ್.ಪೂಜಾಶ್ರೀ, ಜಿ.ಎಸ್.ವಿಜಯ್ ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಎಸ್.ರೋಹಿಣಿ



ಕೆ.ಆರ್.ನಗರ ತಾಲೂಕಿನ ಬೀಚನಹಳ್ಳಿ ನಿವಾಸಿ ಹಾಗೂ ದಿವಂಗತ ಬಸವರಾಜಪ್ಪ (ನಿವೃತ್ತ ಉಪನ್ಯಾಸಕ) ಅವರ ಪತ್ನಿ ಕೆ.ಎಸ್.ರೋಹಿಣಿ (64) ಅನಾರೋಗ್ಯದಿಂದ ಸೋಮವಾರ ರಾತ್ರಿ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ ಬೀಚನಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿದ್ದಂಡ ಬೋಪಯ್ಯ



ಮೈಸೂರು ನಿವಾಸಿ ಬಿದ್ದಂಡ ಬೋಪಯ್ಯ ರಘುಪತಿ (81) ಇಂದು ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 12.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಂದಿನ ವರ್ಷಾರಂಭದಲ್ಲಿ ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ

ಶುಭ ಹಾರೈಸಿ ಮೈಸೂರು ಮಹಾಲಿಂಗೇಶ್ವರ ಸೇವಾ ಸಮಿತಿಯಿಂದ ನಾಳೆಯಿಂದ 10ರವರೆಗೆ ಯಕ್ಷಗಾನ

ಮೈಸೂರು,ಸೆ.6(ಜಿಎ)–ಅಯೋಧ್ಯೆಯಲ್ಲಿ 2024ರ ಜನವರಿಯಲ್ಲಿ ಶ್ರೀರಾಮ ಮಂದಿರ ಲೋಕಾರ್ಪಣೆ ಆಗುತ್ತಿರುವ ಕಾರ್ಯಕ್ರಮಕ್ಕೆ ಶುಭ ಹಾರೈಸಲು ಮೈಸೂರಿನ ಮಹಾಲಿಂಗೇಶ್ವರ ಸೇವಾ ಸಮಿತಿ ವತಿಯಿಂದ ಸೆ.8ರಿಂದ 10ರವರೆಗೆ ಯಕ್ಷಗಾನ ಆಯೋಜಿಸಲಾಗುತ್ತಿದೆ ಎಂದು ಸಮಿತಿಯ ಖಜಾಂಚಿ ಪುಟ್ಟಸಿದ್ದನಾಯಕ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರ್ಮಸ್ಥಳದ ನಿಡ್ಲೆಯ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ ವತಿಯಿಂದ ಇದು 36ನೇ ವರ್ಷದ ತಿರುಗಾಟದ ಭಾಗವಾಗಿದ್ದು, ಮಂಡಳಿಯಿಂದ ಸೆ.8ರಂದು ಸಂಜೆ 6.30ಕ್ಕೆ ಗಂಗೋತ್ರಿ ಬಡಾವಣೆಯ ಕೃಷ್ಣಧಾಮದಲ್ಲಿ ಪೇಜಾವರ ಮಠಾಧೀಶ ಚಾತುರ್ಮಾಸ್ಯ ಸಮಿತಿ ಸಹಯೋಗದೊಂದಿಗೆ 'ಕನಕಾಂಗಿ ಕಲ್ಯಾಣ' ಯಕ್ಷಗಾನ ಪ್ರಸಂಗ ನಡೆಯಲಿದೆ ಎಂದರು.

ಸೆ.9ರಂದು ಸಂಜೆ 6ಕ್ಕೆ ಬೋಗಾದಿಯ ಮಾತಾ ಅಮೃತಾನಂದಮಯಿ ಮಠದಲ್ಲಿ ದಕ್ಷಿಣ ಕನ್ನಡದ ಶ್ರೀ ಜಲದುರ್ಗಾ ಪರಮೇಶ್ವರೀ ದೇವಸ್ಥಾನ ಮತ್ತು ಮೈಸೂರಿನ ಶ್ರೀ ಮಹಾಲಿಂಗೇಶ್ವರ ದೇವಾಲಯದ ಪ್ರಾಯೋಜನೆಯಲ್ಲಿ 'ಮಹರ್ಷಿ ಅಗಸ್ತ್ಯ' ಪ್ರಸಂಗವನ್ನು ಏರ್ಪಡಿಸಲಾಗಿದ್ದು, ಸೆ.10ರಂದು ಸಂಜೆ 4ಕ್ಕೆ ಕೆ.ಹೆಮ್ಮನಹಳ್ಳಿಯ ಮಹಾಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ಸಂಪೂರ್ಣ ರಾಮಾಯಣದ ಪಟ್ಟಾಭಿಷೇಕ ಮುಹೂರ್ತ, ಪಂಚವಟಿ, ಲಂಕಾ ದಹನ, ರಾವಣ ವಧೆ ಮತ್ತು ನಿಜ ಪಟ್ಟಾಭಿಷೇಕ ಪ್ರಸಂಗದ ಪ್ರದರ್ಶನವಿರಲಿದೆ ಎಂದು ತಿಳಿಸಿದರು.

ಅಗಸ್ತ್ಯರ ವೈಜ್ಞಾನಿಕತೆ: ಖ್ಯಾತ ಹಿರಿಯ ನ್ಯಾಯವಾದಿ ಓ.ಶ್ಯಾಮ್ ಭಟ್ ಮಾತನಾಡಿ, ಮಹರ್ಷಿ ಅಗಸ್ತ್ಯ ಅವರು ನಮಗೆ ಭಾಷೆಗಳನ್ನೂ ನೀಡಿದ್ದಾರೆ. ಅದರಲ್ಲೂ ತಮಿಳು ಭಾಷೆಯ ಜನಕ ಅವರೇ ಎಂಬುದಕ್ಕೆ ಯಾವುದೇ ರೀತಿಯ ವಿರೋಧವಿಲ್ಲ. ತಮಿಳು ಮತ್ತು ತುಳು ಭಾಷೆಗಳಲ್ಲಿ ಅವರ ಕೈಬರಹಗಳಿವೆ. ಸೋಲಾರ್ ಬ್ಯಾಟರಿ ಸಿಸ್ಟಂ ಅನ್ನು ಪ್ರಪಂಚಕ್ಕೆ ಪರಿಚಯಿಸಿದವರು ಅಗಸ್ತ್ಯ ಮುನಿಗಳು ಎಂಬುದರಲ್ಲಿ ಯಾವುದೇ ಸಂಶಯ ವಿಲ್ಲ. ಅದಕ್ಕೂ ಕೂಡ ಪುರಾವೆಗಳಿವೆ. ಯುದ್ಧ ಕಲೆ ಯನ್ನು ಪರಿಚಯಿಸಿದ್ದು, ಅಗಸ್ತ್ಯ ಮುನಿಗಳು ಬಲಾಢ್ಯ ದೇಹ ಹೊಂದಿದವರೊಂದಿಗೆ ಬಲಾಢ್ಯವಲ್ಲದ ದೇಹದವರು ಯುದ್ಧ ಮಾಡಲು ಕಳರಿಪಯಟ್ಟು ಪರಿಚಯಿಸಿದರು. ಯೋಗ ಮತ್ತು ಸಿದ್ಧೌಷಧಗಳ ಜನಕರೂ ಅವರೇ. ಅಗಸ್ತ್ಯ ಮುನಿಗಳು ಯಾವುದೇ ಒಂದು ಪಂಥಕ್ಕೆ ಸೀಮಿತರಾಗಿರಲಿಲ್ಲ ಎಂದು ತಿಳಿಸಿದರು.

ಮನುಷ್ಯ ಜೀವನದಲ್ಲಿ ಶಿಸ್ತು ಮೂಡಿಸಿಕೊಳ್ಳಲು ಅನುಕೂಲವಾಗುವಂತೆ ಆಚಾರ–ವಿಚಾರಗಳನ್ನು ನಮಗೆ ನೀಡಿದ್ದು ಅಗಸ್ತ್ಯ ಮುನಿಗಳು. ಹಿಂದೂ ಧರ್ಮ ಹುಟ್ಟಿದ್ದು ಎಲ್ಲಿ, ಅದನ್ನು ಹುಟ್ಟು ಹಾಕಿದವರು ಯಾರು ಎಂದು ಕೆಲವರು ಪ್ರಶ್ನಿಸುತ್ತಾರೆ. ಅಗಸ್ತ್ಯ ಮುನಿಗಳ ಬಗ್ಗೆ ಅಂತಹವರು ತಿಳಿದುಕೊಂಡರೆ ಹಿಂದೂ ಧರ್ಮ ಹಾಗೂ ಸನಾತನದ ಜನಕ ಯಾರು ಎಂಬ ಪ್ರಶ್ನೆಗೆ ಉತ್ತರ ಸಿಗುತ್ತದೆ. ಅಗಸ್ತ್ಯ ಮುನಿಗಳು ಹಲವಾರು ಟೆಕ್ನಾಲಜಿಗಳನ್ನು ಸಹಸ್ರಾರು ವರ್ಷಗಳ ಹಿಂದೆಯೇ ನಮಗೆ ಕೊಡುಗೆಯಾಗಿ ನೀಡಿದ್ದಾರೆ. ಆಡಳಿತ ವ್ಯವಸ್ಥೆಯನ್ನು ಪಾಂಡ್ಯ, ಚೋಳ ಹಾಗೂ ಸೇರನ್ ಮಹಾರಾಜರುಗಳಿಗೆ ನೀಡಿದ್ದು ಕೂಡ ಅಗಸ್ತ್ಯ ಮುನಿಗಳೇ ಎಂಬುದರಲ್ಲಿ ಸಂಶಯವಿಲ್ಲ. ಅಗಸ್ತ್ಯ ಮುನಿಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಇದುವರೆಗೂ ನಡೆದಂತೆ ಕಾಣುತ್ತಿಲ್ಲ. ಅಗಸ್ತ್ಯ ಮುನಿಗಳ ಬಗ್ಗೆ ಅಧ್ಯಯನ ಆರಂಭವಾಗಿದ್ದು, ಈಗಾಗಲೇ ಅವರ 118 ಕೈಬರಹಗಳು ಮತ್ತು 249 ಕೃತಿಗಳು ಪತ್ತೆಯಾಗಿದ್ದು, ಮತ್ತಷ್ಟು ಕೈಬರಹ ಹಾಗೂ ಕೃತಿಗಳಿಗಾಗಿ ತಲಾಷೆ ನಡೆಯುತ್ತಿದೆ. ಈಗಾಗಲೇ ದೊರೆತಿರುವ ಕೈಬರಹ ಹಾಗೂ ಕೃತಿಗಳನ್ನು 22 ಭಾಷೆಗಳಿಗೆ ಅನುವಾದ ಮಾಡುವ ಕಾರ್ಯ ನಡೆಯುತ್ತಿದೆ ಎಂದರು.

ಆರು ತಿಂಗಳ ಹಿಂದೆ ಇಂಗ್ಲಿಷಿನಲ್ಲಿ 'pragyata the ageless guru of guru agastya' ಎಂಬ ಸಂಕ್ಷಿಪ್ತವಾದ ಕೃತಿಯನ್ನು ನಾನು ಮತ್ತು ಹಿರಿಯ ಆಯುರ್ವೇದ ಸಲಹೆಗಾರರಾದ ಡಾ.ಎಂ.ಎನ್. ಸುಧಾ ಅವರು ಬರೆದಿದ್ದು, ಮುಂದಿನ ದಿನಗಳಲ್ಲಿ ಕನ್ನಡದಲ್ಲಿ ಮಹಾಗ್ರಂಥವೇ ರೂಪುಗೊಳ್ಳುತ್ತಿದೆ. ಇದೀಗ ಆಯೋಜಿಸಿರುವ ಮಹರ್ಷಿ ಅಗಸ್ತ್ಯ ಪ್ರಸಂಗವು, ಮುನಿಯ ಜೀವನವನ್ನು ಸಂಕ್ಷಿಪ್ತವಾಗಿ ತಿಳಿಸುವ ಹಾಗೂ ಹಲವು ವಿಚಾರಗಳಲ್ಲಿ ಅವರ ಜ್ಞಾನವನ್ನು ವ್ಯಕ್ತಪಡಿಸುವ ಪ್ರಯತ್ನ ಮಾಡಲಿದೆ. ಅಗಸ್ತ್ಯರು ಅತ್ಯಂತ ಶ್ರೇಷ್ಠ ಜ್ಞಾನಿಯಾಗಿದ್ದು, ಅವರ ಹಲವು ಗ್ರಂಥಗಳ ಬಗ್ಗೆ ಕೇಂದ್ರ ಸರ್ಕಾರ ಮತ್ತು ಅಮೃತಾನಂದ ಮಯೀ ವಿಶ್ವವಿದ್ಯಾಲಯವು ಜಂಟಿಯಾಗಿ ಅಧ್ಯಯನಕ್ಕೆ ಮುಂದಾಗಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೇವಾ ಸಮಿತಿ ಕಾರ್ಯದರ್ಶಿ ಜಿ.ಎನ್.ಅನಂತವರ್ಧನ, ವಕೀಲ ಶಿವಶಾಸ್ತ್ರಿ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಖ್ಯಾತ ವಕೀಲ ಓ. ಶಾಮ್ ಭಟ್(ಎಡದಿಂದ ಮೂರನೇಯವರು) ಅವರು ಮಹರ್ಷಿ ಅಗಸ್ತ್ಯರ ಶ್ರೇಷ್ಠತೆಯ ಬಗ್ಗೆ ವಿವರಿಸಿದರು. ಚಿತ್ರದಲ್ಲಿ ವಕೀಲ ಶಿವಶಾಸ್ತ್ರಿ, ಸೇವಾ ಸಮಿತಿ ಖಜಾಂಚಿ ಪುಟ್ಟಸಿದ್ದನಾಯಕ, ಕಾರ್ಯದರ್ಶಿ ಜಿ.ಎನ್.ಅನಂತವರ್ಧನ, ಅಧ್ಯಕ್ಷ ಎಂ.ಗಣೇಶ್ ಇದ್ದಾರೆ.

ಪ್ರಸಕ್ತ ಎಲ್ಲಾ ಸಮಸ್ಯೆಗೂ ಅಗಸ್ತ್ಯರ ಕೊಡುಗೆಯಲ್ಲಿ ಪರಿಹಾರವಿದೆ

ಖ್ಯಾತ ವಕೀಲ ಓ.ಶಾಮ್ ಭಟ್ ಮಾತನಾಡಿ, ಮಹರ್ಷಿ ಅಗಸ್ತ್ಯ ಮುನಿಗಳು ಇಂದಿಗೂ ನಮ್ಮಲ್ಲಿ ಪ್ರಸ್ತುತರಾಗಿದ್ದು, ಆಧ್ಯಾತ್ಮಿಕ ಮತ್ತು ವಿಜ್ಞಾನ ಎರಡನ್ನೂ ನಮಗೆ ನೀಡಿದವರು ಅವರೇ. ನಾವು ಎಂದಿಗೂ ಮಹರ್ಷಿ ಅಗಸ್ತ್ಯರನ್ನು ಮರೆಯಲು ಸಾಧ್ಯವಿಲ್ಲ. ಈಗ ನಾವು ಬರಗಾಲದ ಬಗ್ಗೆ ಮಾತನಾಡುತ್ತಿದ್ದೇವೆ. ಈ ಹಿಂದೆ ಈ ಭಾಗದಲ್ಲಿ ಬರಗಾಲ ತಾಂಡವವಾಡುತ್ತಿದ್ದಾಗ ಅಗಸ್ತ್ಯ ಮುನಿಗಳು ಕಾವೇರಿ ನದಿಯನ್ನು ಹುಟ್ಟು ಹಾಕಿ ಅದನ್ನು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಹರಿಯುವ ಹಾಗೇ ಮಾಡಿದ್ದರು. ಜೊತೆಗೆ ಕಾವೇರಿ ಹರಿಯುವ ಉದ್ದಕ್ಕೂ ದೇವಾಲಯಗಳನ್ನು ಸ್ಥಾಪಿಸಿದ್ದಾರೆ ಎಂಬುದಕ್ಕೆ ಅನೇಕ ಪುರಾಣಗಳಲ್ಲಿ ಸಾಕ್ಷಿಗಳಿವೆ. ದಕ್ಷಿಣ ಭಾರತ ಮತ್ತು ಉತ್ತರ ಭಾರತವನ್ನು ಒಗ್ಗೂಡಿಸುವ ಕೆಲಸವನ್ನು ಅವರು ಮಾಡಿದ್ದರು ಎಂಬುದಕ್ಕೆ ಪುರಾಣಗಳಲ್ಲಿ ಉಲ್ಲೇಖವಿದೆ ಎಂದರು.

ಉದಯ ನಿಧಿ ಸ್ಟಾಲಿನ್ ಹೇಳಿಕೆ ಖಂಡಿಸಿ ಪ್ರತಿಭಟನೆ



ಮೈಸೂರು, ಸೆ.6(ಜಿಎ)–ಸನಾತನ ಧರ್ಮವನ್ನು ಡೆಂಗ್ಯೂ ಮತ್ತು ಮಲೇರಿಯಾಗೆ ಹೋಲಿಸಿರುವ ತಮಿಳುನಾಡಿನ ಸಚಿವ ಉದಯ ನಿಧಿ ಸ್ಟಾಲಿನ್ ಹೇಳಿಕೆಯನ್ನು ಖಂಡಿಸಿ ಜಿಲ್ಲಾ ಪಂಚಾಯತ್ ಕಚೇರಿ ಮುಂಭಾಗ ಕರ್ನಾಟಕ ಸೇನಾ ಪಡೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿ ಮುಂಭಾಗ ಕರ್ನಾಟಕ ಸೇನಾಪಡೆ ಪದಾಧಿಕಾರಿಗಳು, ಕೂಡಲೇ ಉದಯ ನಿಧಿ ಸ್ಟಾಲಿನ್ ರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಹಾಗೂ ಅವರ ಮೇಲೆ ಧರ್ಮ ನಿಂದನೆ ಕೇಸ್ ದಾಖಲಿಸಿ ಎಂದು ಒತ್ತಾಯಿಸಿದರು.

ಈ ವೇಳೆ ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಮಾತನಾಡಿ, ಸನಾತನ ಧರ್ಮವನ್ನು ನಾಶ ಮಾಡಲು ನೂರಾರು ವರ್ಷಗಳಿಂದಲೂ ಪ್ರಯತ್ನಗಳು ನಡೆಯುತ್ತಲೇ ಇದೆ. ಆದರೆ ಹಾಗೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಎಲ್ಲಾ ಧರ್ಮಗಳಿಗೆ ಬುನಾದಿಯೇ ಸನಾತನ ಧರ್ಮ ಎಂದರು.

ಈ ಕೂಡಲೇ ಕೇಂದ್ರ ಸರ್ಕಾರ ಹಾಗೂ ಸುಪ್ರೀಂ ಕೋರ್ಟ್ ಈ ರೀತಿ ಹೇಳಿಕೆಗಳಿಗೆ ಕಡಿವಾಣ ಹಾಕಿ, ಉಗ್ರ ಶಿಕ್ಷೆ ನೀಡಬೇಕು ಹಾಗೂ ಉದಯ ನಿಧಿ ಸ್ಟಾಲಿನ್ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು ಮತ್ತು ಧರ್ಮ ನಿಂದನೆ ಮಾಡಿರುವ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳಾದ ಗೋಲ್ಡ್ ಸುರೇಶ್, ವಿಜಯೇಂದ್ರ, ಕೃಷ್ಣಯ್ಯ ಸಿ.ಎಚ್, ಡಾ.ಶಾಂತರಾಜೇ ಅರಸ್, ಪ್ರಜೀಶ್, ಮಿನಿ ಬಂಗಾರಪ್ಪ, ಅಂಬಾ ಅರಸ್, ನೇಹಾ, ಪದ್ಮ, ಶಿವಲಿಂಗಯ್ಯ, ಒಲಂಪಿಯಾ ರವಿಗೌಡ, ಎಳನೀರು ರಾಮಣ್ಣ, ನಂದಕುಮಾರ್, ದರ್ಶನ್‌ಗೌಡ, ನರಸಿಂಹೇಗೌಡ, ಶ್ರೀನಿವಾಸ್, ನಿತ್ಯಾನಂದ, ಗಣೇಶ್‌ಪ್ರಸಾದ್, ವೆಂಕಟೇಶ್, ಕೃಷ್ಣಮೂರ್ತಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಸೆ.10ರಂದು ಮೈಸೂರಲ್ಲಿ ಷಟಲ್ ಬ್ಯಾಡ್ಮಿಂಟನ್ ಟೂರ್ನಿ




ಮೈಸೂರು,ಸೆ.6(ಜಿಎ)–ಶಿಕ್ಷಕರ ದಿನಾಚರಣೆ ಅಂಗವಾಗಿ ನಗರದ ಭವಿಷ್ಯ ಅಕಾಡೆಮಿ ವತಿಯಿಂದ ಸೆ.10ರಂದು ಶಿಕ್ಷಕರಿಗಾಗಿ ಷಟಲ್ ಬ್ಯಾಡ್ಮಿಂಟನ್ ಟೂರ್ನಿ ಆಯೋಜಿಸಲಾಗಿದೆ ಎಂದು ಅಕಾಡೆಮಿ ವ್ಯವಸ್ಥಾಪಕ ಎಂ.ಆರ್.ಸುಧೀಂದ್ರ ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಅಂದು ಬೆಳಗ್ಗೆ 8.30ಕ್ಕೆ ಮೈಸೂರಿನ ರಾಜರಾಜೇಶ್ವರಿನಗರದ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ನಾಕ್‌ಔಟ್ ಮಾದರಿಯಲ್ಲಿ ಪುರುಷರ ಡಬಲ್ಸ್ ಓಪನ್, 40 ವರ್ಷ ಮೇಲ್ಪಟ್ಟ ಪುರುಷರ ಡಬಲ್ಸ್, ಮಹಿಳಾ ಡಬಲ್ಸ್ ಓಪನ್ ಮತ್ತು ಮಿಶ್ರ ಡಬಲ್ಸ್‌ಗಳಲ್ಲಿ ಪಂದ್ಯ ನಡೆಯಲಿದೆ ಎಂದರು.

ಜಿಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ ಪಂದ್ಯ ಉದ್ಘಾಟಿಸಲಿದ್ದಾರೆ. ರಾಜ್ಯದ ಎಲ್ಲಾ ಭಾಗಗಳ ಶಾಲಾ–ಕಾಲೇಜುಗಳ ಶಿಕ್ಷಕರು ಭಾಗವಹಿಸಬಹುದು. ತಂಡಕ್ಕೆ ಪ್ರವೇಶ ಶುಲ್ಕವಿದೆ. ನೋಂದಣಿ ಹಾಗೂ ಮಾಹಿತಿಗೆ ಮೊ.ಸಂ.9916673300 ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ಒನ್ ಪಾಯಿಂಟ್ ಸೊಲ್ಯೂಷನ್ ವ್ಯವಸ್ಥಾಪಕ ಶ್ರೀಕಾಂತ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.9.2023 ಗುರುವಾರ, ಮಳೆ ನಕ್ಷತ್ರ: ಪುಬ್ಬ 31.08.2023 ರಿಂದ 13.09.2023

ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

- **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ
- **ಶ್ರೀ ರಾಧಾ ಕೃಷ್ಣ ಮಂದಿರ :** ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಲಡ್ಡು ಗೋಪಾಲ ಉಯ್ಯಾಲೆ ಉತ್ಸವ, ದರ್ಶನ ಬೆಳಗ್ಗೆ 7 ರಿಂದ ರಾತ್ರಿ 10 ರವರೆಗೆ, ಸ್ಥಳ: ಶ್ರೀರಾಧಾಕೃಷ್ಣ ಮಂದಿರ, ಲಲಿತ ಮಹಲ್ ರಸ್ತೆ.
- **ಶ್ರೀ ಪೂರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಅಭಿವೃದ್ಧಿ ಟ್ರಸ್ಟ್ :** ಜಗನ್ನಾಥ ಮಂದಿರದ 2ನೇ ವಾರ್ಷಿಕೋತ್ಸವ, ಬೆಳಗ್ಗೆ 9 ರಿಂದ ಪೂಜೆ, ಅಭಿಷೇಕ, ಯಜ್ಞ, ಪೂರ್ಣಾಹುತಿ, ಪ್ರಸಾದ ಸೇವೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಥಳ: ಜಗನ್ನಾಥ ಮಂದಿರ, ವಿದ್ಯಾರಣ್ಯಪುರಂ.
- **ಮೈಸೂರು ನಗರ ಮತ್ತು ಜಿಲ್ಲಾ ಯಾದವ (ಗೊಲ್ಲ) ಯುವ ಸಂಘ :** 41ನೇ ವರ್ಷದ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮ, ಬೆಳಗ್ಗೆ 8ಕ್ಕೆ ವಿಶೇಷ ಗೋಪೂಜೆ, ಬೆಳಗ್ಗೆ 9ಕ್ಕೆ ಪ್ರಸಾದ ವಿತರಣೆ, ಸಂಜೆ 7ಕ್ಕೆ ಶ್ರೀಮತಿ ಆಶಾ ಮತ್ತು ತಂಡ, ಲಕ್ಷ್ಮಿಕಾಂತ ಭಜನಾ ಮಂಡಳಿ ಅವರಿಂದ ದೇವರನಾಮ ಮತ್ತು ಭಕ್ತಿಗೀತೆಗಳ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಹೋಟೆಲ್ ಮಹಾರಾಜ ಮಾಲೀಕ ಆನಂದಪ್ಪ, ಕೆಎಸ್‌ಆರ್‌ಟಿಸಿ ನಿವೃತ್ತ ಡಿಪೋ ಮ್ಯಾನೇಜರ್ ವೆಂಕಟರಮಣಯ್ಯ, ಸ್ಥಳ: ಶ್ರೀ ನಂಜುಂಡೇಶ್ವರ ದೇವಸ್ಥಾನ, ಗೊಲ್ಲಗೇರಿ.
- **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ ಮತ್ತು ಶ್ರೀ ಕೃಷ್ಣ ಗಾನಸಭಾ :** ಶ್ರೀ ಕೃಷ್ಣ ಜನ್ಮಾಷ್ಟಮಿ ಪೂಜಾ ಕಾರ್ಯಕ್ರಮಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 9.30ಕ್ಕೆ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಅಮೃತ ಕಲಶಾಭಿಷೇಕ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ವನಪನಮೂರ್ತಿಗೆ ಅಭಿಷೇಕ, ಫಲಪುಷ್ಪಾಲಂಕಾರ, ಸ್ಥಳ: ಆಳ್ವಾರ್ ಕಲಾ ಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ 3ನೇ ಹಂತ.
- **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್ :** ಎಂ.ಎಲ್. ಪವನ್‌ಕುಮಾರ್ ಅವರಿಂದ ಸ್ಥಿರ ಚಿತ್ರಣ ಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.
- **ಕನ್ನಡಾಂಬೆ ರಕ್ಷಣಾ ವೇದಿಕೆ :** ಶಿಕ್ಷಕರ ದಿನಾಚರಣೆ ಅಂಗವಾಗಿ ಶಿಕ್ಷಕರಿಗೆ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಸ್ವಾಮಿ, ಮುಖ್ಯ ಅತಿಥಿಗಳು : ಸಾಹಿತಿ ಬನ್ನೂರು ಕೆ. ರಾಜು, ಸ್ಥಳ: ಇಲವಾಲ ಪ್ರೌಢಶಾಲೆ ಆವರಣ, ಬೆಳಗ್ಗೆ 10ಕ್ಕೆ.
- **ಮೈಸೂರು ಜಿಲ್ಲಾ ಪ.ಜಾ., ಪ.ಪಂ. ಉದ್ಯಮಿದಾರರ ಸಂಘ, ಮೈಸೂರು ಚಾಮರಾಜನಗರ ಮತ್ತು ಕೊಡಗು ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕೈಗಾರಿಕೋದ್ಯಮಿಗಳ ಸಂಘ, ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ :** ಕೈಗಾರಿಕೋದ್ಯಮಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಪ.ಜಾ., ಪ.ಪಂ. ಉದ್ಯಮಿದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಉಪಸ್ಥಿತರು: ವಿ.ಸುರೇಶ್‌ಬಾಬು, ಕೋಕಿಲ, ವಿಜಯಶಂಕರ್, ಆರ್.ಮೂರ್ತಿ, ಸ್ಥಳ: ರೋಟರಿ ಚಿಲ್ಡ್ರನ್ ಸ್ಕೂಲ್ ಸಭಾಂಗಣ, ಐಡಿಯಲ್ ಜಾವಾ ರೋಟರಿ ಸ್ಕೂಲ್, ಬೆಳಗ್ಗೆ 10.30ಕ್ಕೆ.
- **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ :** ದತ್ತಿ ಉಪನ್ಯಾಸ ಕಾರ್ಯಕ್ರಮ, ವಚನ–ವಾಚನ–ವ್ಯಾಖ್ಯಾನ ಸ್ಪರ್ಧೆ, ಉದ್ಘಾಟನೆ : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎಸ್.ಚಂದ್ರಶೇಖರ್, ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ ಅವರಿಂದ ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ಶೈಕ್ಷಣಿಕ ಸಲಹೆಗಾರ ಡಾ. ಷಣ್ಮುಖ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದ ಸಂಸ್ಕೃತಿ–ಪ್ರಸ್ತುತಿ–ಪ್ರೊ.ಲಕ್ಷ್ಮೀನಾರಾಯಣ ಅರೋರಾ, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಕೃಷ್ಣಜನ್ಮಾಷ್ಟಮಿ ಪ್ರಯುಕ್ತ ಕೃಷ್ಣನನ್ನು ಕುರಿತ ಹಾಡುಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಎ.ಎನ್.ಶೀಲಾ, 1.20 ಭಾವಗೀತೆ–ಸಿ.ಶಶಿಕಲಾ ಚಂದ್ರಶೇಖರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ–ನಿಂಗಶೆಟ್ಟಿ ಮತ್ತು ಸಂಗಡಿಗರು, 4.30 ಹಿರಿಯರಾದ ಸಿ.ಎಸ್.ಶಾನ್‌ಭೋಗ್ ಹಾಗೂ ಅವರ ಮಡದಿ ಜಯಂತಿ ಎನ್. ಶಾನ್‌ಭೋಗ್ ಅವರ ಜೀವನಾನುಭವ ಕುರಿತು ಆತ್ಮೀಯ ಮಾತುಕತೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಮೀನುಗಾರಿಕಾ ಇಲಾಖೆಯಿಂದ ರೈತರಿಗೆ ದೊರೆಯುವ ಸೌಲಭ್ಯಗಳನ್ನು ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಆರ್.ಗಣೇಶ್, 7.45 ಭಾರತದ ಬದುಕಿಗೆ ಅಮೇರಿಕೆಯ ಮಾದರಿಗಳು ಕುರಿತು ಡಾ. ಬಿ.ಎನ್. ಜಯರಾಂ ಅವರೊಂದಿಗೆ ಸಂದರ್ಶನ. ಸಂದರ್ಶಕರು–ದಿವಾಕರ ಹೆಗಡೆ, 8.00 ಯುವವಾಣಿ, 10.00 ನಾಟಕ "ಆ ಒಂದು ಇರುಳಿನಲಿ"–ಹ್ಯೂ ಬೆರ್ಸ್ ಫೋರ್ಡ್ ಅವರ The Man Upstairs ಇಂಗ್ಲೀಷ್ ಏಕಾಂಕ ಪ್ರೇರಿತ, ರಚನೆ–ವಿ.ಜಯಪ್ರಕಾಶ್, ನಿರ್ಮಾಣ–ಎಸ್.ಎಸ್.ಉಮೇಶ್

- **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ :** ಮಧ್ಯಾಹ್ನ 1ರಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮಕ್ಕಳಿಗೆ ರಾಧಾ, ಕೃಷ್ಣ ಹಾಗೂ ಬಲರಾಮ ವೇಷಭೂಷಣ ಸ್ಪರ್ಧೆ, ಸಂಜೆ 4ಕ್ಕೆ ರಾಜಬೀದಿಗಳಲ್ಲಿ ಶ್ರೀಕೃಷ್ಣನ ಮೆರವಣಿಗೆ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ.
- **ಅಧಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ, ಮೈಸೂರು ಜಿಲ್ಲಾ ಘಟಕ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ :** ಏಕರೂಪ ನಾಗರೀಕ ಸಂಹಿತೆ–ಸಂವಾದ ಹಾಗೂ ಅಧಿವಕ್ತಾ ಪರಿಷತ್ ಸಂಸ್ಥಾಪನಾ ದಿನಾಚರಣೆ, ಅಧ್ಯಕ್ಷತೆ : ಅಧಿವಕ್ತಾ ಪರಿಷತ್ ಅಧ್ಯಕ್ಷರಾದ ಶ್ರೀಮತಿ ವಿ. ಶಾರದ, ಮುಖ್ಯ ಅತಿಥಿಗಳು : ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ರವಿಕುಮಾರ್, ಉಪಸ್ಥಿತರು : ಹಿರಿಯ ವಕೀಲ ಓ.ಶ್ಯಾಂ ಭಟ್, ಪ್ರಧಾನ ಕಾರ್ಯದರ್ಶಿ ಎಂ.ಎಸ್. ಪಣಿಚೇತನ್, ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಜಯನಗರ, ಸಂಜೆ 5ಕ್ಕೆ.
- **ಮೈಸೂರು ಯೂನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್:** ಪ್ರಥಮ ವರ್ಷದ ಬಿ.ಇ. ವಿದ್ಯಾರ್ಥಿಗಳ ಸೇರ್ಪಡೆ, ಸ್ಥಳ: ಇಂಜಿನಿಯರಿಂಗ್ ಕಾಲೇಜು ಆವರಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ವೇದಶ್ರೀ ಫೌಂಡೇಶನ್ :** ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಮಕ್ಕಳಿಗೆ ವೇಷಭೂಷಣ ಸ್ಪರ್ಧೆ, ಭಗವದ್ಗೀತೆ ಶ್ಲೋಕ ಪಠಣ ಸ್ಪರ್ಧೆ, ನೃತ್ಯ ಮತ್ತು ನಾಟಕ, ನೃತ್ಯಗಾರ ಮಿತ್ರ ನವೀನ್ ತಂಡದವರಿಂದ ನೃತ್ಯರೂಪಕ, ಸ್ಥಳ: ದಿವ್ಯರೂಪ ಕಲ್ಯಾಣ ಮಂಟಪ, ವಿಜಯನಗರ 2ನೇ ಹಂತ, ಸಂಜೆ 5.30 ರಿಂದ.
- **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** 56ನೇ ಇಂಜಿನಿಯರ್ಸ್ ಡೇ ಮತ್ತು ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ ಅಂಗವಾಗಿ ತಾಂತ್ರಿಕ ವಿಚಾರ ಸಂಕಿರಣ, ಪ್ರಾಸ್ತಾವಿಕ ನುಡಿ : ಎನ್‌ಐಇ ನಿವೃತ್ತ ಪ್ರಾಚಾರ್ಯ ಡಾ. ಎನ್. ಸುರೇಶ್, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಸಂಜೆ 5.30ಕ್ಕೆ.
- **ಸಂಸ್ಕೃತ ಭಾರತೀ, ವಿದ್ವಾನ್ ಟಿ.ನಾರಾಯಣಶಾಸ್ತ್ರಿ ಪ್ರತಿಷ್ಠಾನ:** ಸಂಸ್ಕೃತ ಸಪ್ತಾಹ, ಸಂಜೆ 5.30 ರಿಂದ ಸಂಸ್ಕೃತ ಗಾನಲಹರಿ, ಸಂಜೆ 6 ರಿಂದ ಡಾ. ಕೃಷ್ಣ ನಾಗಸಂಪಿಗೆ ಅವರಿಂದ ಹಸ್ತಪ್ರತಿಗಳಲ್ಲಿ ಅಡಗಿದೆ ಭಾರತೀಯ ಜ್ಞಾನನಿಧಿ ಕುರಿತು ಪ್ರವಚನ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಶಾಲೆ, ಲಕ್ಷ್ಮಿಪುರಂ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಚಿನ್ಮಯ ಮಿಷನ್, ಸಂಜೆ 6ಕ್ಕೆ
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ ಕುರಿತು ಉಪನ್ಯಾಸ, ನಿವೃತ್ತ ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕೃ. ರಾಮಚಂದ್ರ ಅವರಿಂದ ವಾಚನ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ

ಶ್ರೀಕೃಷ್ಣ ಅನಂತತೆಯ ಸಂಕೇತ

ಸಂಸ್ಕೃತ ಸಪ್ತಾಹ ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ವಾಂಸ ಯೋಗಾಚಾರ್ಯ ರಾಕೇಶ್ ಬಣ್ಣನೆ



ಮೈಸೂರಿನ ಲಕ್ಷ್ಮೀಪುರಂನ ಗೋಪಾಲಸ್ವಾಮಿ ಶಿಶು ವಿಹಾರ ಶಾಲೆ ಸಭಾಂಗಣ ದಲ್ಲಿ ಹಮ್ಮಿಕೊಂಡಿರುವ ಸಂಸ್ಕೃತ ಸಪ್ತಾಹದಲ್ಲಿ 'ಶತಾಲಂಕಾರ ಕೃಷ್ಣ ಶತಕಂ' ಸಂಸ್ಕೃತ ಕಾವ್ಯ ಕುರಿತು ಯೋಗ ಮತ್ತು ಸಂಸ್ಕೃತ ವಿದ್ವಾಂಸ ಯೋಗಾ ಚಾರ್ಯ ರಾಕೇಶ್ ಉಪನ್ಯಾಸ ನೀಡಿದರು.

ಮೈಸೂರು,ಸೆ.6(ಪಿಎಂ)–ಶ್ರೀಕೃಷ್ಣ ಕೇವಲ ಒಂದು ವ್ಯಕ್ತಿ ಸ್ವರೂಪವಲ್ಲ. ಕೃಷ್ಣ ನಿಗೆ ಆದಿ ಮತ್ತು ಅಂತ್ಯವಿಲ್ಲವಾಗಿದ್ದು, ಕೃಷ್ಣ ಅನಂತತೆಯ ಸಂಕೇತ ಎಂದು ಯೋಗ ಮತ್ತು ಸಂಸ್ಕೃತ ವಿದ್ವಾಂಸ ಯೋಗಾ ಚಾರ್ಯ ರಾಕೇಶ್ ಬಣ್ಣಿಸಿದರು.

ಮೈಸೂರಿನ ಲಕ್ಷ್ಮೀಪುರಂನ ಗೋಪಾಲ ಸ್ವಾಮಿ ಶಿಶುವಿಹಾರ ಶಾಲೆ ಸಭಾಂಗಣ ದಲ್ಲಿ ಸಂಸ್ಕೃತ ಭಾರತೀ ಮೈಸೂರು ಮತ್ತು ವಿದ್ವಾನ್ ಟಿ.ನಾರಾಯಣಶಾಸ್ತ್ರೀ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ಸಂಸ್ಕೃತ ಸಪ್ತಾಹದಲ್ಲಿ ಬುಧವಾರ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್ ಅವರ 'ಶತಾಲಂಕಾರ ಕೃಷ್ಣ ಶತಕಂ' ಸಂಸ್ಕೃತ ಕಾವ್ಯದ ಪಕ್ಷಿನೋಟವನ್ನು ಅವರು ನೀಡಿದರು.

'ಶತಾಲಂಕಾರ ಕೃಷ್ಣ ಶತಕಂ' ಸಂಸ್ಕೃತ ಕಾವ್ಯದಲ್ಲಿ ಶ್ರೀಕೃಷ್ಣನ ಮೇರು ವ್ಯಕ್ತಿತ್ವವನ್ನು ವರ್ಣಿಸಲಾಗಿದೆ. ಲೇಖಕರು ಕೃಷ್ಣನಿಗೆ ಕೃಷ್ಣನೇ ಸಾಟಿ ಎಂಬುದನ್ನು ಅಲಂಕಾರ ರೂಪದಲ್ಲಿ ಉಲ್ಲೇಖಿಸಿದ್ದಾರೆ. ಕೃಷ್ಣನನ್ನು ಮತ್ತೊಂದು ದೇವರಿಗೆ ಹೋಲಿಸಲು ಸಾಧ್ಯವಿಲ್ಲ. ಏಕೆಂದರೆ ಕೃಷ್ಣ ಅಷ್ಟು ವೈವಿಧ್ಯಮಯ. ಅದನ್ನೇ ಲೇಖಕರು ಪ್ರತಿ ಪಾದಿಸಿದ್ದಾರೆ ಎಂದರು.

ಲೌಕಿಕ ಜೀವನದಲ್ಲೂ ಒಬ್ಬ ವ್ಯಕ್ತಿಯ ಗುಣವನ್ನು ಇನ್ನೊಂದಕ್ಕೆ ಹೋಲಿಸಿ ಗುಣ ಗಾನ ಮಾಡುವುದುಂಟು. ಪರ್ವತದಷ್ಟು ಘನತೆ ಉಳ್ಳವರು, ಸ್ಥಿರತೆಯುಳ್ಳವರು ಎಂದು ವರ್ಣಿಸುತ್ತೇವೆ. ಆದರೆ ಇಲ್ಲಿನ ಅಲಂ ಕಾರದ ವಿಶೇಷವೆಂದರೆ ಕೃಷ್ಣನಷ್ಟು ಸ್ಥಿರತೆ ಯಂತೆ ಪರ್ವತವಿದೆ ಎಂದು ಬಣ್ಣಿಸ ಲಾಗಿದೆ. ಈ ಕಾವ್ಯದಲ್ಲಿ ಲೇಖಕರು 100 ವಿಶೇಷ ಅಲಂಕಾರಗಳನ್ನು ಆಯ್ಕೆ ಮಾಡಿ ಆ ಮೂಲಕ ಶ್ರೀಕೃಷ್ಣನ ಸ್ತುತಿ ಮಾಡಿ ದ್ದಾರೆ. ಇಲ್ಲಿ ಸ್ತುತಿ, ಶ್ಲೋಕ ಮತ್ತು ಅಲಂ ಕಾರ ಎಲ್ಲವೂ ಒಮ್ಮೆಗೆ ಮೇಳೈಸಿದ್ದು, ಇಂತಹ ಅವಕಾಶ ಕೇವಲ ಸಂಸ್ಕೃತ ಭಾಷೆಯಲ್ಲಿ ಮಾತ್ರವೇ ಸಾಧ್ಯ ಎಂದು ಪ್ರತಿಪಾದಿಸಿದರು.

ಸಂಸ್ಕೃತ ಭಾಷೆ ಕೇವಲ ಒಂದು ಉದ್ದೇಶಕ್ಕೆ ಮಾತ್ರ ಬಳಕೆಯಾಗುವುದಿಲ್ಲ. ಸಂವಹನದ ಜೊತೆಗೆ ನಾಲ್ಕಾರು ಅಂಶ ಗಳನ್ನು ಒಳಗೊಂಡಿರುವುದು ಈ ಭಾಷೆಯ ವೈಶಿಷ್ಟ್ಯ. ಅಲಂಕಾರ ಕಲಿಯಬೇಕೆಂದರೆ ಅದೂ ಆಗಬಹುದು. ಅಥವಾ ಶ್ರೀಕೃಷ್ಣ ಸ್ತುತಿ ಆಗಬೇಕೆಂದರೆ ಅದಕ್ಕೂ ಅವಕಾಶ ವಿದೆ. ಸಂಸ್ಕೃತದ ಶ್ಲೋಕ ಕಲಿಯಬೇಕೆಂ ದರೂ ಸಾಧ್ಯವಾಗಲಿದೆ. ಸಂಸ್ಕೃತ ಭಾಷೆ ಯಲ್ಲಿ ಮಾತ್ರವೇ ಇಂತಹ ವಿಶೇಷತೆ ಇದೆ ಎಂದು ಹೇಳಿದರು.

ಇದಕ್ಕೂ ಮುನ್ನ ವಿದುಷಿ ಧರಿತ್ರಿ ಆನಂದರಾವ್ ಗಮಕವಾಚನ ನಡೆಸಿ ಕೊಟ್ಟರು. ಸೆ.1ರಿಂದ ಈ ಸಂಸ್ಕೃತ ಸಪ್ತಾಹ ನಡೆಯುತ್ತಿದ್ದು, ಕೊನೆ ದಿನವಾದ ನಾಳೆ (ಸೆ.7) 'ಹಸ್ತಪತ್ರಿಗಳಲ್ಲಿ ಅಡಗಿದೆ ಭಾರ ತೀಯ ಜ್ಞಾನನಿಧಿ' ಕುರಿತು ಡಾ.ಕೃಷ್ಣ ನಾಗಸಂಪಿಗೆ ಉಪನ್ಯಾಸ ನೀಡಲಿದ್ದಾರೆ.

ಸಪ್ತಾಹದ ವಿಷಯಗಳು ಸಂಸ್ಕೃತ ಭಾಷೆ ಯದ್ದೇ ಆದರೂ ಉಪನ್ಯಾಸ ಬಹುತೇಕ ಕನ್ನಡದಲ್ಲಿ ಮಾಡಲಾಗುತ್ತಿದೆ ಎಂದು ಸಂಸ್ಕೃತ ಭಾರತೀ ಮೈಸೂರು ಸಂಚಾಲಕ ಗಣೇಶ್ ದತ್ತ ಇದೇ ವೇಳೆ ತಿಳಿಸಿದರು.

ಸಪ್ತಾಹದಲ್ಲಿ ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್, ಉನ್ನತ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕ ಪ್ರೊ. ಟಿ.ಎನ್.ಪ್ರಭಾಕರ್, ನಿವೃತ್ತ ಪ್ರಾಂಶು ಪಾಲೆ ನೀಲಾಂಬಿಕಾ, ವಿದ್ವಾನ್ ಟಿ.ನಾರಾ ಯಣಶಾಸ್ತ್ರೀ ಪ್ರತಿಷ್ಠಾನದ ಸಂಚಾಲಕಿ ಸೌಧಾಮನಿ ಮತ್ತಿತರರು ಹಾಜರಿದ್ದರು.

ರಾಜಕಾರಣಿಗಳು ಶ್ರೀಕೃಷ್ಣನ ಗೀತಸಾರ ಅರಿತರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ

● ಉಪಮೇಯರ್ ಡಾ.ಜಿ.ರೂಪ ಅಭಿಮತ ● ಮೈಸೂರಲ್ಲಿ ಭಕ್ತಿ ಭಾವದ ಶ್ರೀಕೃಷ್ಣ ಜಯಂತಿ ಆಚರಣೆ



ಮೈಸೂರು, ಸೆ.6(ಎಂಟಿವೈ)– ಶ್ರೀ ಕೃಷ್ಣನ ಗೀತಸಾರ ವನ್ನು ರಾಜಕಾರಣಿಗಳು ಅರಿತುಕೊಳ್ಳುವುದರೊಂದಿಗೆ ರಾಜಕಾರಣದಲ್ಲಿಯೂ ಕೃಷ್ಣನ ಸಂದೇಶಗಳು ಮೇಳೈಸಿ ದಾಗ ಮಾತ್ರ ಉತ್ತಮ ಸಮಾಜ ಕಟ್ಟಲು ಸಾಧ್ಯ ಎಂದು ಉಪಮೇಯರ್ ಡಾ.ಜಿ.ರೂಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರ ದಲ್ಲಿ ಬುಧವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಾಭಾರತದಲ್ಲಿ ನಡೆದ ಭೀಕರ ಕುರುಕ್ಷೇತ್ರ ಯುದ್ಧ ತಪ್ಪಿಸಲು ಶ್ರೀಕೃಷ್ಣ ಸಾಕಷ್ಟು ಪ್ರಯತ್ನ ಮಾಡಿದ. ಆದರೆ, ಕೃಷ್ಣನ ಸಲಹೆ ಸ್ವೀಕರಿಸದ ಕಾರಣ ಯುದ್ಧ ಸಂಭವಿ ಸಿತು. ಕೃಷ್ಣನಿಗೆ ಅಪಾರವಾದ ಸಾಮಾಜಿಕ ಕಾಳಜಿ ಇತ್ತು. ಇಂದಿಗೂ ಕೃಷ್ಣನ ಗೀತಸಾರವನ್ನು ಹಲವಾರು ರಾಜ ಕಾರಣಿಗಳು ಸ್ಫೂರ್ತಿಯಾಗಿ ಸ್ವೀಕರಿಸುತ್ತಾರೆ. ಆದ್ದರಿಂದ ಕೃಷ್ಣನ ತತ್ವಗಳು ರಾಜಕೀಯದಲ್ಲಿ ಹೆಚ್ಚು ಅನುಕರಣೀಸ ಬೇಕು. ಅಧ್ಯಾತ್ಮಿಕ ಚಿಂತನೆಗಳನ್ನು ಮೈಗೂಡಿಸಿಕೊಂ ಡಿದ್ದ ಅಂದಿನ ರಾಜಮಹಾರಾಜರು ಜನರ ಸಂಕಷ್ಟಕ್ಕೆ ಸ್ಪಂದಿಸುತ್ತಿದ್ದರು ಎಂದು ತಿಳಿಸಿದರು.

ಕೃಷ್ಣನಿಗೆ ಬೆಣ್ಣೆ ಗೋಪಿಕೆಯರು, ಕೊಳಲು ಈ ಮೂರು ಪ್ರಿಯವಾದುದಾಗಿದ್ದರೂ, ಹೆಚ್ಚು ಆತ್ಮೀಯ ಬಾಂಧವ್ಯ ಇದ್ದದ್ದು ರಾಧೆಯೊಂದಿಗೆ ಮಾತ್ರ ಆದ್ದರಿಂದ ರಾಧಕೃಷ್ಣ ಎಂದು ಹೇಳುವ ಪರಿಪಾಠ ಇಂದಿಗೂ ಇದೆ. ಜೀವನ ನೀರಿನಂತೆ, ಅದು ನಿಲ್ಲದೇ ಮುಂದೆ ಸಾಗಬೇಕು ಎಂದು ಶ್ರೀಕೃಷ್ಣನ ಮಾತುಗಳು ಪ್ರತಿಯೊಬ್ಬರಿಗೂ ಸ್ಫೂರ್ತಿ ದಾಯಕ. ಗೀತೆಯ ಸಾರವನ್ನು ತಿಳಿದುಕೊಂಡರೆ ಬದುಕಿ ನಲ್ಲಿ ಸಂಭವಿಸುವಂತಹ ಹಲವಾರು ಸವಾಲುಗಳನ್ನು ಧೈರ್ಯದಿಂದ ಎದುರಿಸಬಹುದು. ಇಂದಿನ ತಲೆಮಾರಿನ ಮಕ್ಕಳಿಗೆ ಗೀತೆಯ ಸಾರವನ್ನು ಹೆಚ್ಚು ಬೋಧಿಸಬೇಕು. ಮನುಷ್ಯ ಜೀವನದಲ್ಲಿ ಹಲವಾರು ಏಳುಬೀಳು ಎದು ರಾಗುವುದು ಸಹಜ. ಆದರೆ, ಇಂತಹ ಕಷ್ಟಗಳಿಗೆ ಹೆದರದೆ ಸಮಸ್ಯೆಗಳನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಭಗವದ್ಗೀತೆಯಲ್ಲಿ ಕೃಷ್ಣ ಹೇಳಿದ್ದಾನೆ. ಗೀತಾ ಸಾರವನ್ನು ಚಿಕ್ಕವರಿದ್ದಾಗಲೇ ತಿಳಿದುಕೊಳ್ಳುವುದರಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಮಾತ ನಾಡಿ, ಶ್ರೀ ಕೃಷ್ಣ ಭಾರತೀಯ ಸಂಸ್ಕೃತಿಯಲ್ಲಿ ಬೆರೆತಿರುವ ಶಕ್ತಿ. ಜಾತಿ, ಗಡಿ ಮೀರಿದ ಸಂಬಂಧವನ್ನು ಹೊಂದಿದ್ದಾನೆ. ಕೃಷ್ಣ ಮಾನವೀಯ ನೆಲೆಯ ಸಂಕೇತ. ತುಂಟತನ ಮಕ್ಕಳ ಹಕ್ಕು ಎಂಬುದನ್ನು ಜಗತ್ತಿಗೆ ತಿಳಿಸಿದವನು. ಗೋಪಿಕೆ ಯರ ಜೊತೆ ತುಂಟತನ ಮಾಡಿದರೂ ವರ್ಷಗಳು ಕಳೆ ದಂತೆ ಅವನಲ್ಲಿ ಹೆಚ್ಚು ಅನು ಭೂತಿಯಾಗಿ ಕಾಣುತ್ತದೆ. ಪ್ರಕೃತಿ ನಿಯಮದಂತೆ ಕೆಟ್ಟದ್ದು, ಒಳ್ಳೆಯದು ಇದ್ದರೂ ಒಳ್ಳೆಯ ತನಕ್ಕೆ ಎಂದೂ ಜಯ ಇರುತ್ತದೆ ಎಂದು ಜಗತ್ತಿಗೆ ಸಾರಿ ಹೇಳಿದ್ದಾನೆ.



ಭಗವದ್ಗೀತೆಯ ಸಾರವನ್ನು ಎಲ್ಲರೂ ತಪಸ್ಸು ಮಾಡಿ ಕಂಡುಕೊಂಡಿದ್ದಾರೆ. ಅಧರ್ಮ ಇದ್ದಲ್ಲಿ ಸತ್ಯದ ಅನ್ವೇಷಣೆ ಆಗು ತ್ತದೆ. ಆದ್ದರಿಂದ ಅನುಭೂತಿ ಕಡೆ ಜನರು ಸಾಗಬೇಕು. ಕೃಷ್ಣ ಇಡೀ ಪ್ರಪಂಚದಲ್ಲೇ ಭಾರತದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾನೆ. ಅವರ ಆದರ್ಶ ಗಳನ್ನು ಎಲ್ಲರೂ ಪಾಲಿಸಬೇಕು ಎಂದರು.

ಇದಕ್ಕೂ ಮುನ್ನ ವಿದ್ಯಾರ್ಥಿನಿ ಕುಮಾರಿ ತುಷಾರ ಯಾದವ್ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಿತು. ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ವಾಂಸ ಅನಂತಕೃಷ್ಣ ಜೋಯಿಷ್ ಮುಖ್ಯಭಾಷಣ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂಡಿ.ಸುದರ್ಶನ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜ್, ಪಾಲಿಕೆ ಮಾಜಿ ಸದಸ್ಯ ನಾಗಭೂಷಣ್, ಮಾಜಿ ಉಪಮೇಯರ್ ಪುಷ್ಪವಲ್ಲಿ, ವೆಂಕಟಾಚಲ, ಆನಂದಪ್ಪ, ವೆಂಕಟರಮಣ, ಯೋಗೇಶ್ ಯಾದವ್ ಇದ್ದರು.

ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ

ಮೈಸೂರು,ಸೆ.6–ಮೈಸೂರಿನ ರಾಮ ಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಭಗವಾನ್ ಶ್ರೀ ಕೃಷ್ಣ ನಿಗೆ ಭಕ್ತಿಪೂರ್ವಕವಾಗಿ ಆರತಿಯನ್ನು ಬೆಳಗಿ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮವು ಆರಂಭವಾಯಿತು.

ನರ್ಸರಿ ಮಕ್ಕಳು ಶ್ರೀ ಕೃಷ್ಣನ ಪ್ರಾರ್ಥನೆ ಯನ್ನು ಸುಮಧುರವಾಗಿ ಹಾಡಿದರು. ಅನಂತರ ಎಲ್ಲಾ ಮಕ್ಕಳು ಭಗವದ್ಗೀತಾ ಜ್ಞಾನ ಶ್ಲೋಕವನ್ನು ಪಠಣ ಮಾಡಿದರು. ಅನಂತರ ನರ್ಸರಿ ಮುದ್ದು ಕೃಷ್ಣ ವೇಷ ಧಾರಿಗಳು "ರಾಧೆ ರಾಧೆ ರಾಧೆ ರಾಧೆ ರಾಧೆ ಗೋವಿಂದ" ಶ್ರೀ ಕೃಷ್ಣನ ಭಜನೆ ಯನ್ನು ಸುಶ್ರಾವ್ಯವಾಗಿ ಹಾಡಿದರು.



ನಂತರ ಕೃಷ್ಣ ಜನ್ಮಾಷ್ಟಾಮಿ ಪ್ರಯುಕ್ತ ಇಸ್ಕಾನ್‌ನಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು. ನಂತರದಲ್ಲಿ ಬಾಲ ಶ್ರೀಕೃಷ್ಣ ವೇಷಧಾರಿಗಳು ಕೋಲಾಟ ನೃತ್ಯ ವನ್ನು ಪ್ರದರ್ಶಿಸಿದರು. ಕೊನೆಯಲ್ಲಿ ಈ ಎಲ್ಲಾ ಮಕ್ಕಳಿಗೆ ಮತ್ತು ಶಾಲಾ ವತಿ ಯಿಂದ ಬಾಲಕೃಷ್ಣನ ಮೂರ್ತಿಯನ್ನು ನೆನಪಿನ ಕಾಣಿಕೆಯಾಗಿ ನೀಡಲಾಯಿತು.

ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯನಿರ್ವಾಹಕ ಅಧಿಕಾರಿ ಜಿ.ಚಂದ್ರಶೇಖರ್, ರಾಮಕೃಷ್ಣ ವಿದ್ಯಾಕೇಂದ್ರದ ಪ್ರೌಢಶಾಲಾ ಮುಖ್ಯೋ ಪಾಧ್ಯಾಯ ಜಿ.ಎನ್.ವಿಶ್ವನಾಥ್ ಮತ್ತು ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾ ಯಿನಿ ವೀಣಾ ಕೆ.ಹೆಗಡೆ ಹಾಗೂ ಶಾಲೆ ವಿದ್ಯಾರ್ಥಿಗಳು, ಶಿಕ್ಷಕ–ಶಿಕ್ಷಕೇತರರು ಹಾಗೂ ಪೋಷಕರು ಭಾಗವಹಿಸಿದ್ದರು.



ಬೆಂಗಳೂರು ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಹಾಗೂ ಮೈಸೂರು ವಾಣಿಜ್ಯ ಮತ್ತು ಕೈಗಾರಿಕ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಅಧ್ಯಕ್ಷತೆಯಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ವೈಸ್‌ನ ಪದಾಧಿಕಾರಿಗಳು ರಾಯಚೂರಿನಲ್ಲಿ ಇತ್ತೀಚೆಗೆ ನಡೆದ ರಾಜ್ಯ ಮಟ್ಟದ ಕೈಗಾರಿಕಾ ಮತ್ತು ವಾಣಿಜ್ಯ ಸಮ್ಮೇಳನದಲ್ಲಿ ಭಾಗವಹಿಸಿ, ಕೈಗಾರಿಕಾ ಮತ್ತು ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಹಲವಾರು ವಿಚಾರಗಳನ್ನು ಚರ್ಚಿಸಿದರು.

'ಕೃಷ್ಣನ ಕರೆ' ಬೃಹತ್ ಸಾಮೂಹಿಕ ಶ್ರೀಮದ್ ಭಗವದ್ಗೀತೆ ಪಠಣ

ಮೈಸೂರು,ಸೆ.6–ಮೈಸೂರು ಧಾರ್ಮಿಕ ಪ್ರತಿಷ್ಠಾನವು ಗೀತಾ ಜಯಂತಿ ಪ್ರಯುಕ್ತ ಡಿ.24ರಂದು ಬೃಹತ್ ಸಾಮೂಹಿಕ ಶ್ರೀಮದ್ ಭಗವದ್ಗೀತೆ ಪಠಣ ಕಾರ್ಯ ಕ್ರಮವನ್ನು ಹಮ್ಮಿಕೊಂಡಿದೆ.

ಈ 'ಕೃಷ್ಣನ ಕರೆ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿನ ಎಲ್ಲಾ ಆಸಕ್ತ ನಾಗರಿಕರ ಜೊತೆ, ಶಾಲಾ ಕಾಲೇಜುಗಳು, ಭಜನಾ ಮಂಡಳಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳನ್ನು ಆಹ್ವಾನಿಸಲಾಗಿದೆ. ಇಂತಹ ಬೃಹತ್ ಭಗವದ್ಗೀತಾ ಕಾರ್ಯ ಕ್ರಮವನ್ನು ಇದೇ ಮೊದಲ ಬಾರಿಗೆ ಮೈಸೂ ರಿನಲ್ಲಿ ಆಯೋಜಿಸುತ್ತಿದ್ದು ಆಸಕ್ತರು 8217648394 ಕ್ಕೆ ವಾಟ್ಸಾಪ್ ಸಂದೇಶ ಕಳುಹಿಸುವುದರ ಮೂಲಕ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು.



ಮೈಸೂರು ಜಿಲ್ಲೆಯಾದ್ಯಂತ ಸರಿ ಸುಮಾರು 5000 ಮನೆಗಳು ಮಳೆ ಯಿಂದ ಹಾನಿಗೀಡಾಗಿದ್ದು, 3879 ಫಲಾನುಭವಿಗಳಿಗೆ ಮನೆ ಮಂಜೂ ರಾಗಿದೆ. ಉಳಿದ 1119 ಫಲಾನುಭವಿ ಗಳಿಗೆ ಮಂಜೂರಾತಿ ನೀಡಬೇಕೆಂದು ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಗೆ ಜನಧ್ವನಿ ಫೌಂಡೇಶನ್‌ನಿಂದ ಮನವಿ ಸಲ್ಲಿಸಲಾಯಿತು. ಈ ವೇಳೆ ಫೌಂಡೇಶನ್ ಅಧ್ಯಕ್ಷ ಆಯರಹಳ್ಳಿ ಪ್ರವೀಣ್, ಬಿಳಿಕೆರೆ ಗ್ರಾಪಂ ಸದಸ್ಯರಾದ ಮಂಜು, ವಕೀಲರಾದ ಸುನೀಲ್, ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

ಆಕ್ಸಿಡೆಂಟ್ ನೆಪದಲ್ಲಿ ಬೆದರಿಸಿ ನಿವೃತ್ತ ಪೊಲೀಸ್ ಅಧಿಕಾರಿಯಿಂದಲೇ 40,000 ರೂ. ಸುಲಿಗೆ

ಮೈಸೂರಿನ ಕುವೆಂಪುನಗರದಲ್ಲಿ ಶನಿವಾರ ಬೆಳಗ್ಗೆ ಕೃತ್ಯ

ಮೈಸೂರು,ಸೆ.6(ಆರ್‌ಕೆ)– ಆಕ್ಸಿ ಡೆಂಟ್ ಮಾಡಿ ಪರಾರಿಯಾಗುತ್ತಿದ್ದೀರಿ ಎಂದು ಧಮ್ಕಿ ಹಾಕಿದ ಯುವಕ ನೋರ್ವ, ಮಾಜಿ ಸೈನಿಕರೂ ಆದ ನಿವೃತ್ತ ಪೊಲೀಸ್ ಅಧಿಕಾರಿಯಿಂದ 40,000 ರೂ. ಹಣ ಕಿತ್ತು ಪರಾರಿ ಯಾಗಿರುವ ಘಟನೆ, ಕಳೆದ ಶನಿವಾರ ಹಾಡಹಗಲೇ ಮೈಸೂರಿನ ಕುವೆಂಪು ನಗರದಲ್ಲಿ ಸಂಭವಿಸಿದೆ.

ಮೈಸೂರಿನ ಕುವೆಂಪುನಗರ ಎಂ ಬ್ಲಾಕ್ ನಿವಾಸಿ ಬಿ.ಎ. ದೇವಯ್ಯ(70), 40,000 ರೂ. ಹಣ ಕಳೆದುಕೊಂಡ ವರು. ಮಾಜಿ ಸೈನಿಕರಾದ ಅವರು, ಕೆಲ ವರ್ಷಗಳ ಕಾಲ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಘಟಕದಲ್ಲಿ ಸೇವೆ ಸಲ್ಲಿಸಿ 2013ರಲ್ಲಿ ಸಹಾಯಕ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ (ಎಎಸ್‌ಐ) ಆಗಿ ನಿವೃತ್ತಿಯಾಗಿದ್ದಾರೆ.

ಕಳೆದ ಶನಿವಾರ ಬೆಳಗ್ಗೆ 10.45 ಗಂಟೆಯಲ್ಲಿ ತಮ್ಮ ಸ್ಯಾಂಟ್ರೋ ಕಾರಿ ನಲ್ಲಿ ಮನೆಯಿಂದ ತಾವೇ ಚಾಲನೆ ಮಾಡಿಕೊಂಡು ದಟ್ಟಗಳ್ಳಿಯ ಸೋಮ ನಾಥನಗರದ ಕಡೆಗೆ ಹೋಗುತ್ತಿದ್ದಾಗ, ಕುವೆಂಪುನಗರದ ಕಾಂಪ್ಲೆಕ್ಸ್ ಸಮೀಪ ಎನ್‌ಫೀಲ್ಡ್ ಶೋರೂಂ ಮತ್ತು ಅಪೊಲೋ ಫಾರ್ಮಸಿ ಬಳಿ ಕಾರಿ ನಲ್ಲಿ ಶಬ್ದ ಕೇಳಿಬಂತು.

ಮರದಿಂದ ಕಡ್ಡಿ ಬಿದ್ದಿರಬಹು ದೆಂದು ಭಾವಿಸಿದ ದೇವಯ್ಯ, ಮುಂದೆ ಹೋಗುತ್ತಿದ್ದರು. ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಕುವೆಂಪುನಗರ ಪೊಲೀಸ್ ಠಾಣೆ ಕಡೆ ತಿರುವಿನ ಬಳಿ ಹಿಂದಿನಿಂದ ಬೈಕ್‌ನಲ್ಲಿ ಬಂದ ಮಾಸ್ಕ್ ಧಾರಿ ಯುವಕನೋರ್ವ, "ಸಾರ್ ನಿಲ್ಲಿಸಿ, ನೀವು ಬೈಕೊಂದಕ್ಕೆ ಡಿಕ್ಕಿ ಹೊಡೆದು ಬಂದಿದ್ದೀರಿ, ಅಲ್ಲಿ ನನ್ನ ಸ್ನೇಹಿತನ ಕಾಲಿಗೆ ತೀವ್ರ ಗಾಯಗಳಾಗಿ ಬಿದ್ದಿದ್ದಾನೆ, ಆಸ್ಪತ್ರೆಗೆ ಕರೆದೊಯ್ಯಬೇಕು" ಎಂದ.

ಹಿಂದೆ ಶಬ್ದ ಬಂದದ್ದು ಅದೇ ಇರ ಬೇಕೆಂದು ಭಾವಿಸಿದ ದೇವಯ್ಯ, ನಿಜ ವಿರಬಹುದೆಂದು ನಂಬಿ, ನಡೀರಿ, ನಾನೇ ಆಸ್ಪತ್ರೆಗೆ ಬರುತ್ತೇನೆ. ಚಿಕಿತ್ಸೆ ಕೊಡಿಸೋಣ ಎಂದರೂ ಒಪ್ಪದ ಆ ಯುವಕ "ಸಾರ್ ನೀವು ಅಲ್ಲಿಗೆ ಬಂದರೆ ಅಲ್ಲಿ 50 ಮಂದಿ ಜಮಾಯಿಸಿದ್ದಾರೆ. ಹೊಡೆದುಬಿಡುತ್ತಾರೆ. ನಿಮಗೆ ವಯಸ್ಸಾಗಿದೆ. ನೀವು ಬರಬೇಡಿ ನಾನೇ ಮ್ಯಾನೇಜ್ ಮಾಡುತ್ತೇನೆ. ಆಸ್ಪತ್ರೆಗೆ 40,000 ರೂ. ಖರ್ಚಾಗುತ್ತದೆ ಚಿಕಿತ್ಸಾ ಶುಲ್ಕ ಕೊಟ್ಟು ಹೋಗಿಬಿಡಿ ಎಂದು ಆತ ತಿಳಿಸಿದ.

ಆಗಲೂ ಧೈರ್ಯ ಮಾಡಿದ ದೇವಯ್ಯ ಅವರು, ನಾನೂ ನಿವೃತ್ತ ಪೊಲೀಸ್ ಅಧಿಕಾರಿಯೇ. ನನಗೂ ಎಸ್ಪಿ, ಪೊಲೀಸ್ ಆಯುಕ್ತರು ಗೊತ್ತು. ನಡೀರಿ ಪೊಲೀಸ್ ಸ್ಟೇಷನ್‌ಗೇ ಹೋಗೋಣ ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ವಂಚಕ, "ಪೊಲೀಸ್ ಸ್ಟೇಷನ್‌ಗೆ ಹೋದರೆ ಸಮಸ್ಯೆ ಬಗೆಹರಿಯಲ್ಲ ಸಾರ್, ಸುಮ್ಮನೆ 40,000 ರೂ. ಹಣ ಕೊಟ್ಟು ಹೋಗಿ" ಎಂದು ಮತ್ತೆ ಅಬ್ಬರಿಸಿದ್ದಾನೆ.

ವಿಧಿಯಿಲ್ಲದೆ ಸುಮ್ಮನಾದ ದೇವಯ್ಯ, ನನ್ನ ಬಳಿ ಹಣವಿಲ್ಲ, ಎಟಿಎಂನಲ್ಲಿ ಡ್ರಾ ಮಾಡಿಕೊಡುತ್ತೇನೆ ಎಂದು ರಾಮಕೃಷ್ಣ ನಗರ ಸರ್ಕಲ್ ಬಳಿಯ ಎಸ್‌ಬಿಐ ಎಟಿಎಂ ಕೌಂಟರ್ ಬಳಿ ತೆರಳಿ ಹಣ ಡ್ರಾ ಮಾಡಲೆತ್ನಿಸಿದರಾದರೂ, ಕಾರ್ಡ್ ಎಕ್ಸ್‌ಪೈರಿ ಆಗಿದೆ ಎಂದು ತೋರಿಸಿತು. ನಂತರ ಮಗನಿಗೆ ಹೇಳಿ ಇನ್ನೊಂದು ಖಾತೆಗೆ ಹಣ ಹಾಕುವಂತೆ ಹೇಳಿದರಾ ದರೂ ಅದೂ ಬ್ಲಾಕ್ ಆಗಿದೆ ಎಂಬ ವಿಷಯ ತಿಳಿಯಿತು.

ನಂತರ ಅವರ ಕಾರನ್ನು ಅಲ್ಲಿಯೇ ನಿಲ್ಲಿಸಿದ ದೇವಯ್ಯ, ಜೊತೆಯಲ್ಲಿದ್ದ ಮಾಸ್ಕ್‌ಧಾರಿ ಯುವಕನ ಬೈಕ್‌ನಲ್ಲೇ ಮನೆಗೆ ಬಂದು ಶ್ರೀಮತಿಯವರ ಎಟಿಎಂ ಕಾರ್ಡ್ ಪಡೆದುಕೊಂಡು ಬಂದು ಎಸ್‌ಬಿಐ ಎಟಿಎಂ ಕೌಂಟರ್ ನಲ್ಲಿ ಹಣ ಡ್ರಾ ಮಾಡಲೆತ್ನಿಸಿದರೂ ತಾಂತ್ರಿಕ ದೋಷದಿಂದ ಹಣ ಬರ ಲಿಲ್ಲ. ಆತ, ಅಲ್ಲೇ ಸಮೀಪದಲ್ಲಿದ್ದ ಹೆಚ್‌ಡಿಎಫ್‌ಸಿ ಬ್ಯಾಂಕ್ ಎಟಿಎಂ ಕೌಂಟರ್‌ಗೆ ಕರೆದೊಯ್ದು 40,000 ರೂ. ಡ್ರಾ ಮಾಡಿಸಿ, ಹಣ ಪಡೆದು ದೇವಯ್ಯರನ್ನು ಕರೆತಂದು ಅವರ ಕಾರಿನ ಬಳಿ ಬಿಟ್ಟು ಪರಾರಿಯಾದ.

ಅಷ್ಟೊತ್ತಿಗೆ ಮಧ್ಯಾಹ್ನವಾದ ಕಾರಣ ಮನೆಗೆ ಬಂದು ವಿಶ್ರಾಂತಿ ಪಡೆದು ಸಂಜೆ ಕುವೆಂಪುನಗರ ಠಾಣೆಗೆ ತೆರಳಿ ನಡೆದ ಘಟನೆ ವಿವರಿಸಿದ ದೇವಯ್ಯ, ಎಟಿಎಂಗಳ ಸಿಸಿಟಿವಿಯಲ್ಲಿ ವಂಚಕನ ಚಹರೆ ಸೆರೆಯಾಗಿದೆ. ಪರಿಶೀಲಿಸಿ ಅಗತ್ಯ ಕ್ರಮ ವಹಿಸುವಂತೆ ಕೋರಿ ಕೊಂಡರು. ದೂರು ದಾಖಲಿಸಿ ಕೊಂಡಿರುವ ಪೊಲೀಸರು, ವಂಚಕನ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಒಬ್ಬ ನಿವೃತ್ತ ಪೊಲೀಸ್ ಅಧಿ ಕಾರಿಯೇ ಇಂತಹ ವಂಚನೆಗೆ ಬಲಿ ಯಾಗಿರುವುದು, ವಂಚಕನ ಕುಯುಕ್ತಿಗೆ ಸಾಕ್ಷಿಯಾಗಿದೆ. ದೇವಯ್ಯ ಅವರ ಕಾರಿನ ಡೋರ್‌ಗೆ ಕಲ್ಲಿನಿಂದ ಹೊಡೆದು ನಂತರ ಹಿಂಬಾಲಿಸಿ ಬಂದು ಧಮ್ಕಿ ಹಾಕಿ ಹಣ ವಸೂಲಿ ಮಾಡಲಾಗಿದೆ. ಖದೀಮರು ವಯಸ್ಸಾದವರನ್ನೇ ಗುರಿಯಾಗಿಸಿಕೊಂಡು ಇಂತಹ ಕೃತ್ಯ ಎಸಗುತ್ತಿದ್ದಾರೆ. ಇದು ಮೈಸೂರಲ್ಲಿ ನಡೆಯುತ್ತಿರುವ ಸುಲಿಗೆ ದಂಧೆಗೆ ಮತ್ತೊಂದು ಸಾಕ್ಷಿಯೂ ಆಗಿದೆ. ದುಷ್ಕರ್ಮಿಗಳಿಗೆ ಕಾನೂನು, ಪೊಲೀ ಸರ ಭಯವೇ ಇಲ್ಲದಂತಾಗಿದೆ.

ಸೆ.9, ಮೈಸೂರಲ್ಲಿ ಫ್ರೀ ಮೇಸನ್ ಸಂಸ್ಥೆಯಿಂದ ಮಿಲನ ಸಮಾರಂಭ



ಮೈಸೂರು, ಸೆ.6(ಜಿಎ)–ವಿಶ್ವ ಭ್ರಾತೃತ್ವ ಸಾರುವ ನಿಟ್ಟಿನಲ್ಲಿ ಪುರಾತನ ಇತಿಹಾಸ ವುಳ್ಳ ಫ್ರೀ ಮೇಸನ್ಸ್ ಸಂಸ್ಥೆ ವತಿಯಿಂದ ಸೆ.9ರಂದು ಮೈಸೂರಿನಲ್ಲಿ ಮೈಸೂರು ಮಿಲನ ಸಮಾರಂಭ ಆಯೋಜಿಸ ಲಾಗಿದೆ ಎಂದು ಮುಖ್ಯ ಸಲಹೆಗಾರ ಜಿ.ಕೆ.ಬಾಲಕೃಷ್ಣ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧ ವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕೂರ್ಗಳ್ಳಿಯಲ್ಲಿರುವ ಸೈಲೆಂಟ್ ಶೋರ್ ಹೊಟೇಲ್‌ನಲ್ಲಿ ಸಮಾ ರಂಭ ಏರ್ಪಡಿಸಿದ್ದು, ಈ ಕಾರ್ಯಕ್ರಮಕ್ಕೆ ವಿಶೇಷವಾಗಿ ದಕ್ಷಿಣ ಭಾರತ ಸೇರಿದಂತೆ ದೇಶದಾದ್ಯಂತ 1200ಕ್ಕೂ ಹೆಚ್ಚು ಸದಸ್ಯರು ಆಗಮಿಸಲಿದ್ದಾರೆ. ಈ ವೇಳೆ ಅನೇಕ ಸೇವಾ ವಿಷಯ, ಸಹೋದರತ್ವದ ಬಗ್ಗೆ ನಿರ್ಣಯ ಅಂಗೀಕರಿಸಿ, ಮನುಕುಲದ ಒಳಿತಿಗಾಗಿ ಸ್ನೇಹ, ಕುಟುಂಬ, ವಿದ್ಯೆ, ಆರೋಗ್ಯ, ಹಸಿವು ಗಳ ಬಗ್ಗೆ ಚರ್ಚಿಸಲಾಗುವುದು. ಈ ಸಂಸ್ಥೆ ವಿಶ್ವದಾದ್ಯಂತ 60 ಲಕ್ಷಕ್ಕೂ ಹೆಚ್ಚು ಸದಸ್ಯ ರನ್ನು ಹೊಂದಿದೆ. ಆದರೆ ಯಾವುದೇ ಪ್ರಚಾರ ಬಯಸದೇ ಸದ್ದಿಲ್ಲದೇ ವಿಶ್ವಭ್ರಾತೃತ್ವ, ಜನಸೇವೆ ಮಾಡಬೇಕೆಂಬುದೇ ಉದ್ದೇಶ ವಾಗಿದ್ದು, ಎಲ್ಲರೂ ಇದರಲ್ಲಿ ತೊಡಗಿ ಕೊಂಡಿದ್ದಾರೆ ಎಂದರು. ಸುದ್ದಿಗೋಷ್ಠಿ ಯಲ್ಲಿ ಅಧ್ಯಕ್ಷ ಡಾ.ಅಬ್ರಹಾಂ ಥಾಮಸ್, ಕೆ.ಸಿ.ಸುಬ್ಬಯ್ಯ, ವಿ.ವಿ.ಹರೀಶ್, ಬಿ.ಎನ್.ಪ್ರಮೋದ್ ಉಪಸ್ಥಿತರಿದ್ದರು.

ಸೆ.17ರಂದು ವಿಶ್ವಕರ್ಮ ಜಯಂತಿ: ಪೂರ್ವಭಾವಿ ಸಭೆ

ಮೈಸೂರು,ಸೆ.6–2023–24ನೇ ಸಾಲಿ ನಲ್ಲಿ ಸೆ.17ರಂದು ವಿಶ್ವ ಕರ್ಮ ಜಯಂತಿ ಆಚರಿ ಸುವ ಕುರಿತು ಅಪರ ಜಿಲ್ಲಾಧಿಕಾರಿ ಅಧ್ಯಕ್ಷತೆ ಯಲ್ಲಿ ಸೆ.7ರಂದು ಬೆಳಗ್ಗೆ 11 ಗಂಟೆಗೆ ಡಿಸಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಮಾಗೋವಿಂದ ರಂಗಮಂದಿರದಲ್ಲಿ 'ಗೊರೂರು' ಪ್ರದರ್ಶನ

ಮೈಸೂರು, ಸೆ.6–ಇದೇ ಶನಿವಾರ (ಸೆ.9)ದಂದು ಮೈಸೂರಿನ ರಮಾ ಗೋವಿಂದ ರಂಗಮಂದಿರದಲ್ಲಿ ನಿರಂ ತರ ಫೌಂಡೇಷನ್, ಅಭಿನಯ ಗೊರೂರು ರಾಮಸ್ವಾಮಿ ಐಯ್ಯಂಗಾರರ "ನಮ್ಮ ಊರಿನ ರಸಿಕರು" ಹಾಗೂ ಇತರ ಕತೆಗಳನ್ನು ಆಧರಿಸಿದ ನಾಟಕ 'ಗೊರೂರು" ಪ್ರದರ್ಶನವಾಗುತ್ತಿದೆ

ನಿರಂತರ ಫೌಂಡೇಶನ್ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಆಯ್ದ ಬರಹಗಳನ್ನಾಧರಿಸಿದ ಹೊಸ ನಾಟಕವನ್ನು ರಂಗಕ್ಕೆ ಅಳವಡಿಸಿದೆ. ಇಡೀ ನಾಟಕವು ಗೊರೂರಿನ ಮೋಡಿ ಮಾಡುವ ಜಗತ್ತು ಪರಿಚಯಿಸುತ್ತಲೇ ವೈವಿಧ್ಯಮಯ ಪಾತ್ರ ಗಳು, ಅವರ ವಿಶಿಷ್ಟತೆಗಳು, ಅನು ಭವಗಳು, ಅಲ್ಲಿನ ಸಾಮಾನ್ಯರ ದಿನಚರಿ ಗಳು ಮತ್ತು ಸುತ್ತಲಿನ ವಾತಾವರಣವನ್ನು ಪ್ರಸ್ತುತಪಡಿಸುತ್ತಲೇ ಹಲವು ಸೂಕ್ಷ್ಮ ವಿವರ ಗಳನ್ನು ಪ್ರೇಕ್ಷಕರಿಗೆ ದಾಟಿಸುತ್ತದೆ. ತಮ್ಮ ದೈನಂದಿನ ಜೀವನದಲ್ಲಿ ವಿಚಿತ್ರವಾದ ಸನ್ನಿವೇಶಗಳನ್ನು ಎದುರಿಸುತ್ತಿದ್ದರೂ, ಗೊರೂರಿನ ನಿವಾಸಿಗಳು ಸಾಮರಸ್ಯದಿಂದ ಸಹಬಾಳ್ವೆ ನಡೆಸುತ್ತಲೇ, ಒಟ್ಟಾಗಿ ತಮ್ಮ ಸವಾಲುಗಳನ್ನು ಪರಿಹರಿಸುತ್ತಾರೆ. ಈ ನಾಟಕವು ಖ್ಯಾತ ರಂಗಕರ್ಮಿ ಮಂಜುನಾಥ್ ಬಡಿಗೇರ್ ಅವರ ನಿರ್ದೇಶನದಲ್ಲಿ ರೂಪು ಗೊಂಡಿದ್ದು, ದಿಗ್ವಿಜಯ್ (ನೀನಾಸಂ) ಅವರು ಸಂಗೀತ ಸಹಕಾರ ನೀಡಿದ್ದಾರೆ.

ಸಂಸದ ಪ್ರತಾಪ ಸಿಂಹ ಕಚೇರಿಗೆ ಸಿಎಂ ಸಿದ್ದರಾಮಯ್ಯ ಕೊಡುಗೆ ಪಟ್ಟಿ ಸಲ್ಲಿಕೆ

ಮೂರು ದಿನದಲ್ಲಿ ಚರ್ಚೆಗೆ ಬರುವಂತೆ ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಸಂಸದರಿಗೆ ಆಹ್ವಾನ

ಮೈಸೂರು,ಸೆ.6(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೊದಲ ಅವಧಿ 2013ರಿಂದ 18ರವರೆಗೂ ಮೈಸೂರಿಗೆ ನೀಡಿದ ಕೊಡುಗೆಗಳ ಪಟ್ಟಿಯೊಂದಿಗೆ ಚರ್ಚೆ ನಡೆಸಲು ಸಂಸದ ಪ್ರತಾಪ್ ಸಿಂಹ ಅವರ ಕಚೇರಿಗೆ ತೆರಳಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಪ್ರತಾಪ್‌ಸಿಂಹ ಅವರು ಸಿಗದ ಕಾರಣ ಅವರ ಆಪ್ತ ಸಹಾಯ ಕರಿಗೆ ಬುಧವಾರ ನೀಡಿ ವಾಪಸ್ಸಾದರು.

ಮುಂದಿನ ಲೋಕಸಭಾ ಚುನಾವಣೆ ಯಲ್ಲಿ ಪ್ರತಾಪ್ ಸಿಂಹನನ್ನು ಸೋಲಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನ ಎನ್‌ಆರ್ ಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಯಕರ್ತರಿಗೆ ಕರೆ ನೀಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಸಂಸದ ಪ್ರತಾಪ್ ಸಿಂಹ, ಜನ ನನ್ನನ್ನು ಏಕೆ ಸೋಲಿಸಬೇಕು ಎಂಬುದಕ್ಕೆ ಐದರಿಂದ ಹತ್ತು ಕಾರಣ ನೀಡಲಿ ಎಂದಿದ್ದರು. ಅಲ್ಲದೇ 40 ವರ್ಷದಿಂದ ಸಿದ್ದರಾಮಯ್ಯ ರಾಜ ಕೀಯದಲ್ಲಿದ್ದಾರೆ. ಅವರು ಮೈಸೂರಿಗೆ ಮಾಡಿರುವ ಕೆಲಸ ಏನು ಎಂಬುದನ್ನು ಹೇಳಲಿ ಎಂದು ಸವಾಲು ಹಾಕಿದ್ದರು. ಜೊತೆಗೆ ಕೆಲಸ ಮಾಡಿದವನನ್ನು ಸೋಲಿ ಸಬೇಕು ಎಂದು ಕೈ ಮುಗಿದು ಸಿಎಂ ಕೇಳಿದರೆ ಜನ ಅದನ್ನು ಒಪ್ಪುತ್ತಾರಾ? ಎಂದು ಪ್ರತಾಪ್ ಸಿಂಹ ಲೇವಡಿ ಮಾಡಿದ್ದರು.



ಇದಕ್ಕೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಸೆ.6ರಂದು ಪ್ರತಾಪ್‌ಸಿಂಹ ಕಚೇರಿ ಮುಂಭಾಗ ದಾಖಲೆ ಬಿಡುಗಡೆ ಮಾಡು ವುದಾಗಿ ಹೇಳಿದ್ದರು. ಅದರಂತೆ ಬುಧ ವಾರ ಸಂಸದ ಪ್ರತಾಪ್ ಸಿಂಹ ಕಚೇರಿಗೆ ದಾಖಲೆಗಳ ಸಮೇತ ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆಗಮಿಸಿದ್ದರು. ಆದರೆ, ಲಕ್ಷ್ಮಣ್ ಅವರನ್ನು ಜಲದರ್ಶಿನಿ ಅತಿಥಿ ಗೃಹದ ಒಳಗೆ ಹೋಗಲು ಪೊಲೀಸರು ಬಿಡಲಿಲ್ಲ. ಹಾಗಾಗಿ ಜಲದರ್ಶಿನಿ ಗೇಟ್ ಮುಂಭಾ ಗವೇ ಲಕ್ಷ್ಮಣ್ ನಿಂತಿದ್ದರು. ಸ್ಥಳೀಯ ಕಾಂಗ್ರೆಸ್ ಮುಖಂಡರು ಲಕ್ಷ್ಮಣ್‌ಗೆ ಸಾಥ್ ನೀಡಿದರು. ಕಾಂಗ್ರೆಸ್ ನಾಯಕರು ಆಗ ಮಿಸುವ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹ ಕಚೇರಿ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ನಂತರ ಪೊಲೀಸರ ಅನುಮತಿ ಪಡೆದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸೇರಿದಂತೆ ನಾಲ್ವರು ಕಾಂಗ್ರೆಸ್ ಮುಖಂಡರು ಪ್ರತಾಪ್ ಸಿಂಹ ಅವರ ಕಚೇರಿಗೆ ತೆರಳಿ ಅವರ ಆಪ್ತ ಸಹಾಯಕರಿಗೆ ಸಿಎಂ ಸಿದ್ದರಾಮಯ್ಯ 2013 ರಿಂದ 18ರವರೆಗೂ ಮೈಸೂರಿಗೆ ನೀಡಿದ ಕೊಡುಗೆಗಳ ಪಟ್ಟಿ ನೀಡಿ, ಮೂರು ದಿನಗಳೊಳಗೆ ಮಾಧ್ಯಮಗಳ ಮುಂದೆ ಚರ್ಚೆಗೆ ಬರುವಂತೆ ಆಹ್ವಾನಿಸಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತ ನಾಡಿದ ಅವರು, ಪ್ರತಾಪ್ ಸಿಂಹ ಹಿಟ್ ಅಂಡ್ ರನ್ ರಾಜಕಾರಣಿ. ಮೈಸೂರಿಗೆ ಸಿದ್ದರಾಮಯ್ಯ ಕೊಡುಗೆ ಏನು ಅಂತ ಕೇಳಿ ದ್ದಾರೆ. ಮೈಸೂರು ನಗರಕ್ಕೆ ಸಿದ್ದರಾಮಯ್ಯ 3800 ಕೋಟಿ ರೂ. ಕೊಟ್ಟಿದ್ದಾರೆ. ಮೈಸೂರು ಜಿಲ್ಲೆಗೆ 22,000 ಕೋಟಿ ರೂ. ಕೊಟ್ಟಿದ್ದಾರೆ. ಇಷ್ಟು ಅನುದಾನ ಯಾರೂ ಕೊಟ್ಟಿಲ್ಲ ಎಂದು ಪ್ರತಾಪ್ ಸಿಂಹ ವಿರುದ್ಧ ಕೆಪಿಸಿಸಿ ವಕ್ತಾರ ಲಕ್ಷ್ಮಣ್ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಿಗೆ ಪ್ರತಾಪ್ ಸಿಂಹ ನಯಾ ಪೈಸೆ ಕೆಲಸ ಮಾಡಿಲ್ಲ. ಅವರದ್ದೇ ಬಿಜೆಪಿ ಸರ್ಕಾರ ಇತ್ತು. ಅವರ ವಿಶ್ವಗುರು ಪ್ರಧಾನಿ ಆಗಿದ್ದರು. ಸಂಸದರಾಗಿ ನೀವೇನು ಕೊಟ್ಟಿ ದ್ದೀರಿ? ರಿಂಗ್ ರೋಡ್ ಆಗಿದ್ದು ಎಡಿಬಿ ಸಾಲದಲ್ಲಿ. ಕಾರ್ಪೊರೇಟರ್ ಮಾಡಿ ದ್ದನ್ನು ನಾನು ಮಾಡಿದ್ದೇನೆ ಅಂತ ಹೇಳಿ ಕೊಳ್ಳುತ್ತಾರೆ ಎಂದು ಕಿಡಿಕಾರಿದರು.

ಪ್ರತಾಪ್ ಸಿಂಹ ಅವರೇ ಯಾಕೆ ಓಡಿ ಹೋಗಿದ್ದೀರಿ? ಟೇಬಲ್ ಕುಟ್ಟಿ ಮಾತ ನಾಡುವ ಚರ್ಚೆಗೆ ಯಾಕೆ ಬರೋದಿಲ್ಲ? ಮೂರು ದಿನದ ಹಿಂದೆ ಪತ್ರ ಬರೆದಿದ್ದೇವೆ. ನಿಮ್ಮ ಪಿಎಸ್ ಬರಬಹುದು ಅಂತ ಸಹಿ ಹಾಕಿ ರಿಪ್ಲೈ ಮಾಡಿದ್ದಾರೆ. ಈಗ ಮೈಸೂ ರಿನಲ್ಲೇ ಇದ್ದರೂ ಯಾಕೆ ಕಚೇರಿಗೆ ಬಂದಿಲ್ಲ. ಮುಂದಿನ ಚುನಾವಣೆಯಲ್ಲಿ ನಿಮ್ಮನ್ನು ಜನ ಮನೆಗೆ ಕಳುಹಿಸುತ್ತಾರೆ ಎಂದು ಪ್ರತಾಪ್ ಸಿಂಹ ವಿರುದ್ಧ ಲಕ್ಷ್ಮಣ್ ವಾಗ್ದಾಳಿ ನಡೆಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಪತಿ : ಆ ಕಳ್ಳನನ್ನು ನೋಡು, ಅಡುಗೆ ಮನೆಯಲ್ಲಿ ನಾನು ಮಾಡಿದ ಬಿಸಿ ಬೇಳೆಬಾತ್ ಅನ್ನು ಗಬಗಬನೆ ತಿನ್ನುತ್ತಿದ್ದಾನೆ.

ಪತ್ನಿ : ಸರಿ ಆಯ್ತು. ಈಗ ಯಾರನ್ನು ಕರೆಯಬೇಕು? ಪೊಲೀಸರನ್ನೋ? ಆಂಬುಲೆನ್ಸ್ ಅನ್ನೋ?

ಮೈಸೂರು ಮಿತ್ರ

ಗುರುವಾರ, 7 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಂದು ಕ್ಷಣದ ಸಿಟ್ಟಿನಿಂದ ಪಾರಾದರೆ ನಾಲ್ಕು ದಿನಗಳ ದುಃಖದಿಂದ ಪಾರಾದಂತೆ –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಜೀರ್ಣಕ್ಕೆ ಔಷಧಿ ತಗೊಂಡ್ರೆ ಔಷಧೀನೇ ಜೀರ್ಣವಾಗಲಿಲ್ಲ

ನಿಮ್ಮ ಪತ್ರಗಳು

ಧಾರ್ಮಿಕ ಸಂಘರ್ಷದ ಹೇಳಿಕೆಗಳು ಖಂಡನೀಯ!

ಮಾನ್ಯರೆ,

ಸನಾತನ ಧರ್ಮವನ್ನು ಡೆಂಗ್ಯೂ, ಮಲೇರಿಯಾ ರೀತಿ ನಿರ್ಮೂಲನೆ ಮಾಡಬೇಕು ಎಂದು ಹೇಳಿಕೆ ನೀಡಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪುತ್ರ, ಸಚಿವ ಉದಯ ನಿಧಿ ಸ್ಟಾಲಿನ್ ಅವರ ಹೇಳಿಕೆ ವಿಷಾದಕರವಾಗಿದೆ.

ಏಕೆಂದರೆ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಸಮಾಜದಲ್ಲಿ ವಿಷಬೀಜ ಬಿತ್ತುವ ಕೆಲಸ ಎಂದೂ ಮಾಡಬಾರದು. ಸಮಾಜದಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ಅವರವರ ಧರ್ಮವೇ ಶ್ರೇಷ್ಠ ಎಂಬ ಭಾವನೆ ಇರುತ್ತದೆ. ಇದು ತಪ್ಪಲ್ಲ. ಹೀಗಿರುವಾಗ ಮಂತ್ರಿ ಸ್ಥಾನದಲ್ಲಿರುವ ಗಣ್ಯ ವ್ಯಕ್ತಿಯೊಬ್ಬರು ತಮ್ಮ ತುಷ್ಟೀಕರಣ ರಾಜಕಾರಣಕ್ಕಾಗಿ ಈ ರೀತಿಯ ಹೇಳಿಕೆ ನೀಡಿರುವುದು ಖಂಡನೀಯ. ಸರ್ವಧರ್ಮ ಸಹಬಾಳ್ವೆಯ ಈ ನೆಲದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬ ಧರ್ಮವೊಂದರ ನಿರ್ಮೂಲನೆ ಮತ್ತು ನಾಶಕ್ಕೆ ಕರೆ ಕೊಡುವುದು ಸಹ ತಪ್ಪು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಯಾವುದೇ ಧರ್ಮ ಸಮಾಜದಲ್ಲಿ ಜನರ ನಡುವೆ ಸದಾಕಾಲ ಇರುವಂತಹದ್ದು. ಇಂತಹ ಸಮಾಜದಲ್ಲಿ ಸಂತೋಷದಿಂದ ಬಾಳಬೇಕಾದರೆ ಧರ್ಮ ಅತ್ಯಗತ್ಯ. ಎಲ್ಲರಿಗೂ ಸುಖವನ್ನು ಬಯಸುವುದು ಪ್ರತಿಯೊಂದು ಧರ್ಮದ ಮೂಲವಾಗಿದೆ. ಹೀಗಿರುವಾಗ ಧರ್ಮ ಸಂಘರ್ಷಕ್ಕೆ ಎಡೆಮಾಡಿಕೊಡುವಂತಹ ಈ ರೀತಿಯ ಹೇಳಿಕೆಗಳು ದೇಶಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತದೆ. ಉದಯನಿಧಿ ಸೇರಿದಂತೆ ಸಮಾಜದ ಎಲ್ಲಾ ಜನಪ್ರತಿನಿಧಿಗಳು ಪಕ್ಷಾತೀತವಾಗಿ ನಮ್ಮ ಸಂವಿಧಾನವನ್ನು ಪಾಲನೆ ಮಾಡಬೇಕಾದದ್ದು ಆದ್ಯ ಕರ್ತವ್ಯ. ಇಂತಹ ಸಂದರ್ಭದಲ್ಲಿ ಉದಯನಿಧಿಯವರು ತಮ್ಮ ರಾಜಕೀಯ ಮೇಲಾಟಕ್ಕಾಗಿ ಧರ್ಮವೊಂದನ್ನು ಅವಮಾನಗೊಳಿಸಿದ್ದು, ಆ ಧರ್ಮವನ್ನು ಪಾಲಿಸುವ ಕೋಟ್ಯಂತರ ಜನರ ಭಾವನೆಗಳಿಗೆ ಧಕ್ಕೆಯಾಗಿದೆ ಎಂದರೆ ತಪ್ಪಾಗಲಾರದು.

ಸಾಮಾನ್ಯ ನಾಗರಿಕರ ಹೃದಯ ಮತ್ತು ಮನಸ್ಸಿನಲ್ಲಿ ತಲ್ಲಣವನ್ನುಂಟು ಮಾಡುವ ಹಾಗೂ ಧಾರ್ಮಿಕ ಸಮುದಾಯಗಳ ನಡುವೆ ಭಿನ್ನಾಭಿಪ್ರಾಯವನ್ನು ಪ್ರಚೋದಿಸುವ ಸಾಮರ್ಥ್ಯವನ್ನು ಹೊಂದಿರುವ ಈ ರೀತಿಯ ಹೇಳಿಕೆಗಳು ಮತ್ತೊಮ್ಮೆ ಮರುಕಳಿಸದಿರಲಿ ಎಂಬುದೇ ಪ್ರತಿಯೊಬ್ಬರ ಆಶಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಉಗನಿಯ ಗ್ರಾಮದ ಅಭಿವೃದ್ಧಿಗೆ ಸಹಕರಿಸಿ

ಮಾನ್ಯರೆ,

ಚಾಮರಾಜನಗರ ಜಿಲ್ಲೆ ಹನೂರು ವಿಧಾನಸಭಾ ಕ್ಷೇತ್ರದ ಧನಗೆರೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಉಗನಿಯ ಗ್ರಾಮವು ಸುಮಾರು ವರ್ಷಗಳಿಂದ ಯಾವುದೇ ರೀತಿಯ ಅಭಿವೃದ್ಧಿ ಹಾಗೂ ಮೂಲಸೌಕರ್ಯವನ್ನು ಕಾಣದೆ ತೀರ ಹಿಂದುಳಿದ ಕುಗ್ರಾಮವಾಗಿದೆ. ಗ್ರಾಮದಲ್ಲಿ ಸುಮಾರು 3 ರಿಂದ 4 ಸಾವಿರ ಜನಸಂಖ್ಯೆ ವಾಸಿಸುತ್ತಿದ್ದು, ಕೃಷಿ ಚಟುವಟಿಕೆ ಹಾಗೂ ರೇಷ್ಮೆ ನೂಲು ಬಿಚ್ಚುವ ಕೆಲಸದಲ್ಲಿ ಇಲ್ಲಿನ ಜನರು ತೊಡಗಿಸಿಕೊಂಡಿದ್ದಾರೆ. "ಗಾಂಧೀಜಿಯವರ ಮಾತಿನಂತೆ ಹಳ್ಳಿಗಳ ಉದ್ಧಾರ ಆಗದ ಹೊರತು ದೇಶ ಉದ್ಧಾರವಾಗುವುದಿಲ್ಲ" ಎಂಬ ನಾಣ್ಣುಡಿಯಂತೆ ಉಗನಿಯ ಗ್ರಾಮದಲ್ಲಿ ಅಭಿವೃದ್ಧಿ ಎಂಬುವುದು ತಿರುಕನ ಕನಸಾಗಿಯೇ ಉಳಿದಿದೆ. ಸರ್ಕಾರದ ಸೌಲಭ್ಯಗಳು ಇಲ್ಲಿ ಮರೀಚಿಕೆಯಾಗಿದೆ. ಪ್ರತಿನಿತ್ಯ ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಹಿಡಿದು ಬದುಕು ಸಾಗಿಸಲು ತಾಲೂಕು ಕೇಂದ್ರ ಹಾಗೂ ಅಕ್ಕಪಕ್ಕದ ಊರುಗಳಿಗೆ ಹೋಗುವಂತಹ ಪ್ರತಿಯೊಬ್ಬರಿಗೂ ಸರಿಯಾದ ಸಮಯಕ್ಕೆ ಬಸ್ ವ್ಯವಸ್ಥೆ ಇಲ್ಲದಿರುವುದು, ಗ್ರಾಮದ ಪ್ರತಿ ಬೀದಿಗಳಲ್ಲಿ ಚರಂಡಿಯ ಹೂಳು ತೆಗೆಸದೆ ಗಬ್ಬೆದ್ದು ನಾರುತ್ತಿದ್ದು, ರೋಗ ರುಜಿನಗಳಿಗೆ ದಾರಿ ಮಾಡಿಕೊಡುವ ವಾತಾವರಣ ನಿರ್ಮಾಣವಾಗಿದೆ. ಗ್ರಾಮದಿಂದ ಯಾವುದೇ ಸ್ಥಳಕ್ಕೆ ತೆರಳಲು ಮುಖ್ಯವಾಗಿ ರಸ್ತೆಯ ವ್ಯವಸ್ಥೆ ಇಲ್ಲದೆ ದಿನಂಪ್ರತಿ ನರಕಯಾತನೆ ಅನುಭವಿಸುವಂತಹುದು ಕಾಯಕವಾಗಿ ಬಿಟ್ಟಿದೆ. ರಸ್ತೆಯಲ್ಲಿನ ಗುಂಡಿಗಳು ಸಾವಿಗೆ ಬಾಯಿ ತೆರೆದು ನಿಂತಿವೆ. ಗ್ರಾಮದಲ್ಲಿ ಸಾಲು ಸಾಲು ಸಮಸ್ಯೆಗಳು ಕಣ್ಮುಂದೆ ಎದ್ದು ಕಾಣುತ್ತಿದ್ದರೂ ಎಷ್ಟೇ ಮನವಿ ಸಲ್ಲಿಸಿದರೂ ಯಾವೊಬ್ಬ ಅಧಿಕಾರಿಯಾಗಲೀ, ರಾಜಕಾರಣಿಗಳಾಗಲೀ ಗಮನ ಹರಿಸದೆ ನಿರ್ಲಕ್ಷ್ಯ ತೋರುತ್ತಿರುವುದು ದುಷ್ಟಾಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ. ಇನ್ನು ಮುಂದಾದರೂ ಎಚ್ಚೆತ್ತುಕೊಂಡು ಆದಷ್ಟು ಬೇಗ ಗ್ರಾಮದ ಅಭಿವೃದ್ಧಿಗೆ ಹಾಗೂ ಮೂಲಸೌಕರ್ಯಗಳನ್ನು ಒದಗಿಸಿ ಮಾದರಿ ಗ್ರಾಮವನ್ನಾಗಿ ಮಾಡಲು ಸಹಕರಿಸಿ ರಸ್ತೆ ನಿರ್ಮಾಣ ಮಾಡುವ ಕಾರ್ಯಕ್ಕೆ ಮುಂದಾಗಬೇಕಾಗಿ ಮನವಿ.

– ಮಾದೇಶ ಉಗನಿಯ, ಕೊಳ್ಳೇಗಾಲ

ಪ್ರೌಢಶಾಲಾ ಪರೀಕ್ಷೆಯ ವಿಧಾನ ಬದಲಾವಣೆ ಸ್ವಾಗತಾರ್ಹ

ಮಾನ್ಯರೆ,

ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ಸರ್ಕಾರದ ಹೊಣೆಯಾಗಿರುತ್ತದೆ. ವಿದ್ಯಾರ್ಥಿಗಳು ಸರಿಯಾದ ಶಿಕ್ಷಣ ಪಡೆಯುತ್ತಿದ್ದಾರೆ ಎಂದೂ ತಿಳಿಯಲು ಅಥವಾ ಅವರ ಶೈಕ್ಷಣಿಕ ಪ್ರಗತಿಯನ್ನು ಅಳೆಯಲು ಬಳಸುವ ಮಾನದಂಡವೇ ಪರೀಕ್ಷೆ. ಪ್ರಸ್ತುತ ಕರ್ನಾಟಕ ಸರ್ಕಾರ 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷಾ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿರುವುದು ಉತ್ತಮ ಬೆಳವಣಿಗೆಯಾಗಿದೆ.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಾವುದೇ ವಿದ್ಯಾರ್ಥಿಯ ಜೀವನದ ಪ್ರಮುಖ ಘಟ್ಟವಾಗಿರುತ್ತದೆ. ಈ ಹಂತದಲ್ಲಿ ಉತ್ತಮ ಪ್ರಗತಿ ತೋರಿಸಿದರೆ ಮುಂದಿನ ಭವಿಷ್ಯ ಉಜ್ವಲವಾಗಿರುತ್ತದೆ. ಪ್ರಸ್ತುತ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಕೇವಲ ಒಂದು ವಾರ್ಷಿಕ ಮತ್ತು ಎರಡು ಪೂರಕ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು.

ಕರ್ನಾಟಕ ಸರ್ಕಾರದ ಹೊಸ ನೀತಿಯ ಪರಿಣಾಮ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ 2023–24 ನೇ ಸಾಲಿನಿಂದ ಪೂರಕ ಪರೀಕ್ಷೆಗಳ ಬದಲು 1, 2, 3 ವಾರ್ಷಿಕ ಪರೀಕ್ಷೆಗಳನ್ನು ನಡೆಸಿ ಮೂರರಲ್ಲಿ ಉತ್ತಮ ಅಂಕಗಳಿಸಿದ್ದನ್ನು ಪರಿಗಣಿಸುವ ನಿಯಮ ವಿದ್ಯಾರ್ಥಿಗಳ ಪ್ರಗತಿಗೆ ಅನುಕೂಲಕರವಾಗಿದೆ.

ವಿದ್ಯಾರ್ಥಿಗಳು ಪೂರಕ ಪರೀಕ್ಷೆಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಮತ್ತು ವಾರ್ಷಿಕ ಪರೀಕ್ಷೆಗೆ ಕೊನೆಯ ಹಂತದಲ್ಲಿ ತಯಾರಾಗುವ ಕಾರಣ ಉತ್ತಮ ಅಂಕ ಗಳಿಸುವಲ್ಲಿ ವಿಫಲವಾಗುತ್ತಾರೆ. ಪ್ರಸ್ತುತ ಹೊಸ ನಿಯಮದ ಪ್ರಕಾರ ಮೂರು ವಾರ್ಷಿಕ ಪರೀಕ್ಷೆಗಳು ಇರುವ ಕಾರಣ ವಿದ್ಯಾರ್ಥಿಗಳು ಗಂಭೀರವಾಗಿ ಅಧ್ಯಯನದಲ್ಲಿ ತೊಡಗುತ್ತಾರೆ ಮತ್ತು ಕೊನೆಯ ಹಂತದಲ್ಲಿ ವಿದ್ಯಾರ್ಥಿಗಳ ಗೊಂದಲ ಕಡಿಮೆಯಾಗಿ ಆತ್ಮಹತ್ಯೆಯಂತಹ ಪ್ರಕರಣಗಳು ಕಡಿಮೆಯಾಗುತ್ತವೆ.

ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಮೂರು ವಾರ್ಷಿಕ ಪರೀಕ್ಷೆಗಳನ್ನು ನಡೆಸುವ ಕ್ರಮ ಉತ್ತಮ ಪ್ರಕ್ರಿಯೆಯಾಗಿದ್ದು, ಕರ್ನಾಟಕ ಜನತೆಯ ಪರವಾಗಿ ರಾಜ್ಯ ಸರ್ಕಾರ ಮತ್ತು ಪರೀಕ್ಷಾ ಮಂಡಳಿಗೆ ರಾಜ್ಯದ ಜನತೆಯ ಪರವಾಗಿ ಧನ್ಯವಾದಗಳು.

–ರಾಸುಮ ಭಟ್, ಚಿಕ್ಕಮಗಳೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಶ್ವೇತಾಶ್ವತರೋಪನಿಷತ್ತಿನಲ್ಲಿ ಯೋಗ

ಶ್ವೇತಾಶ್ವತರೋಪನಿಷತ್ತಿನಲ್ಲಿ ಆರು ಅಧ್ಯಾಯಗಳಿವೆ. ಅವುಗಳಲ್ಲಿ ಎರಡನೆಯ ಅಧ್ಯಾಯವು ಯೋಗದ ಮಹತ್ತ್ವವನ್ನು ಒತ್ತಿ ಹೇಳಿದೆ. ಯೋಗ ಸಾಧನೆಯಿಲ್ಲದೆ ಆಧ್ಯಾತ್ಮಿಕ ಸಿದ್ಧಿಯು ಲಭಿಸದು ಎಂಬುದು ಇದರ ಅಭಿಪ್ರಾಯವಾಗಿದೆ. ಅದ್ವೈತಿಗಳಾಗಲಿ, ದ್ವೈತಿಗಳಾಗಲಿ, ಎಲ್ಲರೂ ಯೋಗಾಭ್ಯಾಸವನ್ನು ಮಾಡಿಯೇ ಪರಮಸಿದ್ಧಿಯನ್ನು ಪಡೆಯಲು ಶಕ್ತರಾಗುವರೆಂಬುದು ಉಪನಿಷತ್ತಿನ ಸಂದೇಶವಾಗಿದೆ. ಅಲ್ಲಿರುವ ಕೆಲವು ಮಂತ್ರಗಳನ್ನು ಅವಲೋಕಿಸೋಣ –

ತ್ರಿರುನ್ನತಂ ಸ್ಥಾಪ್ಯ ಸಮಂ ಶರೀರಂ
ಹೃದೀಂದ್ರಿಯಾಣಿ ಮನಸಾ ಸಂನಿವೇಶ್ಯ
ಬ್ರಹ್ಮೋಡುಪೇನ ಪ್ರತರೇತ ವಿದ್ವಾನ್
ಸ್ರೋತಾಂಸಿ ಸರ್ವಾಣಿ ಭಯಾವಹಾನಿ॥

ಯೋಗಾಭ್ಯಾಸಿಯು ತಲೆ, ಕೊರಳು, ಬೆನ್ನುಗಳನ್ನು ಸಮರೇಖೆಯಲ್ಲಿ ನಿಲ್ಲಿಸಿಕೊಳ್ಳಬೇಕು. ಮನಸ್ಸಿನಿಂದ ಇಂದ್ರಿಯಗಳನ್ನು ಹೃದಯದಲ್ಲಿರುವ ಪರಮಾತ್ಮನ ಮೇಲೆ ಕೇಂದ್ರೀಕರಿಸಬೇಕು. ಓಂಕಾರವೆಂಬ ದೋಣಿಯ ಸಹಾಯದಿಂದ ಭಯಂಕರವಾದ ಎಲ್ಲಾ ನದಿಗಳನ್ನು ದಾಟಬೇಕು – ಎಂಬುದು ಈ ಮಂತ್ರದ ಭಾವಾರ್ಥ. ಈ ಮಂತ್ರದ ಅಭಿಪ್ರಾಯವನ್ನು ಭಗವದ್ಗೀತೆಯು ಆರನೆಯ ಅಧ್ಯಾಯದಲ್ಲಿ ಪ್ರತಿಧ್ವನಿಸಿದೆ.


ಸಮಂ ಕಾಯಶಿರೋಗ್ರೀವಂ
ಧಾರಯನ್ನಚಲಂ ಸ್ಥಿರಃ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ
ದಿಶಶ್ಚಾನಮಲೋಕಯನ್ ॥
ಪ್ರಶಾಂತಾತ್ಮಾ
ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ।
ಮನಃ ಸಂಯಮ್ಯ ಮಚ್ಚಿತ್ತೋ
ಯುಕ್ತ ಆಸೀತ ಮತ್ಪರಃ॥

(ಬೆನ್ನು, ತಲೆ, ಕೊರಳು ಇವನ್ನು ಸಮರೇಖೆಯಲ್ಲಿರಿಸಿಕೊಂಡು ಚಲನೆಯಿಲ್ಲದೆ ಸ್ಥಿರವಾಗಿ ಕುಳಿತು, ತನ್ನ ಮೂಗಿನ ತುದಿಯಲ್ಲಿ ಲಕ್ಷ್ಯವನ್ನಿರಿಸಿ, ದಿಕ್ಕುಗಳನ್ನು ನೋಡದೆ, ಮನಸ್ಸನ್ನು ಪ್ರಶಾಂತವಾಗಿರಿಸಿಕೊಂಡು, ಎಲ್ಲ ಭಯವನ್ನು ತ್ಯಜಿಸಿ, ಬ್ರಹ್ಮಚರ್ಯವ್ರತದಲ್ಲಿದ್ದು, ಸಂಯಮವನ್ನಾಶ್ರಯಿಸಿ ಯೋಗಿಯು ಪರಮಾತ್ಮನಲ್ಲೇ ಏಕಾಗ್ರತೆಯಿಂದ ಮನಸ್ಸನ್ನು ನೆಟ್ಟವನಾಗಬೇಕು). ಉಪನಿಷತ್ತಿನಲ್ಲಿ ಬ್ರಹ್ಮ ಶಬ್ದದಿಂದ ಓಂಕಾರವನ್ನು ಗ್ರಹಿಸಬೇಕು. ಅದೇ ಸಂಸಾರ ಸಾಗರವನ್ನು ದಾಟಲು ಬಳಸಬೇಕಾದ ದೋಣಿ ಅಥವಾ ತೆಪ್ಪ ಇದು ಧ್ಯಾನಕ್ಕಾಗಿ ಯೋಗಿಯು ಉಪಯೋಗಿಸಬೇಕಾದ ಯೋಗಾಸನವನ್ನು ತಿಳಿಸಿದೆ.

ಯೋಗದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಎಂಬ ಎಂಟು ಅಂಗಗಳಲ್ಲಿ ಆಸನವಾದ ಮೇಲೆ ಪ್ರಾಣಾಯಾಮ. ಅದನ್ನು ಶ್ವೇತಾಶ್ವತರೋಪನಿಷತ್ತಿನ ಮುಂದಿನ ಮಂತ್ರದಲ್ಲಿ ಕಾಣುತ್ತೇವೆ.

ಪ್ರಾಣಾನ್ ಪ್ರಪೀಡ್ಯೇಹ ಸಂಯುಕ್ತ ಚೇಷ್ಟಃ
ಕ್ಷೀಣೇ ಪ್ರಾಣೇ ನಾಸಿಕಯೋಚ್ಛ್ವಸೀತ ।
ದುಷ್ಟಾಶ್ವಯುಕ್ತಮಿವ ವಾಹಮೇನಂ
ವಿದ್ವಾನ್ ಮನೋ ಧಾರಯೇತಾಪ್ರಮತ್ತಃ॥

ವಿದ್ವಾಂಸನು ತನ್ನ ಕಾರ್ಯಗಳನ್ನು ನಿಯತಗೊಳಿಸಿ ಉಸಿರನ್ನು ನಿಯಂತ್ರಿಸಬೇಕು. ಉಸಿರು ಶ್ವಾಸಕೋಶವನ್ನು ತುಂಬಿದ ಮೇಲೆ ಹಾಗೇ ನಿಲ್ಲಿಸಿ ಮೂಗಿನಿಂದ ಹೊರಗೆ ಬಿಡಬೇಕು (ಅಥವಾ ಸಂಪೂರ್ಣವಾಗಿ



ಶ್ವಾಸಕೋಶವು ಬರಿದಾದಾಗ ಮೂಗಿನಿಂದ ಶ್ವಾಸವನ್ನು ಒಳಗೆ ತೆಗೆದುಕೊಳ್ಳಬೇಕು). ಪಳಗದ, ತುಂಟ ಕುದುರೆಗಳನ್ನು ಕಟ್ಟಿದ ಗಾಡಿಯಂತಿರುವ ಮನಸ್ಸನ್ನು ಪ್ರಮಾದರಹಿತನಾಗಿ ಹತೋಟಿಯಲ್ಲಿಟ್ಟುಕೊಳ್ಳಬೇಕು ಎಂಬುದು ಈ ಮಂತ್ರದ ತಾತ್ಪರ್ಯ. ಪ್ರಾಣಾಯಾಮವು ಕೇವಲ ದೈಹಿಕ ಕ್ರಿಯೆಯಲ್ಲ. ಅದು ಮನಸ್ಸಿನ ಮೇಲೆ ಪರಿಣಾಮವನ್ನು ಬೀರುವ ಯೋಗಾಂಗವೆಂಬುದು ಇಲ್ಲಿ ಪ್ರತಿಪಾದಿತವಾಗಿದೆ. ದುಷ್ಟಾಶ್ವಗಳೆಂದರೆ ಹಿಡಿತಕ್ಕೆ ಸಿಗದೆ ಓಡಾಡುವ ಇಂದ್ರಿಯಗಳು. ಎಂತಹ ಸ್ಥಳದಲ್ಲಿ ಧ್ಯಾನಕ್ಕಾಗಿ ಕುಳಿತುಕೊಳ್ಳಬೇಕೆಂಬುದನ್ನು ಮುಂದಿನ ಮಂತ್ರವು ತಿಳಿಸಿದೆ.

ಸಮೇ ಶುಚೌ ಶರ್ಕರಾವಹ್ನಿವಾಲುಕಾ–
ವಿವರ್ಜಿತೇ ಶಬ್ದಜಲಾಶ್ರಯಾದಿಭಿಃ।
ಮನೋಽನುಕೂಲೇ ನತು ಚಕ್ಷುಪೀಡನೇ
ಗುಹಾನಿವಾತಾಶ್ರಯಣೇ ಪ್ರಯೋಜಯೇತ್॥

ಮಟ್ಟಸವಾದ, ಎಂದರೆ ಏರು ತಗ್ಗುಗಳಿಲ್ಲದ ಸಮತಲವಾದ ನೆಲದಲ್ಲಿ ಧ್ಯಾನಕ್ಕಾಗಿ ಕುಳಿತುಕೊಳ್ಳಬೇಕು. ಆ ಪ್ರದೇಶ ಶುಚಿಯಾಗಿರಬೇಕು. ಕಲ್ಲುಗಳು, ಬೆಂಕಿ, ಮರಳು ನೆಲದ ಮೇಲೆ ಇರಬಾರದು. ಶಬ್ದ, ನೀರು, ಜನರ ಗುಂಪು ಇರಬಾರದು. ಆ ಸ್ಥಳ ಮನಸ್ಸಿಗೆ ಅನುಕೂಲವಾಗಿರಬೇಕು. ಕಣ್ಣಿಗೆ ಪೀಡೆಯನ್ನುಂಟು ಮಾಡುವಂತಿರಬಾರದು. ಗಾಳಿಯ ಪ್ರವಾಹವಿಲ್ಲದ ಗುಹೆಯಂತೆ ಏಕಾಂತ ಪ್ರದೇಶವಾಗಿರಬೇಕು. ಅಲ್ಲಿ ಯೋಗಿಯು ಧ್ಯಾನವನ್ನಾರಂಭಿಸಬೇಕು.

ಅಂತಹ ಧ್ಯಾನವನ್ನು ಮಾಡುತ್ತಿರುವಾಗ ಯೋಗಿಯ ಚಿತ್ತವು ಹಲವು ಸೂಚನೆಗಳನ್ನು ಕೊಡುತ್ತದೆ. ಬ್ರಹ್ಮ ಜ್ಞಾನವು ಉಂಟಾಗುತ್ತಿದೆ ಎಂಬುದಕ್ಕೆ ಇವು ಮುನ್ಸೂಚನೆಗಳು. ಸೂರ್ಯೋದಯಕ್ಕೆ ಮುಂಚೆ ಅರುಣೋದಯ ಆಗುವಂತೆ ಈ ಕುರುಹುಗಳು ಯೋಗಿಗೆ ಕಂಡು ಬರಬಹುದು. ಅವನ್ನು ಮುಂದಿನ ಮಂತ್ರ ಹೇಳುತ್ತಿದೆ.

ನೀಹಾರ ಧೂಮಾರ್ಕಾನಿಲಾನಲಾನಾಂ
ಖದ್ಯೋತವಿದ್ಯುತ್‌ಸ್ಫಟಿಕ ಶಶೀನಾಮ್ ।
ಏತಾನಿ ರೂಪಾಣಿ ಪುರಸ್ಸರಾಣಿ
ಬ್ರಹ್ಮಣ್ಯಭಿವ್ಯಕ್ತಿಕರಾಣಿ ಯೋಗೇ॥

ಯೋಗವನ್ನು, ಎಂದರೆ ಅದರ ಅಂಗವಾದ ಧ್ಯಾನವನ್ನು ಮಾಡುತ್ತಿರುವಾಗ ಹಿಮ, ಹೊಗೆ, ಸೂರ್ಯ, ಬೆಂಕಿ, ಗಾಳಿ, ಮಿಂಚುಹುಳ, ಮಿಂಚು, ಸ್ಫಟಿಕ, ಚಂದ್ರ ಮುಂತಾದ ರೂಪಗಳು ಕಾಣಿಸಿಕೊಳ್ಳಬಹುದು. ಇವು ಯೋಗದಲ್ಲಿ ಬ್ರಹ್ಮದ ಅಭಿವ್ಯಕ್ತಿಯನ್ನು ಸೂಚಿಸುತ್ತವೆ.

ಇಲ್ಲಿ ಹೇಳಿರುವ ಹಿಮ, ಚಂದ್ರ ಇತ್ಯಾದಿಗಳು ಬಾಹ್ಯವಸ್ತುಗಳಲ್ಲ, ಯೋಗಿಯ ಚಿತ್ತವೃತ್ತಿಗಳೇ ಹಾಗೆ ಕಾಣಿಸಿಕೊಳ್ಳಬಹುದು ಎಂದು ಗ್ರಹಿಸಬೇಕು. ಇದಲ್ಲದೆ ಬ್ರಹ್ಮಾಭಿಮುಖನಾದ ಯೋಗಿಗೆ ರೋಗಬಾಧೆಗಳೂ ಇರುವುದಿಲ್ಲವೆಂದು ಶ್ವೇತಾಶ್ವತರೋಪನಿಷತ್ತು ಹೇಳುತ್ತದೆ.

ಪೃಥಿವ್ಯಪ್ತೇಜೋಽನಿಲಖೇ ಸಮುತ್ಥಿತೇ
ಪಂಚಾತ್ಮಕೇ ಯೋಗಗುಣೇ ಪ್ರವೃತ್ತೇ।
ನ ತಸ್ಯ ರೋಗೋ ನ ಜರಾ ನ ಮೃತ್ಯುಃ
ಪ್ರಾಪ್ತಸ್ಯ ಯೋಗಾಗ್ನಿಮಯಂ ಶರೀರಮ್॥

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ ಎಂಬ ಪಂಚಭೂತಗಳು ಧ್ಯಾನದಲ್ಲಿ ಅಭಿವ್ಯಕ್ತವಾದಾಗ, ಆ ಪಂಚಭೂತಗಳ ಯೋಗಗುಣಗಳಾದ ಗಂಧ, ರಸ, ರೂಪ, ಸ್ಪರ್ಶ, ಶಬ್ದ ಎಂಬ ಐದು ತನ್ನಲ್ಲಿಯೇ ಕಾರ್ಯಪ್ರವೃತ್ತವಾದಾಗ ಯೋಗಿಗೆ ರೋಗ–ಮುಪ್ಪು, ಸಾವು ಎಂಬವು ಉಂಟಾಗುವುದಿಲ್ಲ. ಏಕೆಂದರೆ ಆಗ ಅವನ ಶರೀರವು ಯೋಗಾಗ್ನಿಮಯ ಆಗಿರುತ್ತದೆ. ಯೋಗದ ಅಗ್ನಿಯಿಂದ ದೇಹದ ದೋಷಗಳನ್ನೆಲ್ಲ ಯೋಗಿ ಸುಟ್ಟು ಹಾಕಿರುವುದರಿಂದ ಅವನಿಗೆ ರೋಗಾದಿ ಬಾಧೆಗಳು ಇರುವುದಿಲ್ಲ –ಎಂದು ಈ ಪದ್ಯದ ಭಾವಾರ್ಥ. ಯೋಗಾಭ್ಯಾಸವನ್ನು ಸರ್ವಾತ್ಮನಾ ಮಾಡುತ್ತಿರುವವನಲ್ಲಿ ಕೆಲವು ವಿಶೇಷ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಎಂದು ಈ ಉಪನಿಷತ್ತು ಹೇಳುತ್ತದೆ.

ಲಘುತ್ವ ಮಾರೋಗ್ಯ ಮಲೋಲುಪತ್ವಂ
ವರ್ಣಪ್ರಸಾದಃ ಸ್ವರಸೌಷ್ಠವಂ ಚ।
ಗಂಧಃ ಶುಭೋ ಮೂತ್ರಪುರೀಷಮಲ್ಪಂ
ಯೋಗಪ್ರವೃತ್ತಿಂ ಪ್ರಥಮಾಂ ವದಂತಿ॥

ಯೋಗಿಯಲ್ಲಿ ಮೊದಲು ಉಂಟಾಗುವ ಯೋಗ ಪ್ರವೃತ್ತಿಯನ್ನು ಕೆಲವು ಲಕ್ಷಣಗಳು ಸೂಚಿಸುತ್ತವೆ.

1) ಲಘುತ್ವ ಅಥವಾ ಶರೀರಲಾಘವ. ಯೋಗಿಯ ಶರೀರದಲ್ಲಿ ಸ್ಥೌಲ್ಯ ಅಥವಾ ಬೊಜ್ಜು ಇರುವುದಿಲ್ಲ. ಅಂತಹ ಸ್ಥೂಲತೆಯು ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೆ ಅಡ್ಡಿಯಾಗುವುದಲ್ಲವೆ. ತಾತ್ಕಾಲಿಕವಾಗಿ ಅನೇಕರು ಮೈಭಾರವಾದಂತೆ ಅನಿಸುತ್ತದೆ ಎನ್ನುತ್ತಾರೆ. ಯೋಗಿಗೆ ಹಾಗೆ ಭಾಸವಾಗುವುದಿಲ್ಲ. ಶರೀರದಲ್ಲಿ ಹಗುರತೆಯನ್ನೇ ಅವನು ಅನುಭವಿಸುತ್ತಿರುತ್ತಾನೆ. ಮಾನಸಿಕವಾಗಿಯೂ ಉನ್ನತಿಗೆ ಏರುತ್ತಿರುತ್ತಾನೆ.

2) ಆರೋಗ್ಯ–ರೋಗಗಳಿಂದ ದೂರವಾಗಿರುವಿಕೆ. ದೈಹಿಕ ಮತ್ತು ಮಾನಸಿಕ ಕಾಯಿಲೆಗಳು ತಾವಾಗಿ ದೂರವಾಗುತ್ತವೆ. ಯೋಗಿಯು ಯಮಗಳನ್ನೂ ನಿಯಮಗಳನ್ನೂ ಪಾಲಿಸುವುದರಿಂದ, ಯುಕ್ತವಾದ ಆಹಾರ, ವಿಹಾರ, ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದರಿಂದ, ನಿದ್ರೆ ಮತ್ತು ಜಾಗರಗಳನ್ನು ಸಮತೋಲನದಲ್ಲಿ ಇಟ್ಟುಕೊಂಡಿರುವುದರಿಂದ, ಚಿತ್ತವೃತ್ತಿಗಳ ವಿರೋಧವನ್ನು ಮಾಡಿರುವುದರಿಂದ ಅವನಿಗೆ ಶರೀರದ ಮತ್ತು ಮನಸ್ಸಿನ ಪ್ರಸನ್ನತೆ ದೊರಕುತ್ತದೆ.

3) **ಅಲೋಲುಪತ್ವ** – ಲೋಲುಪ ಎಂದರೆ ವಿಷಯಲಂಪಟ. ಕಂಡಿದ್ದನ್ನೆಲ್ಲ ತಿನ್ನುವ ಚಾಪಲ್ಯ, ಸುಖಗಳನ್ನು ಎಷ್ಟು ಅನುಭವಿಸಿದರೂ ಸಾಕೆನ್ನದೆ ಇನ್ನೂ ಬೇಕು ಎಂಬ ದುರಾಶೆ. ಹಣ ಎಷ್ಟಿದ್ದರೂ ಸಾಲವೆನ್ನುವ ದಾಹ. ಇವೆಲ್ಲ ಲೋಲುಪತ್ವವನ್ನು ಸೂಚಿಸುತ್ತವೆ. ಯೋಗಿಯು ಈ ವಿಧವಾದ ಆಶೆಗಳಿಗೆ ಬಲಿಯಾಗುವುದಿಲ್ಲ. ಸಂತೋಷ (ತೃಪ್ತಿ) ಎಂಬ ನಿಯಮವನ್ನು ಅವನು ಅಂಗೀಕರಿಸಿರುತ್ತಾನೆ. ಯೋಗಿಯ ಮುಖ್ಯ ಲಕ್ಷಣವೇ ಯಾವುದರ ಬಗೆಗೂ ಲೋಲುಪನಾಗದಿರುವುದು.

4) **ವರ್ಣಪ್ರಸಾದ :** ಎಂದರೆ ಉಜ್ಜ್ವಲ ಶರೀರಕಾಂತಿ. ರೋಗಗಳ ಬಾಧೆ ಇಲ್ಲದಾಗ ಇದು ತಾನಾಗಿ ಸಿದ್ಧವಾಗುತ್ತದೆ. ಕಾಂತಿಹೀನತೆಗೆ ಮುಖ್ಯ ಕಾರಣ ರೋಗ. ಶರೀರದಲ್ಲೂ, ಮನಸ್ಸಿನಲ್ಲೂ ನಿರ್ಮಲತೆ ಇದ್ದಾಗ ಈ ಗುಣವು ಅಭಿವ್ಯಕ್ತವಾಗುತ್ತದೆ.

5) **ಸ್ವರಸೌಷ್ಠವ :** ಮಾತಿನಲ್ಲಿ ಸ್ಪಷ್ಟತೆ ಯೋಗಿಯ ಲಕ್ಷಣ. ಶ್ರೋತೃವಿಗೆ ಮಾತಿನ ಒಂದೊಂದು ಅಕ್ಷರವೂ ಸ್ಫುಟವಾಗಿ ಕೇಳಿಸುವಂತೆ ಯೋಗಿಯು ಮಾತನಾಡುತ್ತಾನೆ. ಅದಕ್ಕಾಗಿ ಅವನು ಪ್ರಯತ್ನ ಮಾಡದಿದ್ದರೂ ಅವನ ಒಂದೊಂದು ನುಡಿಯಲ್ಲೂ ಸ್ಪಷ್ಟತೆ ಇರುತ್ತದೆ.

6) ಶುಭಗಂಧ, ಕುಸುಮಗಳಂತೆ, ಶ್ರೀಗಂಧದಂತೆ ಮನೋಹರವಾದ ಸ್ವಾಭಾವಿಕ ಪರಿಮಳವೇ ಶುಭಗಂಧ. ಶೌಚ (ಶುಚಿತ್ವ) ಎಂಬ ನಿಯಮವನ್ನು ಯೋಗಿಯು ಸದಾ ಪಾಲಿಸುವುದರಿಂದ ಇದರ ಸಿದ್ಧಿ.

7) **ಮೂತ್ರಪುರೀಷಮಲ್ಪಮ್.** ಯೋಗಿಯು ಮಿತಹಾರಿಯಾಗಿ ಇರಬೇಕೆಂಬ ನಿಯಮವಿರುವುದರಿಂದ ಅವನ ಮಲಮೂತ್ರಗಳು ಅಲ್ಪವಾಗಿರುತ್ತವೆ. ಹೀಗೆ ಯೋಗಸಿದ್ಧಿಯ ಸೂಚನೆಗಳನ್ನು ತಿಳಿಸಿ ಶ್ವೇತಾಶ್ವತರೋಪನಿಷತ್ತು ಸಮಾಧಿಯ ಸ್ಥಿತಿಯನ್ನು ದೃಷ್ಟಾಂತದ ಮೂಲಕ ತಿಳಿಸುತ್ತದೆ.

ಯಥೈವ ಬಿಂಬಂ ಮೃದಯೋಪಲಿಪ್ತಂ
ತೇಜೋಮಯಂ ಭ್ರಾಜತೇ ತತ್ಸುಧಾಂತಮ್।
ತದ್ವಾತ್ಮತತ್ತ್ವಂ ಪ್ರಸಮೀಕ್ಷ್ಯ ದೇಹೀ
ಏಕಃ ಕೃತಾರ್ಥೋ ಭವತೇ ವೀತಶೋಕಃ॥

ಕೆಸರಿನಲ್ಲಿ ಮುಳುಗಿ ಜೇಡಿಮಣ್ಣು ಅಂಟಿಕೊಂಡಿರುವ ವಿಗ್ರಹವು ಚೆನ್ನಾಗಿ ತೊಳೆಯಲ್ಪಟ್ಟಾಗ ಶುದ್ಧವಾಗಿ ತೇಜಸ್ಸಿನಿಂದ ಹೊಳೆಯುತ್ತದೆ. ಅದೇ ರೀತಿಯಾಗಿ (ಸಮಾಧಿಯಲ್ಲಿ ತನ್ನೆಲ್ಲಾ ದೋಷಗಳಿಂದ ಮುಕ್ತವಾದ) ಆತ್ಮತತ್ತ್ವವನ್ನು ನೋಡಿದ ಯೋಗಿಯು ಎಲ್ಲ ಶೋಕಗಳಿಂದ ಬಿಡಲ್ಪಟ್ಟು ಅದ್ವಿತೀಯ ಸ್ವರೂಪನಾಗಿ ಧನ್ಯನಾಗುತ್ತಾನೆ. ಇದರಿಂದ ಯೋಗದ ಮುಖ್ಯ ಗುರಿ ಆತ್ಮಸಾಕ್ಷಾತ್ಕಾರ ಎಂಬುದು ಸ್ಪಷ್ಟವಾಗುತ್ತದೆ. ಉಪನಿಷತ್ತುಗಳು ಎಲ್ಲ ಭಾರತೀಯ ದರ್ಶನಗಳ ಮೂಲ ಎನ್ನುತ್ತಾರೆ. ಯೋಗದರ್ಶನಕ್ಕೂ ಅವೇ ಮೂಲ. ಕೆಲವು ಉಪನಿಷತ್ತುಗಳು ಸೂಚ್ಯವಾಗಿ, ಮತ್ತೆ ಕೆಲವು ಉಪನಿಷತ್ತುಗಳು ವಾಚ್ಯವಾಗಿ ಯೋಗದ ತತ್ತ್ವಗಳನ್ನು ತಿಳಿಸಿವೆ.

ಬೊಮ್ಮೇನಹಳ್ಳಿಯ 155 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ನಿರ್ಮಿಸಲು ನಿರ್ಧಾರ

ಬಸವನಹಳ್ಳಿಯ 4 ಎಕರೆಯಲ್ಲಿ ಗುಂಪು ಮನೆ ಯೋಜನೆಗೂ ಮುಡಾ ಅನುಮೋದನೆ


ಮೈಸೂರು,ಸೆ.6(ಆರ್‌ಕೆ)–ಮೈಸೂರು ತಾಲೂಕು, ಇಲವಾಲ ಹೋಬಳಿಯ ಬೊಮ್ಮೇನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ 155.32 ಎಕರೆ ಪ್ರದೇಶದ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿರ್ಧರಿಸಿದೆ.

ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆಯಲ್ಲಿ ಮುಡಾ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಸಭೆಯಲ್ಲಿ ಈ ಮಹತ್ವದ ನಿರ್ಣಯ ಕೈಗೊಳ್ಳಲಾಯಿತು. ಭೂಮಾಲೀಕರು ಹಾಗೂ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ಶೇ.50:50ರ ಅನುಪಾತದಲ್ಲಿ ವಸತಿ ಬಡಾವಣೆ ನಿರ್ಮಿಸುವ ಯೋಜನೆ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಭೂಮಿ ನೀಡಲು ರೈತರಿಂದ ಪ್ರಾಥಮಿಕ ಒಪ್ಪಿಗೆ ಪತ್ರ ಪಡೆದಿರುವುದರಿಂದ ಶೇ.50:50ರ ಅನುಪಾತದಲ್ಲಿ ಬೊಮ್ಮೇನಹಳ್ಳಿ ವಸತಿ ಬಡಾವಣೆ ನಿರ್ಮಿಸಿ ಬೇಡಿಕೆಗನುಸಾರ ನಿವೇಶನ ಹಂಚಿಕೆ ಮಾಡಲು ಸಭೆ ಒಪ್ಪಿಗೆ ಸೂಚಿಸಿದ್ದು, ಸರ್ಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸುವ ಬಗ್ಗೆ ಅನುಮೋದನೆ ನೀಡಲಾಯಿತು.

ಗುಂಪು ಮನೆ ಯೋಜನೆ: ಪ್ರಾಧಿಕಾರದ ವ್ಯಾಪ್ತಿಯ ಬಸವನಹಳ್ಳಿ ಸರ್ವೆ ನಂಬರ್ 25(ಪಿ) ನ 4.21 ಎಕರೆ ಪ್ರದೇಶದಲ್ಲಿ ಗುಂಪು ಮನೆ ಯೋಜನೆಯನ್ನು ಖಾಸಗಿ–ಸಾರ್ವಜನಿಕ ಜಂಟಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಮುಡಾ ಸಭೆಯು ನಿರ್ಧರಿಸಿದ್ದು, ಡಿಪಿಆರ್ ಅಂದಾಜು ವೆಚ್ಚದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲೂ ನಿರ್ಣಯಿಸಲಾಯಿತು.

ನಿವೇಶನಗಳಿಗೆ ಹೆಚ್ಚು ಬೇಡಿಕೆ ಇದೆಯಾದರೂ, ಭೂಮಿಯ ಕೊರತೆ ಇರುವುದರಿಂದ ಮುಡಾ ಮೀಸಲಿರಿಸಿರುವ ಜಾಗದಲ್ಲೇ ಮೇಲ್ಮುಖ ಬೆಳವಣಿಗೆ (Vertical Growth)ಗೆ ಒತ್ತು ನೀಡಿ ಬಹು ಮಹಡಿ ವಸತಿ ಸಮುಚ್ಛಯ ನಿರ್ಮಿಸಿ ಕೈಗೆಟಕುವ ದರದಲ್ಲಿ ಮನೆಗಳನ್ನು ಹಂಚಿಕೆ ಮಾಡುವುದು ಸೂಕ್ತ ಎಂದು ಮುಡಾ ಸಭೆಯು ನಿರ್ಧರಿಸಿತು.



ಬುದ್ಧವಿಹಾರ ನವೀಕರಣ: ಮೈಸೂರಿನ ಬಲ್ಲಾಳ್ ಸರ್ಕಲ್‌ನಲ್ಲಿರುವ ಬುದ್ಧವಿಹಾರ ಕಟ್ಟಡ ನವೀಕರಣಗೊಳಿಸಲು ಮುಡಾದಿಂದ 50 ಲಕ್ಷ ರೂ. ಅನುದಾನ ನೀಡಲು ಜಿಲ್ಲಾ ಉಸ್ತುವಾರಿ ಸಚಿವರು ಪತ್ರ ಬರೆದಿರುವುದರಿಂದ ಅವರ ಸೂಚನೆ ಮೇರೆಗೆ ಅನುದಾನ ನೀಡುವ ಬಗ್ಗೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ನಿಧಿ–2 ಅನುದಾನ ಬಳಕೆ: ಮೈಸೂರು ನಗರದ ವಿವಿಧ ಅಭಿವೃದ್ಧಿಗಾಗಿ ಪ್ರಾಧಿಕಾರದ ನಿಧಿ–2 ಅಡಿ ಇರುವ ಅನುದಾನ ಬಳಸಿಕೊಳ್ಳಲು ಸರ್ಕಾರದಿಂದ ಅನುಮತಿ ಪಡೆಯುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸದಸ್ಯರು ಸಲಹೆ ನೀಡಿದ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಧರಿಸಿತು.

ಡಾ. ಬಿ.ಆರ್. ಅಂಬೇಡ್ಕರ್ ಭವನಕ್ಕೆ 28 ಕೋಟಿ: ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ನಿರ್ಮಾಣಗೊಂಡಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಮುಡಾದಿಂದ 28 ಕೋಟಿ ರೂ. ಬಾಕಿ ಹಣ ಪಾವತಿಸಲು ಸಭೆ ನಿರ್ಧರಿಸಿತಲ್ಲದೆ, ಗಾಂಧಿಭವನದ ಸುತ್ತ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ 10 ಲಕ್ಷ ರೂ. ಅನುದಾನ ನೀಡಲು ಒಪ್ಪಿಗೆ ಸೂಚಿಸಲಾಯಿತು.


30 ಬಡಾವಣೆಗಳ ನಕ್ಷೆ ಅನುಮೋದನೆ: ಮೈಸೂರಿನ ವಿವಿಧ 30 ಖಾಸಗಿ ಬಡಾವಣೆಗಳ ನಿರ್ಮಾಣಕ್ಕೆ ಕೋರಿರುವ ನಕ್ಷೆ ಅನುಮೋದನೆಗೆ ಇಂದಿನ ಮುಡಾ ಸಭೆಯಲ್ಲಿ ಒಪ್ಪಿಗೆ ಸೂಚಿಸಿದ್ದು, ನಗರ ಯೋಜನಾ ಶಾಖೆಯಿಂದ ಅಗತ್ಯ ಕ್ರಮ ವಹಿಸಲು ಸೂಚನೆ ನೀಡಲಾಯಿತು.

ಮುಡಾ ಸದಸ್ಯರಾದ ಜಿ.ಟಿ.ದೇವೇಗೌಡ, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ರಮೇಶ್ ಬಂಡಿಸಿದ್ದೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ದಿನೇಶ್ ಗೂಳೀಗೌಡ, ಮುಡಾ ಕಮೀಷ್ನರ್ ಜಿ.ಟಿ.ದಿನೇಶ್‌ಕುಮಾರ್, ನಗರ ಯೋಜಕ ಸದಸ್ಯ ಶೇಷ, ಸೂಪರಿಂಟೆಂಡಿಂಗ್ ಇಂಜಿನಿಯರ್ ಚನ್ನಕೇಶವ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಂಬಾರಿ ಆನೆ ಅಭಿಮನ್ಯುವೇ ಬಲು ಭಾರ

●ಬರೋಬ್ಬರಿ 5160 ಕೆ.ಜಿ.ಯೊಂದಿಗೆ ಕಳೆದ ಬಾರಿಗಿಂತ 390 ಕೆ.ಜಿ. ಹೆಚ್ಚಳ
●ಪ್ರಸಕ್ತ ಸಾಲಿನ ದಸರಾಗೆ ಬಂದ ಆನೆಗಳ ತೂಕ ಮಾಡಿಸುವ ಪರಿಪಾಠ







ಗೋಪಿ-5080 ಕೆ.ಜಿ




ಧನಂಜಯ-4940 ಕೆ.ಜಿ




ವಿಜಯ-2830 ಕೆ.ಜಿ



ವರಲಕ್ಷ್ಮೀ-3020 ಕೆ.ಜಿ.



ಮಹೇಂದ್ರ-4530 ಕೆ.ಜಿ



ಭೀಮ-4370 ಕೆ.ಜಿ

ಮೈಸೂರು, ಸೆ.6(ಎಂಟಿವೈ)- ನಾಡಹಬ್ಬ ದಸರಾದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಮೊದಲ ತಂಡದ ಎಂಟು ಆನೆಗಳಿಗೆ ವಾಡಿಕೆಯಂತೆ ಬುಧವಾರ ತೂಕ ಮಾಡಿಸಲಾಯಿತು. ಗಜಪಡೆ ನಾಯಕ ಅಭಿಮನ್ಯು, ತೂಕದಲ್ಲೂ ಮುಂಚೂಣಿಯಲ್ಲಿದ್ದಾನೆ.

ಸೆ.1ರಂದು ವಿವಿಧ ಕ್ಯಾಂಪ್‌ಗಳಿಂದ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನಕ್ಕೆ ಆಗಮಿಸಿದ್ದ ಮೊದಲ ತಂಡದ 9 ಆನೆಗಳಲ್ಲಿ ಅರ್ಜುನ ಹೆಚ್.ಡಿ.ಕೋಟೆ ತಾಲೂಕಿನ ಮೇಟಿಕುಪ್ಪೆ ವಲಯದಲ್ಲಿ ಬಾಲಕನ ಬಲಿ ಪಡೆದ ಹುಲಿ ಸೆರೆ ಕಾರ್ಯಾಚರಣೆಗೆ ತೆರಳಿದ ಹಿನ್ನೆಲೆಯಲ್ಲಿ 8 ಆನೆಗಳು ಈಗ ಅರಮನೆ ಆವರಣದಲ್ಲಿ ಬೀಡುಬಿಟ್ಟಿವೆ. ತಾಲೀಮು ಆರಂಭಿಸುವ ಮುನ್ನ ದಸರಾ ಗಜಪಡೆಗೆ ತೂಕ ಮಾಡಿಸುವ ಸಂಪ್ರದಾಯವಿದೆ. ಅದರಂತೆ ಇಂದು ಎಲ್ಲಾ ಆನೆಗಳಿಗೂ ತೂಕ ಮಾಡಿಸಲಾಯಿತು.

5 ಟನ್ ತೂಗಿದ ಅಭಿಮನ್ಯು: ಕ್ಯಾಪ್ಟನ್ ಅಭಿಮನ್ಯು ತೂಕದಲ್ಲಿ ಮೊದಲಿಗನಾಗಿ ಗಮನ ಸೆಳೆಯಿತು. ಕಳೆದ ವರ್ಷಕ್ಕಿಂತ 390 ಕೆಜಿ ತೂಕ ಹೆಚ್ಚಿಸಿಕೊಂಡಿದೆ. ಈ ಬಾರಿ ಅಭಿಮನ್ಯು 5160(ಕಳೆದ ಬಾರಿ 4770) ಕೆಜಿ, ಗೋಪಿ 5,080 ಕೆ.ಜಿ, ಎರಡನೇ ಬಾರಿ ದಸರೆಯಲ್ಲಿ ಪಾಲ್ಗೊಳ್ಳುತ್ತಿರುವ ಮಹೇಂದ್ರ ಕಳೆದ ಬಾರಿಗಿಂತ 270 ಕೆಜಿ ತೂಕ ಹೆಚ್ಚಿಸಿಕೊಂಡಿದ್ದು, ಈ ಬಾರಿ 4,530(4260), 3ನೇ ಬಾರಿ ಪಾಲ್ಗೊಳ್ಳುತ್ತಿರುವ ಭೀಮ 420 ಕೆಜಿ ತೂಕ ಹೆಚ್ಚಿಸಿಕೊಂಡು 4,370(3950) ಕೆ.ಜಿ ತೂಗಿದ್ದಾನೆ. ಗಜಪಡೆಯ ಹೊಸ ಆನೆ ಕಂಜನ್ 4,240 ಕೆ.ಜಿ, ಕುಮ್ಕಿ ಆನೆಗಳಾದ ವಿಜಯಾ 2,830, ವರಲಕ್ಷ್ಮಿ 3,020 ಕೆ.ಜಿ ತೂಕ ಹೊಂದಿವೆ. ಕಳೆದ ವರ್ಷ ತೂಕದಲ್ಲಿ ಅಭಿಮನ್ಯು ನಾಲ್ಕನೇ ಸ್ಥಾನ ಹೊಂದಿತ್ತು. ಅರ್ಜುನ, ಗೋಪಾಲಸ್ವಾಮಿ, ಧನಂಜಯ ಮೊದಲ ಮೂರು ಸ್ಥಾನದಲ್ಲಿದ್ದವು. ಅವುಗಳಲ್ಲಿ ಗೋಪಾಲಸ್ವಾಮಿ ಕಾಡಾನೆ ಕಾಳಗದಲ್ಲಿ ಮೃತಪಟ್ಟಿದ್ದಾನೆ. ಧನಂಜಯ ಈ ಬಾರಿ 4,940 ಕೆ.ಜಿ ತೂಗುವ ಮೂಲಕ ಎರಡನೇ ಸ್ಥಾನದಲ್ಲಿದ್ದಾನೆ.

ಜಂಬೂಸವಾರಿ ಮೆರವಣಿಗೆಯಲ್ಲಿ ಮೊದಲ ಹೆಜ್ಜೆ: ಪ್ರಸಕ್ತ ಸಾಲಿನ ದಸರಾ ಉತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಅಭಿಮನ್ಯು ನೇತೃತ್ವದ ಗಜಪಡೆ ಇಂದು ಮೊದಲ ಬಾರಿಗೆ ಜಂಬೂಸವಾರಿ ಮಾರ್ಗದಲ್ಲಿ ಹೆಜ್ಜೆ ಹಾಕಿದವು. ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ದ್ವಾರದಿಂದ ಹೊರಬಂದ ಗಜಪಡೆ, ಕೆ.ಆರ್.ವೃತ್ತ. ಸಯ್ಯಾಜಿರಾವ್ ವೃತ್ತ, ಧನ್ವಂತರಿ ರಸ್ತೆಯಲ್ಲಿರುವ ಸಾಯಿರಾಮ್ ಅಂಡ್ ಕೋ. ವೇ ಬ್ರಿಡ್ಜ್‌ಗೆ ಆಗಮಿಸಿದವು. ತೂಕದ ಬಳಿಕ ಧನ್ವಂತರಿ ರಸ್ತೆ, ಶೇಷಾದ್ರಿ ಅಯ್ಯರ್ ರಸ್ತೆ, ಇರ್ವಿನ್ ರಸ್ತೆ ಸರ್ಕಾರಿ ಆಯುರ್ವೇದ ಕಾಲೇಜು ವೃತ್ತದಿಂದ ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ, ಚಾಮರಾಜ ಸರ್ಕಲ್ ಹಾದು ಕೋಟೆ ಆಂಜನೇಯ ಸ್ವಾಮಿ ದೇವಾಲಯದ ದ್ವಾರದ ಮೂಲಕ ಮರಳಿ ಅರಮನೆ ಸೇರಿದವು.

ಭದ್ರತೆಯಲ್ಲಿ ನಡಿಗೆ: ಅರಮನೆಯಿಂದ ಹೊರಟ ಆನೆಗಳಿಗೆ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಮೊದಲ ದಿನ ರಸ್ತೆಗಿಳಿದ ದಸರಾ ಗಜಪಡೆ ಬಳಿ ಯಾರೂ ಸುಳಿಯದಂತೆ ಕಟ್ಟೆಚ್ಚರ ವಹಿಸಲಾಗಿತ್ತು. ಬೆಂಗಾವಲು ಪಡೆಯೊಂದಿಗೆ ಹೆಜ್ಜೆ ಹಾಕಿದ ಆನೆಗಳನ್ನು ರಸ್ತೆ ಬದಿ ವ್ಯಾಪಾರಿಗಳು, ಸಾರ್ವಜನಿಕರು ಕಣ್ತುಂಬಿಕೊಂಡರು. ಕೆಲವರು ಹೂವು, ಹಣ್ಣು ನೀಡಿ ಸತ್ಕರಿಸಿದರು. ಈ ಸಂದರ್ಭದಲ್ಲಿ ಡಿಸಿಎಫ್ ಸೌರಭ್ ಕುಮಾರ್, ಡಿಸಿಪಿ ಜಾಹ್ನವಿ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ. ಮುಜೀಬ್ ರೆಹಮಾನ್, ಸಹಾಯಕರಾದ ರಂಗರಾಜು, ಅಕ್ರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಆನೆಗಳಿಗೆ ತೂಕ ಆಧರಿಸಿ ಪೌಷ್ಟಿಕ ಆಹಾರ ಕಲ್ಪಿಸಲು ನಿರ್ಧಾರ

ಡಿಸಿಎಫ್ ಸೌರಭ್ ಕುಮಾರ್ ಮಾಹಿತಿ

ಮೈಸೂರು, ಸೆ.6(ಎಂಟಿವೈ)- ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆಯ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಎಂದಿನಂತೆ ಆನೆಗಳ ಶಕ್ತಿ -ಸಾಮರ್ಥ್ಯ ವೃದ್ಧಿಗೆ ಬೇಕಾಗುವ ಪೌಷ್ಟಿಕ ಆಹಾರ ನೀಡುವ ಪ್ರಕ್ರಿಯೆ ಆರಂಭಿಸುವುದಾಗಿ ಡಿಸಿಎಫ್ ಸೌರಭ್ ಕುಮಾರ್ ತಿಳಿಸಿದ್ದಾರೆ.

ದಸರಾ ಗಜಪಡೆ ತೂಕದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಕರೆತರಲಾಗಿರುವ ಮೊದಲ ತಂಡದ ಆನೆಗಳು ಅರಮನೆ ಆವರಣದಲ್ಲಿ ಬೀಡುಬಿಟ್ಟಿದ್ದು, ಅವುಗಳ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ. ಪ್ರತಿವರ್ಷದಂತೆ ಗಜಪಡೆಯ ಆರೈಕೆಗೆ ಕ್ರಮ ಕೈಗೊಳ್ಳಲಾಗಿದೆ. ಆನೆಗಳ ಆಹಾರ ಪದ್ಧತಿಯಲ್ಲಿ ಅನುಸರಿಸಬೇಕಾದ ಮಾನದಂಡ ತಿಳಿದುಕೊಳ್ಳಲು ಹಾಗೂ ಸಮರ್ಪಕ ಆಹಾರ ಪೂರೈಕೆ ಮಾಡಲು ಆನೆಗಳಿಗೆ ತೂಕ ಮಾಡಿಸಲಾಗಿದೆ.

ವಿವಿಧ ಕ್ಯಾಂಪ್‌ಗಳಿಂದ ಅರಮನೆ ಪ್ರವೇಶಿಸಿದ ಬಳಿಕ ತಾಲೀಮು ಆರಂಭಿಸುವ ಮುನ್ನ ಆನೆಗಳಿಗೆ ತೂಕ ಮಾಡಲಾಗುತ್ತದೆ. ಇದರಿಂದ ಆನೆಗಳ ಶಕ್ತಿ, ದೈಹಿಕ ಸಾಮರ್ಥ್ಯ ಸೇರಿದಂತೆ ವಿವಿಧ ಗುಣಗಳ ಬಗ್ಗೆ ನಿಖರ ಮಾಹಿತಿ ದೊರೆಯಲಿದೆ. ಆ ನಂತರ ಆನೆಗಳಿಗೆ ವಿಶೇಷ ಆಹಾರ ನೀಡಿ ತೂಕ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ಕೇವಲ ತೂಕ ಹೆಚ್ಚಿಸುವುದಕ್ಕೆ ಪ್ರಾಮುಖ್ಯತೆ ನೀಡದೆ, ಅವುಗಳ ಆರೋಗ್ಯ ಕಾಪಾಡುವುದು ಉದ್ದೇಶ ಎಂದು ಸ್ಪಷ್ಟಪಡಿಸಿದರು. ಆನೆಗಳ ತೂಕ ತಿಳಿದರೆ ಯಾವ ಆನೆಗೆ ಎಷ್ಟು ಪ್ರಮಾಣದ ಆಹಾರ ನೀಡಬೇಕು ಎಂದು ವೈದ್ಯರು ಸೂಚಿಸುತ್ತಾರೆ. 4 ಸಾವಿರ ಕೆ.ಜಿ ತೂಕವಿದ್ದರೆ 40 ಕೆ.ಜಿ ಪೌಷ್ಟಿಕ ಆಹಾರ ಕೊಡಲಾಗುತ್ತದೆ. ಈ ಮಾನದಂಡ ಅನುಸರಿಸಿ ಆನೆಗಳ ಆರೈಕೆಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು. ಗಜಪಡೆಯ ಮೊದಲ ತಂಡದಲ್ಲಿ ಆಗಮಿಸಿದ್ದ ಅರ್ಜುನ, ಹುಲಿ ಸೆರೆ ಕಾರ್ಯಾಚರಣೆಗೆ ತೆರಳಿದ್ದು, ಮತ್ತೆ ಗಜಪಡೆ ಸೇರಲಿದ್ದಾನೆ. ಮಹೇಂದ್ರನನ್ನು ಕಾರ್ಯಾಚರಣೆಗೆ ಕಳುಹಿಸುವ ಆಲೋಚನೆಯಿತ್ತು. ಆದರೆ ಹೊಸ ಆನೆಗಳನ್ನು ನಿಯೋಜಿಸಿದ್ದರಿಂದ ಹಿರಿಯ ಅಧಿಕಾರಿಗಳ ಸೂಚನೆಯಂತೆ ಮೈಸೂರಲ್ಲೇ ಉಳಿಸಿಕೊಳ್ಳಲಾಗಿದೆ. 2ನೇ ತಂಡದ ಆನೆಗಳು ಆಗಮಿಸಿದ ನಂತರ, ಅರ್ಜುನ ಆನೆಗೂ ತೂಕ ಪರೀಕ್ಷೆ ಮಾಡುತ್ತೇವೆ ಎಂದರು.

ಗಜಪಡೆಯ ನಾಯಕ, ಕೂಂಬಿಂಗ್ ಸ್ಟಾರ್ ಅಭಿಮನ್ಯು ಮುಂದಿನ ಎರಡು ವರ್ಷ ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿ ಹೊರಲಿದ್ದಾನೆ. ಈ ಅವಧಿಯಲ್ಲಿ ಭವಿಷ್ಯದ ಅಂಬಾರಿ ಆನೆಗಳ ಸಜ್ಜುಗೊಳಿಸುವ ಪ್ರಕ್ರಿಯೆ ನಡೆಸಲಾಗುತ್ತಿದೆ. ಹೊಸ ಆನೆಗಳಿಗೂ ತರಬೇತಿ ನೀಡಿ, ಸಜ್ಜುಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಕಟ್ಟೆಚ್ಚರ ವಹಿಸಲಾಗಿದೆ: ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಮಾತನಾಡಿ, ಇಂದು ನಡೆಸಿದ ತೂಕದ ಪರೀಕ್ಷೆಯಲ್ಲಿ ಎಲ್ಲ ಆನೆಗಳು ಉತ್ತಮವಾದ ತೂಕವನ್ನು ಹೊಂದಿವೆ, ಎಲ್ಲಾ ಆನೆಗಳೂ ಆರೋಗ್ಯದಿಂದ ಕೂಡಿವೆ. ಈ ಬಾರಿ ನಾಲ್ಕು ಹೆಣ್ಣಾನೆಗಳು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿವೆ. ಹೆಣ್ಣಾನೆಗಳಿಗೆ ಈ ಬಾರಿ ಗರ್ಭ ಪರೀಕ್ಷೆಯನ್ನು ನಡೆಸಿ, ಖಚಿತಪಡಿಸಿಕೊಂಡ ನಂತರವೇ ಕರೆತರಲಾಗುತ್ತಿದೆ ಎಂದರು.



ಕಂಜನ್-4240 ಕೆ.ಜಿ

ಶ್ರೀರಾಜ ರಾಜೇಶ್ವರಿ ದೇವಸ್ಥಾನಕ್ಕೆ ನಾಳೆ ಪೇಜಾವರ ಶ್ರೀಗಳ ಭೇಟಿ

ಮೈಸೂರು, ಸೆ.6-ಮೈಸೂರಿನ ರಾಜ ರಾಜೇಶ್ವರಿ ನಗರದಲ್ಲಿರುವ ಶ್ರೀ ರಾಜ ರಾಜೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಸೆ.8ರಂದು ಸಂಜೆ 5 ಗಂಟೆಗೆ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಭೇಟಿ ನೀಡಲಿದ್ದಾರೆ.

ಅಂದು ಶ್ರೀಗಳಿಗೆ ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿಕೊಳ್ಳಲಾಗುವುದು. ನಂತರ ಶ್ರೀಗಳ ನೇತೃತ್ವದಲ್ಲಿ



ವಿಶೇಷ ಪೂಜಾ ಕಾರ್ಯಗಳು ನಡೆಯಲಿದ್ದು, ಶ್ರೀಗಳು ಆಶೀರ್ವಚನ ನೀಡಿ ಭಕ್ತಾದಿಗಳಿಗೆ ಫಲ-ಮಂತ್ರಾಕ್ಷತೆ ನೀಡುವರು ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಯಾದವ ವಧು-ವರರ ಸಮಾವೇಶ

ಮೈಸೂರು, ಸೆ.6-ಮೈಸೂರು ನಗರ ಮತ್ತು ಜಿಲ್ಲಾ ಯಾದವ (ಗೊಲ್ಲ) ಯುವ ಸಂಘದ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಸೆ.10ರಂದು ಬೆಳಗ್ಗೆ 10 ಗಂಟೆಯಿಂದ ಯಾದವ ವಧು-ವರರ ಸಮಾವೇಶವನ್ನು ದಿವಾನ್ಸ್ ರಸ್ತೆಯಲ್ಲಿರುವ ಯಾದವ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಮಾಹಿತಿಗಾಗಿ ಮೊ.ನಂ.8105835647, 9901807577 ಮೂಲಕ ಸಂಪರ್ಕಿಸಲು ಸಂಘದ ಪ್ರಕಟಣೆ ಮನವಿ ಮಾಡಿದೆ.


ಸಾರ್ವಜನಿಕ ಸಂಪತ್ತಿನ ಮರುಬಳಕೆಗೆ ಒತ್ತು ನೀಡಿ

ಮೈಸೂರು: ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿರುವ ಪಾದಚಾರಿ ಮಾರ್ಗವನ್ನು ರಿಪೇರಿ ಮಾಡಲಾಗುತ್ತಿದೆ. ರಿಪೇರಿಗಾಗಿ, ಅಳವಡಿಸಿರುವ ಪೇವ್‌ಮೆಂಟ್ ಬ್ಲಾಕ್ಸ್‌ಗಳನ್ನು ತೆಗೆದುಹಾಕಲಾಗುತ್ತಿದೆ. ಇದರಲ್ಲಿ ಬಹುತೇಕ ಶೇ.95ರಷ್ಟು ಸುಸ್ಥಿತಿಯಲ್ಲಿದ್ದು ಮರುಬಳಕೆಗೆ ಯೋಗ್ಯವಾಗಿರುತ್ತವೆ. ಆದರೆ ಇದನ್ನು ತೆಗೆದು ಒಂದು ಟ್ರಾಕ್ಟರ್‌ಗೆ ನಿರ್ಲಕ್ಷ್ಯದಿಂದ ತುಂಬಲಾಗುತ್ತಿದ್ದು ಅದರಿಂದ ಸುಸ್ಥಿತಿಯಲ್ಲಿರುವ ಬ್ಲಾಕ್‌ಗಳು ಒಡೆದು ಹೋಗುತ್ತಿವೆ. ಇದು ಸಾರ್ವಜನಿಕ ಸಂಪತ್ತಿನ ಪೋಲಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಹಿಂದೆ ಸುಸ್ಥಿತಿಯಲ್ಲಿದ್ದ ದೀರ್ಘ ಬಾಳಿಕೆಯ ಚಪ್ಪಡಿಗಳನ್ನು ಸಹ ಇದೇ ರೀತಿ ಪೋಲು ಮಾಡಲಾಗಿದೆ. ಆದ ಕಾರಣ ಟೆಂಡರ್ ನೀಡುವಾಗ ಸಾರ್ವಜನಿಕ ಅಧಿಕಾರಿಗಳು ಮತ್ತು ರಾಜಕಾರಣಿಗಳು ಮರುಬಳಕೆಗೆ ಯೋಗ್ಯವಾದ ಪದಾರ್ಥಗಳನ್ನು ಗಮನದಲ್ಲಿಟ್ಟುಕೊಂಡು ಗುತ್ತಿಗೆದಾರರಿಗೆ ಗುತ್ತಿಗೆ ನೀಡಬೇಕು. ಆದಷ್ಟು ಪದಾರ್ಥಗಳ ಮರುಬಳಕೆಗೆ ಒತ್ತಾಯ ಮಾಡಬೇಕು. ಇಲ್ಲವಾದಲ್ಲಿ ನಿರಂತರವಾಗಿ ಸಾರ್ವಜನಿಕ ಹಣ ವ್ಯರ್ಥವಾಗುವುದಲ್ಲದೆ ಪ್ರಾಕೃತಿಕ ಸಂಪನ್ಮೂಲವೂ ವ್ಯರ್ಥವಾಗುತ್ತದೆ ಎಂದು ಎಸ್.ರವಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪರಿಹಾರಕ್ಕೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ...!?

ಸಚಿವ ಶಿವಾನಂದ ಪಾಟೀಲ್ ಹೇಳಿಕೆಗೆ ಶಾಸಕ ವಿಜಯೇಂದ್ರ ಖಂಡನೆ



- ಗ್ಯಾರಂಟಿಗೇ ಒತ್ತು ನೀಡುತ್ತಿರುವುದರಿಂದ ಅಭಿವೃದ್ಧಿ ಮರೆತಿದೆ
- ರೈತರ ಸಮಸ್ಯೆಗೆ ಸ್ಪಂದಿಸುವ ಕಳಕಳಿಯಂತೂ ಇಲ್ಲವೇ ಇಲ್ಲ



ಬೆಂಗಳೂರು, ಸೆ.6- ಸರ್ಕಾರದ ಪರಿಹಾರ ಪಡೆಯಲು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಸಚಿವ ಶಿವಾನಂದ ಪಾಟೀಲ್ ಹೇಳಿಕೆಯನ್ನು ರಾಜ್ಯ ಬಿಜೆಪಿ ತೀವ್ರವಾಗಿ ಖಂಡಿಸಿದೆ.

ಕಾಂಗ್ರೆಸ್ ಸರ್ಕಾರಕ್ಕೆ ಅಧಿಕಾರದ ಮದ ನೆತ್ತಿಗೇರಿದೆ. ಅವರು ರೈತರು ಮತ್ತು ನಾಡಿನ ಜನತೆ ಬಗ್ಗೆ ಲಘುವಾದ ಮಾತನಾಡುತ್ತಿದ್ದು, ಈ ಬಗ್ಗೆ ಕ್ಷಮೆ ಯಾಚಿಸುವಂತೆ ಆಗ್ರಹಿಸಿದೆ. ರಾಜ್ಯ ಉಪಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಮತ್ತಿತರರು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರಕ್ಕೆ ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಕಳಕಳಿ ಇಲ್ಲ. ಈ ವರ್ಗಕ್ಕೆ ಏನೇ ಸಮಸ್ಯೆ ಬಂದರೂ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ ಎಂದು ಟೀಕಿಸಿದರು. ಗ್ಯಾರಂಟಿ ಜಾತ್ರೆಗೆ ಮಾತ್ರ ಒತ್ತು ನೀಡುತ್ತಿರುವುದರಿಂದ ಅಭಿವೃದ್ಧಿ ಕಡೆಗೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಗಮನ ಹರಿಸುತ್ತಿಲ್ಲ ಎಂದು ಕಿಡಿಕಾರಿದರು.

ಕೊಟ್ಟ ಭರವಸೆ ಈಡೇರಿಸಲಾಗದೆ ಚಾಲಾಕಿನಿಂದ ಕೇಂದ್ರ ಸರ್ಕಾರವನ್ನು ಟೀಕಿಸುತ್ತಾರೆ. ಬರದ ವಿಚಾರದಲ್ಲಿ ಮಾನದಂಡ ಸಡಿಲಿಸಲು ಮುಖ್ಯಮಂತ್ರಿ ಕೇಂದ್ರಕ್ಕೆ ಪತ್ರ ಬರೆಯುತ್ತಾರೆ. ಇದರ ಹಿಂದೆ ದುರುದ್ದೇಶ ಇದೆ. ಗ್ಯಾರಂಟಿ ಈಡೇರಿಸಲು ಸಾಧ್ಯ ಆಗುತ್ತಿಲ್ಲ. ಸರ್ಕಾರಿ ನೌಕರರಿಗೆ ವೇತನ ನೀಡುತ್ತಿಲ್ಲ. ಅಕ್ಕಿ ಬದಲು ಸರಿಯಾಗಿ ಹಣ ಕೊಡುತ್ತಿಲ್ಲ ಎಂದು ಆಕ್ಷೇಪಿಸಿದರು. ಬರಪೀಡಿತ ತಾಲೂಕುಗಳನ್ನು ಘೋಷಿಸುವುದಾಗಿ ಕಂದಾಯ ಸಚಿವರು ಕೆಲದಿನಗಳ ಹಿಂದೆ ಹೇಳಿದ್ದಾರೆ. ಬಳಿಕ ಅದನ್ನು ಮುಂದೂಡಿದ್ದಾರೆ. ಸರ್ವೇ, ರಾಜ್ಯ ಪ್ರವಾಸದ ನೆಪ ಒಡ್ಡುತ್ತಿದ್ದಾರೆ. ಗ್ಯಾರಂಟಿ ಜಾತ್ರೆಗೆ ನಿಮಗೆ ಸಮಯ ಸಿಗುತ್ತದೆ. ಹಾಗಿದ್ದರೆ ನಿಮ್ಮ ಆದ್ಯತೆ ಏನು? ಎಂದು ಕೇಳಿದರು.

ರಾಜ್ಯ ಸರ್ಕಾರಕ್ಕೆ ರೈತರ ಸಮಸ್ಯೆಗೆ ಸ್ಪಂದಿಸುವ ಕಳಕಳಿ, ಇಚ್ಛೆ ಇಲ್ಲ. ಇದಕ್ಕಾಗಿ ಕೇಂದ್ರಕ್ಕೆ ಪತ್ರ ಬರೆಯುತ್ತಿದ್ದಾರೆ. ಬರಪೀಡಿತ ಪ್ರದೇಶ ಘೋಷಣೆ ಯಾವಾಗ, ಪ್ರಾಮಾಣಿಕ ಕಳಕಳಿ ಸರ್ಕಾರಕ್ಕೆ ಇಲ್ಲ. ನೀವಿಲ್ಲಿ ತಡ ಮಾಡುತ್ತಾ ತಮ್ಮ ವೈಫಲ್ಯಗಳನ್ನು ಮುಚ್ಚಿಹಾಕಲು ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದ್ದೀರಾ ಎಂದು ದೂರಿದರು.

ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಅತಿವೃಷ್ಟಿ ಆದಾಗ ಸಚಿವ ಸಂಪುಟ ರಚನೆ ಆಗಿರಲಿಲ್ಲ. ಆದರೂ ತಾವೇ ಸಮೀಕ್ಷೆ ನಡೆಸಿ ಮನೆ ಬಿದ್ದುದಕ್ಕೆ ಹೆಚ್ಚು ಹಣ ನೀಡಿದ್ದರು ಎಂದು ನೆನಪಿಸಿದ ಅವರು, ಸರ್ಕಾರ ತಕ್ಷಣ ಬರ ಪೀಡಿತ ತಾಲೂಕುಗಳನ್ನು ಘೋಷಿಸಿ, ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ರೈತರ ಹಿಡಿಶಾಪ: ಉಪ ಮುಖ್ಯಮಂತ್ರಿ ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಿಂದೆ ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ಮಾಡಿದ್ದರು. ಕಾವೇರಿ ಹೋರಾಟ ಮಾಡುತ್ತಿರುವ ರೈತರು, ಕನ್ನಡಪರ ಹೋರಾಟಗಾರರ ಧ್ವನಿ ಹತ್ತಿಕ್ಕುವ ಕೆಲಸ ನಡೆದಿದೆ. ನುಡಿದಂತೆ ನಡೆಯದ ಸರ್ಕಾರಕ್ಕೆ ರಾಜ್ಯದ ಜನರು, ರೈತರು ಶಾಪ ಹಾಕುತ್ತಿದ್ದಾರೆ ಎಂದರು. ಲೋಡ್ ಶೆಡ್ಡಿಂಗ್ ನಿರಂತರವಾಗಿದೆ. ನನ್ನ ಕ್ಷೇತ್ರ ಶಿಕಾರಿಪುರದಲ್ಲಿ 40 ಸಾವಿರ ಪಂಪ್‌ಸೆಟ್ ಇವೆ. ನೀರು ಮೇಲೆತ್ತಿ ಹಾಯಿಸಲು ಒಂದೆರಡು ತಾಸು ಕೂಡ ಕರೆಂಟ್ ಸಿಗುತ್ತಿಲ್ಲ. 200 ಯೂನಿಟ್ ಕರೆಂಟ್ ಉಚಿತ ಎನ್ನುವ ಸರ್ಕಾರ, ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುತ್ತಿಲ್ಲ. ರೈತರ ಬಗ್ಗೆ ಇವರಿಗೆ ಕನಿಕರ, ಅನುಕಂಪ ಇಲ್ಲದಿರುವುದು ಖಂಡನೀಯ.

ರಾಜ್ಯ ರೈತ ಸಂಘ ಕಾವೇರಿ ವಿಚಾರದಲ್ಲಿ ಸುಪ್ರೀಂಕೋರ್ಟಿನಲ್ಲಿ ದಾವೆ ಹೂಡಿದೆ. ಸರ್ಕಾರವು ನಿಜಾಂಶ ತಿಳಿಸುವ ಸಾಧ್ಯತೆ ಇಲ್ಲ ಎಂದು ಗಮನಿಸಿ ಈ ದಾವೆ ಹೂಡಲಾಗಿದೆ. ರೈತರಿಗೆ ರಾಜ್ಯ ಸರ್ಕಾರದ ಕುರಿತು ವಿಶ್ವಾಸ ಇಲ್ಲ ಎಂದರು.

ರಾಜ್ಯದಲ್ಲಿ ಭೀಕರ ಬರದ ಛಾಯೆ ಆವರಿಸಿದೆ. 196ಕ್ಕೂ ಹೆಚ್ಚು ತಾಲೂಕುಗಳಲ್ಲಿ ಬರದ ವಾತಾವರಣ ನಿರ್ಮಾಣವಾಗಿದೆ. ಅತ್ಯಂತ ತುರ್ತಾಗಿ ತೀರ್ಮಾನ ತೆಗೆದುಕೊಂಡು ಕಾಮಗಾರಿ ನಡೆಸಬೇಕಾದ ರಾಜ್ಯ ಸರ್ಕಾರಕ್ಕೆ ಮಂಪರು ಕವಿದಂತಿದೆ ಎಂದು ಟೀಕಿಸಿದರು. ರಾಜ್ಯ ಸರಕಾರ ಆಮೆ ನಡಿಗೆಯಲ್ಲಿ ಸಾಗುತ್ತಿದೆ. ಇದರಿಂದ ರಾಜ್ಯದ ರೈತರು, ಜನತೆ ಸಂಕಷ್ಟದಲ್ಲಿದ್ದಾರೆ. ಮುಂದೆ ಏನೇ ಅನಾಹುತ ಆದರೂ ರಾಜ್ಯ ಸರ್ಕಾರವೇ ಹೊಣೆ ಹೊರಬೇಕು ಎಂದು ಎಚ್ಚರಿಸಿದರು.

ಬರದ ವಿಚಾರವಾಗಿ ನಿರಂತರ ಸಮೀಕ್ಷೆ ನಡೆದಿದೆ. ಮಾಧ್ಯಮಗಳೂ ರಾಜ್ಯ ಸರ್ಕಾರವನ್ನು ಎಚ್ಚರಿಸುತ್ತಿವೆ. ಇಷ್ಟಾದರೂ ಕೂಡ ಸರ್ಕಾರ ಎಚ್ಚೆತ್ತಿಲ್ಲ. ರೋಮ್ ಹೊತ್ತಿ ಉರಿಯುತ್ತಿದ್ದಾಗ ದೊರೆ ಪಿಟೀಲು ಬಾರಿಸುತ್ತಿದ್ದನಂತೆ ಎಂಬಂತಿದೆ ಇಲ್ಲಿನ ಸರ್ಕಾರದ ದುಸ್ಥಿತಿ ಎಂದು ಟೀಕಿಸಿದರು. ಮುಂಗಾರು ವಿಫಲದಿಂದ ಉಂಟಾದ ಪರಿಸ್ಥಿತಿ ಬಗ್ಗೆ ಕಾಲಾನುಸಾರ ಹವಾಮಾನ ತಜ್ಞರು ರಾಜ್ಯ ಸರ್ಕಾರಕ್ಕೆ ಎಚ್ಚರಿಸಿದ್ದಾರೆ. ಅದನ್ನು ಪರಿಗಣಿಸಿಲ್ಲ ಎಂದು ಆಕ್ಷೇಪಿಸಿದರು.

ರಾಜ್ಯ ಸರ್ಕಾರದ ವೈಫಲ್ಯಗಳನ್ನು ಖಂಡಿಸಿ ಮಾಜಿ ಸಿಎಂ, ರೈತ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಇದೇ 8ರಂದು ಹೋರಾಟ ನಡೆಯಲಿದೆ. ಇದು ನುಡಿದಂತೆ ನಡೆದ ಸರ್ಕಾರವಲ್ಲ. ಇದು ಎಡವುತ್ತಿರುವ ಸರ್ಕಾರ ಎಂದು ರಾಜ್ಯದ ಜನತೆ ಗಮನಿಸಿದ್ದಾರೆ. ಇವರಿಗೆ ಲೋಕಸಭಾ ಚುನಾವಣೆಯಲ್ಲಿ ಜನತೆ ಪಾಠ ಕಲಿಸುತ್ತಾರೆ ಎಂದು ಎಚ್ಚರಿಸಿದರು.

ಸುಪ್ರೀಂಕೋರ್ಟ್‌ನಲ್ಲಿ ಕಾವೇರಿ ವಿಚಾರಣೆ ಮುಂದೂಡಿಕೆ: ಮಂಡ್ಯದಲ್ಲಿ ಹೆಚ್ಚಿದ ಕಾವೇರಿ ಕಿಚ್ಚು

ಮಂಡ್ಯದಲ್ಲಿ ರೈತ ಹಿತರಕ್ಷಣಾ ಸಮಿತಿ ರಸ್ತೆ ತಡೆ



ಮಂಡ್ಯ, ಸೆ.6– ಸುಪ್ರೀಂಕೋರ್ಟ್‌ನಲ್ಲಿ ಕಾವೇರಿ ನದಿ ನೀರಿನ ವಿಚಾರಣೆ ಮುಂದೂಡಿಕೆಯಾದ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ, ಕಾವೇರಿ ಕೊಳ್ಳದ ಜಲಾಶಯಗಳಿಂದ ಹರಿಸುತ್ತಿರುವ ನೀರನ್ನು ಸ್ಥಗಿತ ಮಾಡುವಂತೆ ಒತ್ತಾಯಿಸಿ ಮಂಡ್ಯದಲ್ಲಿ ದಿಢೀರ್ ರಸ್ತೆ ತಡೆ ನಡೆಸಿತು.

ನಗರದ ಸರ್‌ಎಂವಿ ಪ್ರತಿಮೆ ಬಳಿ ಧರಣಿ ನಿರತರಾಗಿದ್ದ ರೈತರು, ಕನ್ನಡಪರ, ಪ್ರಗತಿಪರ ಹೋರಾಟಗಾರರು ವಿಚಾರಣೆ ಮುಂದೂಡಿಕೆಯಾಗಿರುವ ವಿಚಾರ ತಿಳಿದು ಬೆಂಗಳೂರು– ಮೈಸೂರು ಹೆದ್ದಾರಿಗೆ ಇಳಿದು ವಾಹನ ಸಂಚಾರಕ್ಕೆ ಅಡ್ಡಿಪಡಿಸಿದರು.

ಬಾಯಿ ಬಡಿದುಕೊಂಡು ಕೇಂದ್ರ– ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ರಾಜ್ಯದ ರೈತರಿಗೆ ನ್ಯಾಯ ದೊರಕಿಸಿ ಕೊಡುವಲ್ಲಿ ಆಳುವ ಸರ್ಕಾರಗಳು ವಿಫಲವಾಗಿವೆ ಎಂದು ಕಿಡಿಕಾರಿದರು. ನ್ಯಾಯಾಲಯದ ತೀರ್ಪು ಮೂರನೇ ಬಾರಿ ಮುಂದೂಡಿಕೆಯಾಗಿದ್ದು, ಈ ರೀತಿ ವಿಚಾರಣೆ ನಡೆಸದೆ ಇರುವುದು ಪ್ರತಿನಿತ್ಯ ನೀರು ಹರಿಸಲಿ ಎಂಬ ಕುತಂತ್ರವಾಗಿದೆ. ಈಗಾಗಲೇ ಜಲಾಶಯದಲ್ಲಿನ ಕುಡಿಯುವ ನೀರನ್ನು ಬಿಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬದಿ ನೀರನ್ನು ಟ್ಯಾಂಕುಗಳಲ್ಲಿ ತುಂಬಿ ತಮಿಳುನಾಡಿಗೆ ಕಳುಹಿಸಲಿ. ಆಗಲಾದರೂ ಸರ್ಕಾರಕ್ಕೆ ಸಮಾಧಾನವಾಗಲಿದೆಯೇ ಎಂದು ಆಕ್ರೋಶಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿರಂತರ ನೀರು ಹರಿಸಿ ರೈತರಿಗೆ ದ್ರೋಹ ಮಾಡಿದ್ದು ಸಾಕು, ರಾಜ್ಯ ಸರ್ಕಾರ ರೈತರ ಕಾಪಾಡಲು ನಿರ್ಧಾರ ಮಾಡಬೇಕು. ತಕ್ಷಣ ಜಲಾಶಯಗಳಿಂದ ಬಿಟ್ಟಿರುವ ನೀರನ್ನು ಸ್ಥಗಿತ ಮಾಡಬೇಕು. ಕಾವೇರಿ ಕಣಿವೆ ಜಿಲ್ಲೆಗಳ ಶಾಸಕರು ಸರ್ಕಾರದ ಮೇಲೆ ಒತ್ತಡ ಹಾಕಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಸುಪ್ರೀಂಕೋರ್ಟ್‌ನಲ್ಲಿ ಕಾವೇರಿ ವಿಚಾರಣೆ ಮುಂದೂಡಿಕೆಗೆ ಆಕ್ರೋಶ: ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ ಮಾತನಾಡಿ, ಕಾವೇರಿ ನದಿ ನೀರಿನ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯ ಸಕಾರಣ ಇಲ್ಲದೆ ವಿಚಾರಣೆ ಮುಂದೂಡಿರುವುದು ನ್ಯಾಯಸಮ್ಮತವಲ್ಲ. ಆಳುವ ಸರ್ಕಾರಗಳು ಮತ್ತು ಚುನಾಯಿತ ಜನಪ್ರತಿನಿಧಿಗಳು ರೈತರಿಗೆ ನ್ಯಾಯ ದೊರಕಿಸಿಕೊಡುವಲ್ಲಿ ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನ್ಯಾಯಾಧೀಶರಿಗೆ ಅನಾರೋಗ್ಯದ ನೆಪವೊಡ್ಡಿ ವಿಚಾರಣೆಯನ್ನು ಸೆ 21ಕ್ಕೆ ಮುಂದೂಡಿಕೆ ಮಾಡಿರುವುದು ನೋವಿನ ಸಂಗತಿಯಾಗಿದೆ. ತಮಿಳುನಾಡಿಗೆ ನಿರಂತರವಾಗಿ ನೀರು ಹರಿಸಿ ಜಲಾಶಯಗಳನ್ನು ಬರಿದು ಮಾಡಲಾಗಿದೆ. ಕುಡಿಯುವ ನೀರನ್ನು ಸಹ ಬಿಡಲಾಗುತ್ತಿದೆ. ಇದರಿಂದ ಕಾವೇರಿ ಕಣಿವೆ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಲಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು ಹೊರಬರುವವರೆಗೂ ಪ್ರತಿನಿತ್ಯ ನೀರು ಹರಿಸುತ್ತಿದ್ದರೆ ರೈತರ ಸ್ಥಿತಿಯನ್ನು ಹೇಳತೀರದಾಗಿದೆ ಎಂದರು.

ಸಂಸದೆ ಸುಮಲತಾ ಅಂಬರೀಶ್ ಸೇರಿ ಕಾವೇರಿ ಜಲಾನಯನ ಪ್ರದೇಶದ ಎಂಟು ಜಿಲ್ಲೆಗಳ ಸಂಸದರು ರೈತರಿಗೆ ದ್ರೋಹ ಮಾಡಿದ್ದಾರೆ. ಕಾವೇರಿ ನೀರೆಲ್ಲ ಕೊಚ್ಚಿ ಹೋಗುತ್ತಿದೆ. ಈಗಲಾದರೂ ಬಾಯಿ ತೆರೆಯಿರಿ. ರಾಜ್ಯದ 28 ಸಂಸದರು ಕೇಂದ್ರಕ್ಕೆ ತೆರಳಿ ನೀರು ನಿಲ್ಲಿಸುವ ಕೆಲಸ ಮಾಡಲು ಬೀದಿಗಿಳಿದು ಹೋರಾಡಲಿ ಎಂದು ಆಗ್ರಹಿಸಿದರು.

ಸಂಸದೆ ಸುಮಲತಾ ಅಂಬರೀಶ್ ಸಮಯ ಪ್ರಜ್ಞೆಯಿಂದ ನಾಜೂಕಾಗಿ ಮಾತನಾಡುವ ಕಲೆ ಹೊಂದಿದ್ದು, ರೈತರಿಗೆ ಅನ್ಯಾಯ ಆಗಿದ್ದು ಈಗಲಾದರೂ ಮಾತನಾಡಲಿ. ರಾಜ್ಯ ಸರ್ಕಾರ ರೈತರ ಬದುಕಿನ ಜೊತೆ ಚೆಲ್ಲಾಟವಾಡುತ್ತಿದೆ. ನ್ಯಾಯಾಲಯದ ಎದುರು ಸಮರ್ಥ ವಾದ ಮಂಡನೆಯಿಂದ ಪರಿಹಾರ ಪಡೆಯಲು ಸಾಧ್ಯವಿದೆ. ಆದರೆ ನೀರು ಹರಿಸುತ್ತಾ ರೈತರ ಬದುಕನ್ನು ಸಂಕಷ್ಟಕ್ಕೆ ದೂಡುತ್ತಿದ್ದು, ಕೇಂದ್ರ ಸರ್ಕಾರ ಎಲ್ಲವನ್ನು ಕಂಡು ಮೌನವಹಿಸಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಜಿ.ಬಿ. ಶಿವಕುಮಾರ್, ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಕೆ.ಬೋರಯ್ಯ, ಗುರುಪ್ರಸಾದ್ ಕೆರಗೋಡು, ಬೇಕ್ರಿ ರಮೇಶ್, ಇಂಡುವಾಳು ಚಂದ್ರಶೇಖರ್, ಇ.ಬಸವರಾಜ್, ಕನ್ನಡ ಸೇನೆ ಮಂಜುನಾಥ್, ತಗ್ಗಳ್ಳಿ ವೆಂಕಟೇಶ್, ಕರವೇ ಚಿದಂಬರಂ, ಶಂಕರೇಗೌಡ, ಎಂ.ವಿ. ಕೃಷ್ಣ ಮುದ್ದೇಗೌಡ, ಕೃಷ್ಣಕುಮಾರ್ ಭಾಗವಹಿಸಿದ್ದರು.

ಕಸ್ತೂರಿ ಕರ್ನಾಟಕ ಜನಪರ ವೇದಿಕೆಯಿಂದ ಉರುಳು ಸೇವೆ



ಮಂಡ್ಯ, ಸೆ.6– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರು ಸ್ಥಗಿತ ಮಾಡಬೇಕು ಹಾಗೂ ಸುಪ್ರೀಂ ತೀರ್ಪು ರಾಜ್ಯದ ಪರ ಬರಲಿ ಎಂದು (ಸುಪ್ರೀಂಕೋರ್ಟ್ ವಿಚಾರಣೆ ಮುಂದೂಡಿಕೆಗೂ ಮುನ್ನ) ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಕಾರ್ಯಕರ್ತರು ಮಂಡ್ಯ ನಗರ ದಲ್ಲಿ ಉರುಳು ಸೇವೆ ಮಾಡಿ ಪ್ರತಿಭಟಿಸಿದರು.

ಬುಧವಾರ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಉರುಳು ಸೇವೆ ಆರಂಭಿಸಿದ ವೇದಿಕೆಯ ಪದಾಧಿಕಾರಿಗಳು, ಹಿತರಕ್ಷಣಾ ಸಮಿತಿಯ ಧರಣಿ ಸ್ಥಳವಾದ ಸರ್‌ಎಂವಿ ಪ್ರತಿಮೆವರೆಗೆ ಉರುಳುವ ಮೂಲಕ ಕಾವೇರಿ ವಿಚಾರದಲ್ಲಿ ನ್ಯಾಯಕ್ಕೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವೇದಿಕೆಯ ರಾಜ್ಯಾಧ್ಯಕ್ಷ ರಮೇಶ್‌ಗೌಡ, ರಾಜ್ಯ ಕಾಂಗ್ರೆಸ್ ಸರ್ಕಾರ ನೀರು ಹರಿಸುತ್ತಿರುವುದನ್ನು ನೋಡಿದರೆ ಮಳೆ ಇಲ್ಲ, ಬೆಳೆ ಇಲ್ಲ. ಮರದಲ್ಲಿ ಗಿಳಿಯೂ ಇಲ್ಲ, ಎಲ್ಲಾ ಮಾಯ, ಎಲ್ಲಾ ಮಾಯ ಮುಂದಿನ ದಿನಗಳಲ್ಲಿ ಕಾವೇರಿ ಕಣಿವೆಯ ಜಮೀನುಗಳಲ್ಲಿ ಎಲ್ಲಾ ಮಾಯ ಎಂದು ಭವಿಷ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಕೆಆರ್‌ಎಸ್ ಜಲಾಶಯದಿಂದ ನಿರಂತರವಾಗಿ ನೀರು ಹರಿದು ಹೋಗುತ್ತಿರುವುದರಿಂದ ಜಲಾಶಯದಲ್ಲಿ ನೀರಿನ ಮಟ್ಟ ಕುಸಿದಿದೆ. ಇದೇ ರೀತಿ ನೀರು ಬಿಡುತ್ತಿದ್ದರೆ ರೈತರ ಪಾಡೇನು? ರಾಜ್ಯ ಸರ್ಕಾರ ರೈತರಿಗೆ ದ್ರೋಹ ಮಾಡುತ್ತಿದೆ. ಸರ್ಕಾರದ ಮೇಲಿನ ನಂಬಿಕೆ ಹುಸಿಯಾಗಿದ್ದು, ಸರ್ಕಾರವನ್ನು ನಂಬಿ ಕುಳಿತರೆ ಕುಡಿಯಲು ನೀರು ಸಹ ಸಿಗುವುದಿಲ್ಲ ಎಂದರು.

ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರಿಲ್ಲದಂತಾಗಿದೆ. ನಮಗೆ ನೀರು ಇಲ್ಲದ ಮೇಲೆ ತಮಿಳುನಾಡಿಗೆ ಹೇಗೆ ಕೊಡಲು ಸಾಧ್ಯ. ಆದರೆ ರಾಜ್ಯ ಸರ್ಕಾರ ತಮಿಳುನಾಡಿಗೆ ನಿರಂತರವಾಗಿ ನೀರು ಹರಿಸುತ್ತಿದೆ. ತಕ್ಷಣ ನೀರು ಸ್ಥಗಿತ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವೇದಿಕೆಯ ಯೋಗೇಶ್‌ಗೌಡ, ಶ್ರೀಧರ್, ನಾಗಲಕ್ಷ್ಮಿ, ರೋಸಿ, ನಿರ್ಮಲಾ, ತಸ್ನಿಯಾ ಬಾನು, ಸೋಮಶೇಖರ್, ಗೋವಿಂದನಾಯಕ್, ಜಯಸಿಂಹ, ಜೇಸು, ರಂಜಿತ್ ಗೌಡ, ಕೃಷ್ಣೇಗೌಡ, ದೇವರಾಜ್ ಇತರರು ಭಾಗವಹಿಸಿದ್ದರು.

ಭಾರತೀನಗರದಲ್ಲಿ ಬೈಕ್ ರ್‍ಯಾಲಿ



ಭಾರತೀನಗರ, ಸೆ.6– ಕೆಆರ್‌ಎಸ್ ಅಣೆಕಟ್ಟೆಯಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಕನ್ನಡ ಸೇನೆ ಕರ್ನಾಟಕ ಮದ್ದೂರು ತಾಲೂಕು ಘಟಕದ ವತಿಯಿಂದ ಬೈಕ್ ರ್‍ಯಾಲಿ ಮೂಲಕ ಪ್ರತಿಭಟನೆ ನಡೆಸಲಾಯಿತು.

ಭಾರತೀನಗರದ ವಿಶ್ವೇಶ್ವರಯ್ಯ ಪುತ್ಥಳಿ ಬಳಿ ಕನ್ನಡ ಸೇನೆ ಕರ್ನಾಟಕದ ಕಾರ್ಯಕರ್ತರು ಜಮಾಯಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಕೂಡಲೇ ಕೆಆರ್‌ಎಸ್ ಅಣೆಕಟ್ಟೆಯಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು. ನಂತರ ಕೆ.ಎಂ.ದೊಡ್ಡಿ ವಿಶ್ವೇಶ್ವರಯ್ಯ ಪುತ್ಥಳಿಯಿಂದ ಮಂಡ್ಯನಗರದ ವಿಶ್ವೇಶ್ವರಯ್ಯ ಪುತ್ಥಳಿವರೆಗೆ ಬೈಕ್‌ರ್‍ಯಾಲಿ ನಡೆಸಿ ಪ್ರತಿಭಟಿಸಿದರು. ಇದೇ ವೇಳೆ ಮದ್ದೂರು ನಗರಾಧ್ಯಕ್ಷ ಕಾಡುಕೊತ್ತನಹಳ್ಳಿ ಸೋಮಶೇಖರ್, ಮೆಣಸಗೆರೆ ಶಿವಲಿಂಗಪ್ಪ, ಅಣ್ಣೂರು ಅಭಿಷೇಕ್, ಸೊಳ್ಳೆಪುರದ ಶ್ರೀಧರ್, ಕಾಡುಕೊತ್ತನಹಳ್ಳಿ ಶಿವಕುಮಾರ್, ತಾಲೂಕು ಮಹಿಳಾ ಅಧ್ಯಕ್ಷೆ ಆತಗೂರು ವರುಣ, ಶಿವಪುರದ ಚಂದು, ಶಿವು, ಸಂಘಟನೆಯ ಎಲ್ಲಾ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಶ್ರೀರಂಗಪಟ್ಟಣದಲ್ಲಿ ಚಡ್ಡಿ ಹೋರಾಟ



ಶ್ರೀರಂಗಪಟ್ಟಣ, ಸೆ.6– ಕಾವೇರಿ ಹೋರಾಟದ ಕಿಚ್ಚು ಮತ್ತಷ್ಟು ಹೆಚ್ಚಾಗುತ್ತಿದ್ದು, ಶ್ರೀರಂಗಪಟ್ಟಣದಲ್ಲಿ ಭೂಮಿ ತಾಯಿ ಹೋರಾಟ ಸಮಿತಿ ಯಿಂದ ಚಡ್ಡಿ ಮೆರವಣಿಗೆ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿತು.

ಭೂಮಿತಾಯಿ ಹೋರಾಟ ಸಮಿತಿ ಅಧ್ಯಕ್ಷ ಕೃಷ್ಣೇಗೌಡ ಹಾಗೂ ಮುಖಂಡ ಕೆ.ಎಸ್. ನಂಜುಂಡೇಗೌಡ ಅವರ ನೇತೃತ್ವದಲ್ಲಿ ಸಮಿತಿ ಸದಸ್ಯರು ಹಾಗೂ ರೈತರು ಚಡ್ಡಿ ಮೆರವಣಿಗೆ ಮಾಡುವ ವಿನೂತನ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಕುವೆಂಪು ವೃತ್ತದಿಂದ ತಾಲೂಕು ಕಚೇರಿವರೆಗೂ ರೈತರು ಪಟ್ಟಣದ ಮುಖ್ಯ ಬೀದಿ ಮೂಲಕ ತಮಟೆ ಸದ್ದಿನೊಂದಿಗೆ ಚಡ್ಡಿ ಧರಿಸಿ, ಮೆರವಣಿಗೆ ನಡೆಸಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ತಮಿಳುನಾಡಿಗೆ ನೀರು ಬಿಟ್ಟಿರುವುದನ್ನು ತಕ್ಷಣ ನಿಲ್ಲಿಸುವಂತೆ ಒತ್ತಾಯ ಮಾಡಿದರು.

ಸಮಿತಿಯ ಮುಖಂಡರಾದ ಮಹದೇವು, ಕೃಷ್ಣ, ಮಂಜುನಾಥ್, ಮರೀಗೌಡ, ಮಹಾಲಿಂಗು, ಮಹೇಶ್ ಸೇರಿದಂತೆ ಇತರ ಕಾರ್ಯಕರ್ತರು ಬಾಯಿ ಬಡಿದುಕೊಂಡು ನೀರನ್ನು ಸ್ಥಗಿತಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ರೈತರ ಹಿತ ಕಾಯುವಲ್ಲಿ ಸರ್ಕಾರ ಬದ್ಧ

ಮಂಡ್ಯ,ಸೆ.6– ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ವಿಚಾರಣೆ ಮುಂದೂಡಿರುವ ಹಿನ್ನೆಲೆ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರೊಂದಿಗೆ ಚರ್ಚಿಸಿ ಸಂಕಷ್ಟ ಪರಿಸ್ಥಿತಿಯಲ್ಲಿರುವ ರೈತರ ಹಿತ ಕಾಯುವುದು ಹಾಗೂ ಮುಂದಿನ ನಡೆಗಳ ನಿರ್ಧಾರ ಕೈಗೊಳ್ಳುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.



ನಾಗಮಂಗಲ ಜಲಸೂರು ರಸ್ತೆ ಕಾಮಗಾರಿ ವೀಕ್ಷಣೆ ವೇಳೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಇಂದು ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯದ ಪರ ಆದೇಶ ಬರುವ ಆಶಾಭಾವನೆ ಇತ್ತು, ಸುಪ್ರೀಂ ಕೋರ್ಟ್ ವಿಚಾರಣೆಯನ್ನು ಸೆಪ್ಟೆಂಬರ್ 21ಕ್ಕೆ ಮುಂದೂಡಿರುವ ಹಿನ್ನೆಲೆ ಅಲ್ಲಿಯವರೆಗೂ ತಮಿಳುನಾಡಿಗೆ ನೀರು ಬಿಡಲು ಕಷ್ಟವಾಗುತ್ತದೆ. ಈ ಹಿನ್ನೆಲೆ ಕಾವೇರಿ ನದಿ ನೀರು ಪ್ರಾಧಿಕಾರದ ಮುಂದೆ ರಾಜ್ಯದ ಸಂಕಷ್ಟ ಪರಿಸ್ಥಿತಿಯನ್ನು ವಿವರಿಸುವ ಪ್ರಯತ್ನವನ್ನು ಮತ್ತೆ ನಮ್ಮ ರಾಜ್ಯದ ಪರ ವಕೀಲರ ಮೂಲಕ ಮುಂದುವರೆಸುವುದಾಗಿ ತಿಳಿಸಿದರು.

ಕೆಆರ್‌ಎಸ್ ಅಣೆಕಟ್ಟಿನಲ್ಲಿ ಸದ್ಯ ಸಂಗ್ರಹವಾಗಿರುವ ನೀರು ಜನರಿಗೆ ಕುಡಿಯುವ ನೀರು ಮಾತ್ರ ಒದಗಿಸಲು ಸಾಧ್ಯವಾಗುತ್ತದೆ, ರೈತರ ಬೆಳೆಗಳಿಗೂ ನೀರು ಬಿಡದ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆ ಪ್ರಾಧಿಕಾರದ ಗಮನ ಸೆಳೆಯುವ ಪ್ರಯತ್ನ ಮುಂದುವರೆಸುವುದಾಗಿ ಸಚಿವರು ತಿಳಿಸಿದರು.

ಚಾಕುವಿನಿಂದ ಇರಿದು ಯುವಕ ಹತ್ಯೆ: ತಾಯಿ, ಮಗನ ವಿರುದ್ಧ ಕೇಸ್

ಕೆ.ಆರ್.ಪೇಟೆ, ಸೆ.6– ತಾಲೂಕಿನ ಶೀಳನೆರೆ ಹೋಬಳಿಯ ಮಲ್ಕೋನಹಳ್ಳಿ ಗ್ರಾಮದಲ್ಲಿ ಕ್ಷುಲ್ಲಕ ಕಾರಣಕ್ಕೆ ಯುವಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಮಂಗಳವಾರ ರಾತ್ರಿ ಜರುಗಿದೆ.



ಗ್ರಾಮದ ಯೋಗೇಶ್ (32) ಕೊಲೆಯಾದವನಾಗಿದ್ದು, ಅದೇ ಗ್ರಾಮದ ಭಾಗ್ಯಮ್ಮ ಮತ್ತು ಆಕೆಯ ಪುತ್ರ ಪ್ರದೀಪ್ ವಿರುದ್ಧ ಪ್ರಕರಣ ದಾಖಲಾಗಿದೆ. ಯೋಗೇಶ್ ಮೇಲೆ ತಾಯಿ ಮತ್ತು ಮಗ ಪದೇ ಪದೆ ಜಗಳ ಮಾಡುತ್ತಿದ್ದರೆನ್ನಲಾಗಿದ್ದು, ನಿನ್ನೆ ಸಂಜೆ ನಡೆದ ಜಗಳ ವಿಕೋಪಕ್ಕೆ ತಿರುಗಿ ಯೋಗೇಶ್‌ನನ್ನು ಪ್ರದೀಪ್ ಚಾಕುವಿನಿಂದ ಇರಿದ ಪರಿಣಾಮ ತೀವ್ರವಾಗಿ ಗಾಯಗೊಂಡ ಯೋಗೇಶ್ ಸ್ಥಳದಲ್ಲೇ ಕುಸಿದು ಬಿದ್ದಿದ್ದಾನೆ. ತಕ್ಷಣವೇ ಕೆ.ಆರ್.ಪೇಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಕೆ.ಆರ್.ಪೇಟೆ ಟೌನ್ ಠಾಣೆ ಪೊಲೀಸರು ಪ್ರದೀಪ್ ಮತ್ತು ಭಾಗ್ಯಮ್ಮ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ಅವರ ಬಂಧನಕ್ಕೆ ಹುಡುಕಾಟ ನಡೆಸಿದ್ದಾರೆ.

ಲೋಕಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆ

ಸೆ.10ರಂದು ಬೆಂಗಳೂರಲ್ಲಿ ಜೆಡಿಎಸ್ ಬೃಹತ್ ಸಭೆ

ಮೈಸೂರು, ಸೆ.6(ಪಿಎಂ)– ಮುಂಬರುವ ಲೋಕಸಭೆ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗಳಿಗೆ ಜೆಡಿಎಸ್ ಪಕ್ಷವನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಸೆ.10ರಂದು ಬೆಂಗಳೂರಿನಲ್ಲಿ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಬೃಹತ್ ಸಭೆ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 11ಕ್ಕೆ ಬೆಂಗಳೂರಿನ ಅರಮನೆ ಮೈದಾನದ ನಲಪಾಡ್ ಪೆವಿಲಿಯನ್‌ನಲ್ಲಿ (ಗೇಟ್ ನಂ.5) ಸಭೆ ನಡೆಯಲಿದೆ. ರಾಜ್ಯಸಭಾ ಸದಸ್ಯರೂ ಆದ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಅವರು ಸಭೆಯಲ್ಲಿ ಉಪಸ್ಥಿತರಿರಲಿದ್ದಾರೆ.

ರಾಜ್ಯ, ನಗರ, ಜಿಲ್ಲಾ, ತಾಲೂಕು ಮಟ್ಟದ ಪಕ್ಷದ ಮುಖಂಡರು, ಹಾಲಿ– ಮಾಜಿ ಲೋಕಸಭಾ ಸದಸ್ಯರು, ಮಾಜಿ ಸಚಿವರು, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಹಾಲಿ–ಮಾಜಿ ಸದಸ್ಯರು, 2023ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು, ಜಿಲ್ಲಾಧ್ಯಕ್ಷರು, ತಾಲೂಕು ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಮಹಾಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಪದಾಧಿಕಾರಿಗಳು, ವಿವಿಧ ವಿಭಾಗಗಳ ಅಧ್ಯಕ್ಷರು, ಪದಾಧಿಕಾರಿಗಳು, ನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ತಾಲೂಕು–ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಹಾಲಿ–ಮಾಜಿ ಸದಸ್ಯರು, ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದು ಪಕ್ಷದ ವರಿಷ್ಠರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತು ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಾಜಮಂಗಲದ ರೋಟರಿ ಮೈಸೂರು ಉತ್ತರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಚಿತ್ರದಲ್ಲಿ ರೋಟರಿ ಶಾಲೆಯ ಎಲ್ಲಾ ಶಿಕ್ಷಕರು ಹಾಗೂ ರಾಧಾ, ಕೃಷ್ಣ ರುಕ್ಮಿಣಿ ವೇಷದಲ್ಲಿರುವ ಮಕ್ಕಳನ್ನು ಕಾಣಬಹುದು.

ವಾರ್ಡ್ 23ರಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಪುನರಾರಂಭ

ಮಾಜಿ ಶಾಸಕ ನಾಗೇಂದ್ರರಿಗೆ ಕೃತಜ್ಞತೆ ಸಲ್ಲಿಸಿದ ನಾಗರಿಕರು



ಮೈಸೂರು,ಸೆ.6(ಪಿಎಂ)– ವಿಧಾನಸಭಾ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿದ್ದ ಮೈಸೂರು ಮಹಾನಗರ ಪಾಲಿಕೆ ವಾರ್ಡ್ 23ರ ವ್ಯಾಪ್ತಿಯ ವಿವಿಧ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಪುನರಾರಂಭಗೊಂಡಿದೆ.

ಪ್ರಕಟಣೆಯಲ್ಲಿ ವಾರ್ಡಿನ ಪಾಲಿಕೆ ಸದಸ್ಯೆ ಪ್ರಮೀಳಾ ಭರತ್ ಈ ವಿಷಯ ತಿಳಿಸಿದ್ದಾರೆ. ಎಲ್.ನಾಗೇಂದ್ರ ಅವರು ಶಾಸಕರಾಗಿದ್ದಾಗ 2021–22ನೇ ಸಾಲಿನ ಶಾಸಕರ ವಿಶೇಷ ಅನುದಾನದಲ್ಲಿ ಈ ಕಾಮಗಾರಿ ಆರಂಭಗೊಂಡಿದ್ದವು. ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸ್ಥಗಿತವಾಗಿ ಇದೀಗ ಮತ್ತೆ ಆರಂಭಗೊಂಡಿವೆ ಎಂದು ಅವರು ತಿಳಿಸಿದ್ದಾರೆ. ವಾರ್ಡ್‌ನ ಸುಬ್ಬರಾಯನಕೆರೆಯ ಕ್ಷೇತ್ರಯ್ಯ ರಸ್ತೆ, ಲಕ್ಷ್ಮಿ ವಿಲಾಸ ರಸ್ತೆ ಹಾಗೂ ಇದರ ಅಡ್ಡರಸ್ತೆಗಳು, ಹಳೆ ಬಂಡಿಕೇರಿಯ ಆಯ್ದ ರಸ್ತೆಗಳು, ಎಂ.ಎನ್.ಜೋಯಿಸ್ ರಸ್ತೆ, ಗಾಣಿಗರ ಬೀದಿಯ ಮಾರಮ್ಮ ದೇವಸ್ಥಾನ ಎದುರಿನ ರಸ್ತೆ, ವೀಣೆ ಶೇಷಣ್ಣ ರಸ್ತೆ, ದಿವಾನ್ಸ್ ರಸ್ತೆ, ಮರಿಮಲ್ಲಪ್ಪ ಶಾಲೆಯಿಂದ ಚಾಮರಾಜ ಜೋಡಿ ರಸ್ತೆವರೆಗಿನ ಅಡ್ಡ ರಸ್ತೆ, ಕುರುಬಗೇರಿ ರಸ್ತೆ, ಬಿಡಾರಂ ಕೃಷ್ಣಪ್ಪ ರಸ್ತೆಯ ಲೋಕಾಭಿರಾಮ ಮಂದಿರ ಎದುರಿನ ರಸ್ತೆ, ಹಳೇ ಸಂತೇಪೇಟೆ ರಸ್ತೆ (ರಮಾವಿಲಾಸ ರಸ್ತೆಯಿಂದ ಡಿ.ದೇವರಾಜ ಅರಸು ರಸ್ತೆವರೆಗೆ) ಸೇರಿದಂತೆ ವಿವಿಧ ರಸ್ತೆಗಳ ಡಾಂಬರೀಕರಣ ಕಾಮಗಾರಿ ಪುನರಾರಂಭಗೊಂಡಿವೆ.

ಅಲ್ಲದೆ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಕಾಮಗಾರಿಗೂ ಮತ್ತೆ ಚಾಲನೆ ನೀಡಲಾಗಿದೆ. ರಾಜ್ಯದಲ್ಲಿ ನಮ್ಮ ಬಿಜೆಪಿ ಸರ್ಕಾರ ಅವಧಿಯಲ್ಲಿ ಅಂದಿನ ಶಾಸಕ ಎಲ್.ನಾಗೇಂದ್ರ ಅವರು ವಾರ್ಡಿಗೆ ಹೆಚ್ಚು ಅನುದಾನ ಕಲ್ಪಿಸಿ, ಈ ಅಭಿವೃದ್ಧಿ ಕಾಮಗಾರಿಗಳು ನಡೆಯಲು ಕಾರಣರಾದರು. ಅವರಿಗೆ ವಾರ್ಡಿನ ಸಾರ್ವಜನಿಕರ ಪರವಾಗಿ ಅಭಿನಂದಿಸುವುದಾಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮ್ಮ ಆರೋಗ್ಯ ಕುರಿತ ವದಂತಿಗೆ ರಮ್ಯಾ ಸ್ಪಷ್ಟನೆ




ಮೈಸೂರು, ಸೆ6– ಮಾಜಿ ಸಂಸದೆಯೂ ಆದ ಸ್ಯಾಂಡಲ್‌ವುಡ್ ನಟಿ ರಮ್ಯಾ ಅವರು ತಮ್ಮ ಆರೋಗ್ಯದ ಬಗ್ಗೆ ಹರಡಿದ್ದ ವದಂತಿಗೆ ಟ್ವೀಟ್ ಮೂಲಕ ಸ್ಪಷ್ಟನೆ ನೀಡಿದ್ದು, 'ನಮ್ಮ ಊರು ಬೆಂಗಳೂರಿನಲ್ಲಿ ಸಿಗೋಣ' ಎಂದು ಹಾರ್ಟ್ ಇಮೋಜಿಗಳನ್ನು ಹಾಕುವ ಮೂಲಕ ತಾವು ಆರೋಗ್ಯದಿಂದಿರುವುದಾಗಿ ತಿಳಿಸಿದ್ದಾರೆ. ತಮಿಳು ಕಿರುತೆರೆ ನಟಿ ರಮ್ಯಾ ಅವರಿಗೆ ಹೃದಯಾಘಾತವಾಗಿದೆ. ಆದರೆ ಸಾಮಾಜಿಕ ಜಾಲತಾಣದಲ್ಲಿ ವಿದೇಶದಲ್ಲಿರುವ ಸ್ಯಾಂಡಲ್‌ವುಡ್ ನಟಿ ರಮ್ಯಾ ಅವರಿಗೆ ಹೃದಯಾಘಾತವಾಗಿದೆ ಎಂದು ವೈರಲ್ ಆಗಿತ್ತು. ಈ ಸಂಬಂಧ ರಮ್ಯಾ ಸ್ಪಷ್ಟನೆ ನೀಡಿದ್ದಾರೆ.

ಲಿಂಗಾಂಬುಧಿ, ಕುಕ್ಕರಹಳ್ಳಿ ಕೆರೆ ಮೇಲುಸ್ತುವಾರಿಗೆ ಡಿಸಿ ನೇತೃತ್ವದ ಸಮಿತಿ

ಸ್ಥಳೀಯ ಸಂಸ್ಥೆಗಳಿಗೆ ನಿವೇಶನ ಹಸ್ತಾಂತರದ ಪ್ರಸ್ತಾಪ

ಮೈಸೂರು, ಸೆ. 6– ಮೈಸೂರಿನ ಲಿಂಗಾಂಬುಧಿ ಕೆರೆ ಮತ್ತು ಕುಕ್ಕರಹಳ್ಳಿ ಕೆರೆಗಳ ಮೇಲುಸ್ತುವಾರಿಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಲು ಇಂದು ನಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.



ಲಿಂಗಾಂಬುಧಿ ಕೆರೆಯಲ್ಲಿ ಕಲುಷಿತ ನೀರಿನಿಂದಾಗಿ ಸಾವಿರಾರು ಮೀನುಗಳ ಮಾರಣಹೋಮ ನಡೆದಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪವಾಗಿದ್ದು, ಈ ಕೆರೆಗಳ ಮೇಲುಸ್ತುವಾರಿಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮುಡಾ ಹಾಗೂ ನಗರಪಾಲಿಕೆ ಆಯುಕ್ತರನ್ನೊಳಗೊಂಡಂತೆ ಪರಿಸರ ಕಾಳಜಿ ಹೊಂದಿರುವ ಸಾರ್ವಜನಿಕರನ್ನು ಸೇರಿಸಿಕೊಂಡು ಸಮಿತಿ ರಚಿಸಲು ಸಭೆ ಒಪ್ಪಿಗೆ ನೀಡಿತು. ಕುಕ್ಕರಹಳ್ಳಿ ಕೆರೆ ಅಭಿವೃದ್ಧಿಗಾಗಿ 60 ಲಕ್ಷ ರೂ. ವೆಚ್ಚದ ಡಿಪಿಆರ್ ತಯಾರಿಸಲು ಎನ್‌ಜಿಓವೊಂದಕ್ಕೆ ಅನುಮತಿ ನೀಡಲು ಸಭೆ ನಿರ್ಧರಿಸಿತು.

ಮೈಸೂರು ಹೊರ ವಲಯದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ನಿವೇಶನಗಳನ್ನು ಮುಡಾದಿಂದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕೆಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಪ್ರಸ್ತಾವನೆ ಮುಂದಿಟ್ಟರು. ಸ್ಥಳೀಯ ಸಂಸ್ಥೆಗಳು ಆರ್ಥಿಕ ಸ್ವಾವಲಂಬನೆ ಹೊಂದಬೇಕಾದರೆ, ಆದಾಯದ ಮೂಲಗಳನ್ನು ಕಂಡುಕೊಳ್ಳಬೇಕಿದೆ ಎಂದರು. ಈ ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು.

ಕೆ.ಆರ್. ಠಾಣೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ



ಮೈಸೂರು, ಸೆ.6– ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಕೆಆರ್ ಪೊಲೀಸ್ ಠಾಣೆ ಆವರಣದಲ್ಲಿ ಸಿಬ್ಬಂದಿ, ಶ್ರೀಕೃಷ್ಣನಿಗೆ ಅಲಂಕರಿಸಿ, ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಕೃಷ್ಣರಾಜ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ನಾಗೇಗೌಡ ಮಾತನಾಡಿ, ಪ್ರತಿ ವರ್ಷ ಠಾಣೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸುತ್ತಾ ಬಂದಿದ್ದೇವೆ. ಅದೇ ರೀತಿ ಈ ವರ್ಷವೂ ಸ್ಥಳೀಯರ ಜೊತೆ ಸೇರಿ ಸರಳವಾಗಿ ಠಾಣೆಯಲ್ಲಿ ಆಚರಿಸಿದ್ದೇವೆ.

ಶ್ರೀಕೃಷ್ಣ ಸತ್ಯ, ನ್ಯಾಯಕ್ಕಾಗಿ ಹೋರಾಟ ನಡೆಸಿದ. ಸಮಾಜದಲ್ಲಿ ಇಂದಿಗೂ ಕಂಸ, ದುರ್ಯೋಧನರು ಇದ್ದಾರೆ. ಅಂಥ ಶಕ್ತಿಯ ನಾಶಕ್ಕೆ ಪ್ರಯತ್ನ ಮಾಡುವ ಚಿಂತನೆ ಮಾಡಬೇಕಾಗಿದೆ. ಶ್ರೀಕೃಷ್ಣನ ದಿವ್ಯ ಸಂದೇಶ ಅನುಸರಿಸಿ 'ಶ್ರೀಕೃಷ್ಣ ಪರಮಾತ್ಮ ಲೋಕಪ್ರಿಯ ದೇವರು. ತುಳಸಿಯ ಒಂದು ಎಲೆ ಅರ್ಪಿಸಿದರೂ ನಮ್ಮೆಲ್ಲರನ್ನು ರಕ್ಷಿಸುತ್ತಾನೆ. ಶ್ರೀಕೃಷ್ಣನ ದಿವ್ಯ ಸಂದೇಶ ಅನುಸರಿಸಿದರೆ ವಿಶ್ವವೇ ನಂದನವನವಾಗಿ ಶಾಂತಿ ನೆಲೆಸಲಿದೆ ಸಮಾಜದಲ್ಲಿ ಅಂತಃ ಕಲಹಗಳನ್ನು ತೊಡೆದುಹಾಕಲು ಶ್ರೀಕೃಷ್ಣ ಸಂದೇಶಗಳು ನೆರವಾಗುತ್ತವೆ. ಉತ್ತಮ ಸಮಾಜ ನಿರ್ಮಾಣದ ಕೆಲಸಗಳು ಕೃಷ್ಣನ ಅನುಗ್ರಹದಿಂದ ಸಾಧ್ಯವಿದೆ ಎಂದರು. ನೂರಾರು ದೇಶಗಳಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮ ಆಚರಿಸುವ ಮೂಲಕ ಜಗತ್ತಿನ ನಾಯಕ ಶ್ರೀಕೃಷ್ಣ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಸ್ವಂತಕ್ಕೆ ಏನೂ ಬಯಸದೆ ಸಮಾಜಕ್ಕಾಗಿ ಬದುಕಿ, ಎಲ್ಲಾ ರೀತಿಯ ಶಕ್ತಿಯನ್ನು ನೀಡಿದವರು ಶ್ರೀ ಕೃಷ್ಣ. ಗೋವಿನ ಜೀವನ ಆದರ್ಶ ಎಲ್ಲರಿಗೂ ಮಾದರಿ ಎಂದರು.

ಸಬ್ ಇನ್ಸ್‌ಪೆಕ್ಟರ್ ಹರೀಶ್, ಮಂಜು, ಠಾಣೆಯ ಸಿಬ್ಬಂದಿಗಳಾದ ವಿಷಕಂಠ, ವಸಂತ್, ಜೈಕೃಷ್ಣ ಚಂದ್ರುನಾಯಕ್, ರಮೇಶ್, ಮೇಘ, ನಂದಿನಿ, ಅರ್ಪಿತ, ಸ್ಥಳೀಯ ಮುಖಂಡರಾದ ನಜರ್‌ಬಾದ್ ನಟರಾಜ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಜಿ.ರಾಘವೇಂದ್ರ, ಹೊಯ್ಸಳ ಟ್ರಸ್ಟ್ ಅಧ್ಯಕ್ಷರಾದ ಎಂ.ಪಿ.ರಾಜೇಶ್, ಸುರೇಶ್ ಗೋಲ್ಡ್, ಪವನ್ ಸಿದ್ದರಾಮು, ಲೋಕೇಶ್, ಇನ್ನಿತರರಿದ್ದರು.

ಒಂದನೇ ಪುಟದಿಂದ

100 ಅಡಿಗೆ ವಿಸ್ತರಣೆ

ಅಗಲದ ರಸ್ತೆ ಇದೆ. ಈಗ ರೈಲ್ವೆ ಕೆಳ ಸೇತುವೆಯನ್ನು 100 ಅಡಿಗೆ ವಿಸ್ತರಣೆ ಮಾಡಿದರೆ ಸುಗಮ ವಾಹನ ಸಂಚಾರಕ್ಕೆ ಅನುಕೂಲವಾಗುತ್ತದೆ. ಜೊತೆಗೆ ಆ ಸ್ಥಳದಲ್ಲಿ ಟ್ರಾಫಿಕ್ ಜಾಮ್ ಆಗುವುದು ತಪ್ಪುತ್ತದೆ. ಡಿಪಿಆರ್ ಸಿದ್ಧಪಡಿಸುವ ಮುನ್ನ ಟ್ರೈನ್ ವೆಹಿಕಲ್ ಯುನಿಟ್ (ಟಿವಿಯು) ನಿಂದ ಅಂತರಾಷ್ಟ್ರೀಯ ಮೆಟ್ರಿಕ್ ಬಳಸಿ ರೈಲ್ವೆ ಕೆಳ ಸೇತುವೆಯಲ್ಲಿ ಮೌಲ್ಯಮಾಪನ ಮಾಡಲಾಗುವುದು. ಒಟ್ಟು ರೈಲುಗಳ ಸಂಖ್ಯೆ ಹಾಗೂ ಕೆಳಗೆ ಹಾದು ಹೋಗುವ ವಾಹನಗಳ ಸಂಖ್ಯೆಯನ್ನು ಲೆಕ್ಕ ಮಾಡಿ ವಿಶ್ಲೇಷಣೆ ಮಾಡಲಾಗುವುದು ಎಂದು ಪ್ರತಾಪ್ ಸಿಂಹ ವಿವರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಬಳಿಯ ರೈಲ್ವೆ ಗೇಟ್‌ನಿಂದ ಕೂಡ ವಾಹನ ಸವಾರರಿಗೆ ತೊಂದರೆ ಆಗುತ್ತದೆ. ಆಗಾಗ್ಗೆ ರೈಲುಗಳು ಸಂಚರಿಸಿದಾಗ ಗೇಟ್ ತೆರೆಯುವ ತನಕ ವಾಹನ ಸವಾರರು ಬಹಳ ಹೊತ್ತು ಕಾದು ನಿಲ್ಲಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಈ ಹಿನ್ನೆಲೆಯಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡಲು ರೈಲ್ವೆ ಇಲಾಖೆ ಅನುಮೋದನೆ ನೀಡಿದೆ. ಆದರೆ ಇದಕ್ಕಾಗಿ 30 ಕೋಟಿ ರೂಪಾಯಿ ವೆಚ್ಚವಾಗಲಿದ್ದು, ಮೈಸೂರು ನಗರ ಪಾಲಿಕೆ ಹಣ ನೀಡಬೇಕಿದೆ. ಆದರೆ ಈಗಿನ ಸರ್ಕಾರಕ್ಕೆ ನೌಕರರಿಗೆ ವೇತನ ನೀಡಲು ಹಣದ ಸಂಕಷ್ಟ ಇರುವ ಕಾರಣ ಇಂತಹ ಕಾರ್ಯಕ್ಕೆ ಹೇಗೆ ತಾನೆ ಹಣ ಕೊಡುತ್ತಾರೆ ಎಂಬ ಅನುಮಾನವಿದೆ. ಆದ ಕಾರಣ ರೈಲ್ವೆ ಇಲಾಖೆಯಿಂದಲೇ ಅಂಡರ್ ಪಾಸ್ ನಿರ್ಮಾಣ ಮಾಡಲು ತೀರ್ಮಾನ ಮಾಡಲಾಗಿದೆ ಎಂದು ಪ್ರತಾಪ್ ತಿಳಿಸಿದರು.

ಪೆರಿಫೆರಲ್ ಔಟರ್ ರಿಂಗ್ ರಸ್ತೆಗೆ ಡಿಪಿಆರ್: ಮೈಸೂರಿನಲ್ಲಿ ಪೆರಿಫೆರಲ್ ಔಟರ್ ರಿಂಗ್ ರಸ್ತೆ ನಿರ್ಮಾಣ ಮಾಡಲು ಡಿಪಿಆರ್ ಸಿದ್ಧಪಡಿಸಬೇಕಿದೆ. ಇದಕ್ಕಾಗಿ ಮುಡಾ 10 ಕೋಟಿ ರೂಪಾಯಿ ನೀಡುತ್ತಿದೆ. ಪೆರಿಫೆರಲ್ ರಿಂಗ್ ರಸ್ತೆಯಲ್ಲಿ ಅಂಡರ್ ಪಾಸ್ ಸೇರಿದಂತೆ ಹಲವು ಸೌಕರ್ಯ ಕಲ್ಪಿಸಬೇಕಾಗಿರುವ ಕಾರಣ ಒಂದು ಕಿಲೋಮೀಟರ್‌ಗೆ ಕನಿಷ್ಠ 40 ರಿಂದ 50 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ರೈತರ ಭೂಮಿ ಸ್ವಾಧೀನ ಪಡಿಸಿಕೊಳ್ಳುವ ವೇಳೆ ರೈತರಿಗೂ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆಯಲ್ಲಿ 48 ಕೋಟಿ ರೂಪಾಯಿ ವೆಚ್ಚದಲ್ಲಿ ಮೈಸೂರಿನ ಚಾಮುಂಡಿಬೆಟ್ಟದ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು. ಇದಕ್ಕೆ ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ನೀಡಬೇಕು. ಆದರೆ ಮಹಿಷಾ ದಸರಾ ಮಾಡಲು ಹೊರಟಿರುವ ಈ ಸರ್ಕಾರದಿಂದ ಏನು ನಿರೀಕ್ಷಿಸಲು ಸಾಧ್ಯ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಸೆ.21ಕ್ಕೆ ಮುಂದೂಡಿಕೆ

ನಿಮ್ಮದೇ ಪೀಠದಲ್ಲಿ ವಿಚಾರಣೆ ಮುಂದುವರಿಸಿ ಎಂದು ಮುಕುಲ್ ರೋಹಟಗಿ ಮನವಿ ಮಾಡಿದರು. ಬಳಿಕ ವಕೀಲರ ಮನವಿಗೆ ಸ್ಪಂದಿಸಿದ ನ್ಯಾ. ಬಿ.ಆರ್.ಗವಾಯಿ ಸೆ.21ರಂದು ವಿಚಾರಣೆ ನಡೆಸಲು ಸಮ್ಮತಿಸಿದರು. ಅಂದೇ ಕರ್ನಾಟಕ ರೈತ ಸಂಘ ಸಲ್ಲಿಸಿದ್ದ ಅರ್ಜಿಯನ್ನೂ ವಿಚಾರಣೆ ನಡೆಸುವುದಾಗಿ ತಿಳಿಸಿದ್ದಾರೆ.

ಕರ್ನಾಟಕ ಪ್ರತಿದಿನ ಮುಂದಿನ ಹದಿನೈದು ದಿನಗಳಿಗೆ 5 ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶಿಸಿತ್ತು. 5 ಸಾವಿರ ಕ್ಯುಸೆಕ್ ನೀರು ಸಾಲುವುದಿಲ್ಲ ಎಂದು ತಮಿಳುನಾಡು ಆಕ್ಷೇಪ ವ್ಯಕ್ತಪಡಿಸಿತ್ತು.

ತಮಿಳುನಾಡು 24 ಸಾವಿರ ಕ್ಯೂಸೆಕ್ ನೀರು ಬೇಕು ಎಂದು ಒತ್ತಡ ಹೇರಿದಾಗ ಪ್ರಾಧಿಕಾರ ಒಪ್ಪಿರಲಿಲ್ಲ. ಇದೀಗ ಸುಪ್ರಿಂ ಕೋರ್ಟ್ ಮೆಟ್ಟಿಲೇರಿರುವ ತಮಿಳುನಾಡು ಸರ್ಕಾರ, ಹೆಚ್ಚು ನೀರು ಬಿಡುವುದಕ್ಕೆ ಸೂಚಿಸುವಂತೆ ಮನವಿ ಮಾಡಿದೆ.

ಕರ್ನಾಟಕ ಸರ್ಕಾರವೂ ಅರ್ಜಿ ಸಲ್ಲಿಸಿ, ಕಾವೇರಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆ ಕೈ ಕೊಟ್ಟಿದೆ. ಕೆಆರ್‌ಎಸ್ ಡ್ಯಾಂನಲ್ಲಿ ನೀರಿಲ್ಲ. ಕಬಿನಿ, ಹೇಮಾವತಿ, ಹಾರಂಗಿ ಡ್ಯಾಂನಲ್ಲೂ ನೀರಿನ ಅಭಾವವಿದೆ. ಈಗಾಗಲೇ ನಾವು ಕಾವೇರಿ ಪ್ರಾಧಿಕಾರ ಹೇಳಿದಷ್ಟು ನೀರನ್ನು ತಮಿಳುನಾಡಿಗೆ ಬಿಟ್ಟಿದ್ದೇವೆ ಎಂದು ಹೇಳಿದೆ. ನಮ್ಮ ಜಲಾಶಯಗಳಲ್ಲಿ ಅಗತ್ಯ ಪ್ರಮಾಣದಲ್ಲಿ ನೀರು ಇಲ್ಲದಿದ್ದರೂ, 3 ತಿಂಗಳಲ್ಲಿ ತಮಿಳುನಾಡಿಗೆ 35 ಟಿಎಂಸಿ ಅಡಿ ನೀರು ಬಿಟ್ಟಿದ್ದೇವೆ. ತಮಿಳುನಾಡು ಕೇಳಿದಷ್ಟು ನೀರು ಬಿಡಲು ನಮ್ಮ ಮೂರು ಜಲಾಶಯಗಳಲ್ಲಿ ನೀರಿಲ್ಲ, ಇರುವ ನೀರು ಕೊಟ್ಟರೆ ನಮಗೆ ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಲಿದೆ ಎಂದು ಕರ್ನಾಟಕ ತಿಳಿಸಿದೆ. ತಮಿಳುನಾಡು ಸರ್ಕಾರದ ಅರ್ಜಿಯಲ್ಲಿ, ಜೂನ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ಕರ್ನಾಟಕ 80 ಟಿಎಂಸಿ ಅಡಿ ನೀರು ಕೊಡಬೇಕು. ಮೆಟ್ಟೂರು ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆ ಆಗುತ್ತಿದೆ. ಮೆಟ್ಟೂರು ಜಲಾಶಯ ವ್ಯಾಪ್ತಿಯ ಕೃಷಿ ಜಮೀನಿಗೆ ನೀರಿನ ಅಗತ್ಯವಿದೆ, ಸದ್ಯ ಕರ್ನಾಟಕ ಬಿಡುತ್ತಿರುವ ನೀರು ಸಾಲುತ್ತಿಲ್ಲ, ಒಪ್ಪಂದದ ಪ್ರಕಾರ ಕರ್ನಾಟಕ ಹೆಚ್ಚುವರಿ ನೀರು ಬಿಡಬೇಕು ಎಂಬ ಒತ್ತಾಯ ಮಾಡಿದೆ.

ಪಾಲಿಕೆ ಕೌನ್ಸಿಲ್ ಸಭೆ ರದ್ದು; ಬಿಜೆಪಿ ಖಂಡನೆ



ಮೈಸೂರು,ಸೆ.6(ಪಿಎಂ)– ಶಿವಕುಮಾರ್ ಅವರ ಮೇಯರ್ ಅವಧಿಯ ಕೊನೆಯ ಕೌನ್ಸಿಲ್ ಸಭೆಯನ್ನು ರದ್ದುಪಡಿಸಿದ ಕ್ರಮ ಸರಿಯಲ್ಲ. ಅಲ್ಲದೆ ಮಾಜಿ ಮೇಯರ್ ಅಯೂಬ್ ಖಾನ್ ಇದನ್ನು ಸಮರ್ಥಿಸಿಕೊಂಡಿರುವುದು ಖಂಡನೀಯ ಬಿಜೆಪಿ ಜಿಲ್ಲಾ ವಕ್ತಾರ ಎಂ.ಎ.ಮೋಹನ್ ಕಿಡಿಕಾರಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ಸಭೆಯನ್ನು ಕರೆಯುವುದು, ಮುಂದೂಡುವುದು ಮತ್ತು ರದ್ದುಪಡಿಸುವ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳ ಕಾಯ್ದೆಯಲ್ಲಿ ಮೇಯರ್‌ಗೆ ನೀಡಲಾಗಿದೆ. ಪಾಲಿಕೆ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಯಾವುದೇ ಅಧಿಕಾರ ಇಲ್ಲ. ಇದು ಮಾಜಿ ಮೇಯರ್ ಆದ ಅಯೂಬ್ ಖಾನ್ ಅವರಿಗೆ ತಿಳಿಯದ ವಿಷಯವೇನಲ್ಲ ಎಂದರು.

ಅದಾಗ್ಯೂ ಅವರು ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದು, ಇದು ಹಾಸ್ಯಾಸ್ಪದ. ದಸರಾಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಸಚಿವರು ಬೆಂಗಳೂರಿನಲ್ಲಿ ಅಧಿಕಾರಿಗಳ ಸಭೆ ಕರೆದ ಕಾರಣ ಕೌನ್ಸಿಲ್ ಸಭೆ ಮುಂದೂಡಲಾಗಿದೆ ಎಂಬ ಅವರ ಹೇಳಿಕೆ ಬಾಲಿಶ. ಅಲ್ಲದೆ, ಪಾಲಿಕೆಯ ಅಧಿಕಾರಿಗಳು ತಮ್ಮ ತಕ್ಷಣದ ಮೇಲಾಧಿಕಾರಿ ಮೇಯರ್ ಎಂಬುದನ್ನು ಮರೆತು ಕೌನ್ಸಿಲ್ ರದ್ದುಪಡಿಸಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು.

ದಸರಾಗೆ ಇನ್ನು 2 ತಿಂಗಳು ಇದ್ದರೂ ಕೌನ್ಸಿಲ್ ಸಭೆಯ ದಿನದಂದೇ ಬೆಂಗಳೂರಿನಲ್ಲಿ ಅಧಿಕಾರಿಗಳ ಸಭೆ ಕರೆಯುವ ಔಚಿತ್ಯವೇನಿತ್ತು ಅಯೂಬ್ ಖಾನ್ ಅವರು ಮುಂದುವರಿದು ಪ್ರತಾಪ್ ಸಿಂಹರನ್ನು ಏಕೆ ಸೋಲಿಸಬೇಕೆಂಬುದನ್ನು ಮುಂದಿನ ದಿನಗಳಲ್ಲಿ ಹೇಳುವುದಾಗಿ ಹೇಳಿದ್ದಾರೆ. ಅದೇ ರೀತಿ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಅವರು ಪ್ರತಾಪ್ ಸಿಂಹ ಕೊಡುಗೆ ಏನೆಂದು ಪ್ರಶ್ನಿಸಿದ್ದಾರೆ. ಶಂಕರಯ್ಯ ಕಾಲದಿಂದ 2014ರಲ್ಲಿ ಪ್ರತಿನಿಧಿಸಿದ್ದ ವಿಶ್ವನಾಥ್ ತನಕದ ಕಾಂಗ್ರೆಸ್ ಸಂಸದರು ಮೈಸೂರಿಗೆ ನೀಡಿದ ಕೊಡುಗೆ ಏನು? ಎಂದು ಪ್ರಶ್ನಿಸಿದರು. 2014ರ ನಂತರದಲ್ಲಿ ಸಂಸದರಾಗಿ ಬಂದ ಪ್ರತಾಪ್ ಸಿಂಹ ಅವರು ಕಳೆದ 9 ವರ್ಷಗಳಲ್ಲಿ ನೀಡಿದ ಕೊಡುಗೆ ಪಟ್ಟಿಯನ್ನು ಕ್ಷೇತ್ರದ ಯಾವುದೇ ಮತದಾರರನ್ನು ಕೇಳಿದರೂ ಹೇಳುತ್ತಾರೆ. ರೈಲು, ರಸ್ತೆ ಸಂಚಾರದ ಸುಧಾರಣೆ, ಮಂಡಕಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿ ಸೇರಿದಂತೆ ಪ್ರತಾಪ್ ಸಿಂಹ ಅವರ ಅಭಿವೃದ್ಧಿ ಕಾರ್ಯಗಳ ದೊಡ್ಡ ಪಟ್ಟಿಯೇ ಇದೆ ಎಂದರು.

ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಗೆಲ್ಲಿಸಿ ಎಂದು ಹೇಳುವುದು ಒಂದು ವಾಡಿಕೆ. ಆದರೆ ಮೊನ್ನೆ ಮುಖ್ಯಮಂತ್ರಿಗಳು ಪ್ರತಾಪ್ ಸಿಂಹರನ್ನು ಸೋಲಿಸಿ ಎಂದು ಹೇಳಿದ್ದು, ಇದು ಎಷ್ಟು ಸರಿ. ಇದಕ್ಕೆ ಪ್ರತಾಪ್ ಸಿಂಹನವರು ತಮ್ಮನ್ನು ಸೋಲಿಸಲು ಕಾರಣವೇನೆಂದು ಪ್ರಶ್ನಿಸಿದ್ದು, ಕಾಂಗ್ರೆಸ್ಸಿಗರು ಇದಕ್ಕೆ ಉತ್ತರಿಸಬೇಕು ಎಂದು ಆಗ್ರಹಿಸಿದರು. ಬಿಜೆಪಿ ಮುಖಂಡರಾದ ಸೋಮಸುಂದರ್, ಗಿರಿಧರ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ವೇತನ ಹೆಚ್ಚಳಕ್ಕೆ ತಡೆಯಾಜ್ಞೆ ತಂದ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ವಿರುದ್ಧ ಪ್ರತಿಭಟನೆ

ಮೈಸೂರು,ಸೆ.6(ಜಿಎ)–ಸರ್ಕಾರಿ ಆದೇಶದ ವಿರುದ್ಧ ಆಡಳಿತ ವರ್ಗ ತಂದಿರುವ ತಡೆಯಾಜ್ಞೆಯನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಕಾರ್ಮಿಕರು, ಬುಧವಾರ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಜಾಥಾದಲ್ಲಿ ಸಾಗಿ ಪ್ರತಿಭಟನೆ ನಡೆಸಿದರು.



ನಂಜನಗೂಡು ತಾಲೂಕಿನ ಅಳಗಂಚಿ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಕುಂತೂರಿನಲ್ಲಿ ಇರುವ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ 900 ಕಾರ್ಮಿಕರಿಗೆ 6 ವರ್ಷದಿಂದ ವೇತನ ಪರಿಷ್ಕರಣೆಯಾಗಿಲ್ಲ. 2022ರ ಜುಲೈ 4ರಂದು ಸರ್ಕಾರವು ಕಾರ್ಮಿಕರ ವೇತನ ಹೆಚ್ಚಿಸಬೇಕೆಂದು ಆದೇಶ ಹೊರಡಿಸಿತ್ತು. ಇದರ ವಿರುದ್ಧ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ಉಚ್ಚ ನ್ಯಾಯಾಲಯದಲ್ಲಿ ಮಧ್ಯಂತರ ತಡೆಯಾಜ್ಞೆ ತಂದಿದ್ದು, ಕಾರ್ಮಿಕರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ದೂರಿದರು. ವೇತನ ಹೆಚ್ಚಳಕ್ಕೆ ಸರ್ಕಾರದ ಆದೇಶ ಬಂದಿದ್ದಾಗ ಆಡಳಿತ ಮಂಡಳಿಯು ತಮಿಳುನಾಡಿನ ತ್ರಿಪಕ್ಷೀಯ ವೇತನ ಸಮಿತಿ ಆದೇಶದ ಬಳಿಕ ವೇತನ ಹೆಚ್ಚಿಸುತ್ತೇವೆ ಎಂದು ತಿಳಿಸಿತ್ತು ಆ ಸಂದರ್ಭದಲ್ಲಿ ಕನ್ನಡ ವಿರೋಧಿ ಧೋರಣೆ ವಿರೋಧಿಸಿ ಉಪ ಕಾರ್ಮಿಕ ಆಯುಕ್ತರಿಗೆ ಕಾರ್ಮಿಕರು ದೂರು ಸಲ್ಲಿಸಿ, ಆದೇಶ ಜಾರಿಗೆ ಒತ್ತಾಯಿಸಿದ್ದರು. ಇದರ ಬೆನ್ನಲ್ಲೇ ಆಡಳಿತ ಮಂಡಳಿಯು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದೆ. ವೇತನ ಪರಿಷ್ಕರಣೆ ಆಗದೇ ಇರುವುದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಕಂಪೆನಿಯ ಕಾರ್ಮಿಕರ ಶ್ರಮದ ಫಲವಾಗಿ ನೂರಾರು ಕೋಟಿ ಲಾಭ ಗಳಿಸಿದರೂ, ನಾವು ಆರ್ಥಿಕ ಸಮಸ್ಯೆಯಿಂದ ಗೌರವಯುತ ಜೀವನ ನಡೆಸಲು ಸಾಧ್ಯವಿಲ್ಲದಾಗಿದೆ. ತಡೆಯಾಜ್ಞೆಯನ್ನು ಶೀಘ್ರ ತೆರವುಗೊಳಿಸಲು ಸರ್ಕಾರವು ಕ್ರಮ ಕೈಗೊಂಡು ಕಾರ್ಮಿಕರ ಹಿತ ಕಾಯಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಂಜುನಾಥ್, ಬೈಂಗೇಶ್, ವೀರಭದ್ರಪ್ಪ, ರಾಜಶೇಖರ್, ಜಗದೀಶ್, ಹರೀಶ್, ರಮೇಶ್, ಎಐಯುಟಿಯುಸಿನ ಯಶೋಧರ, ಹರೀಶ್, ಸಂಧ್ಯಾ.ಪಿ.ಎಸ್, ಮುದ್ದುಕೃಷ್ಣ ಪಾಲ್ಗೊಂಡಿದ್ದರು.

ಮಕ್ಕಳ ಮಾನಸಿಕ, ದೈಹಿಕ ಸದೃಢತೆಗೆ ಕ್ಷೀರಭಾಗ್ಯ ಜಾರಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ
- ಇದರಿಂದ ಮಕ್ಕಳಿಗೆ ಮಾತ್ರವಲ್ಲ ರೈತರಿಗೂ ಅನುಕೂಲ

ಬೆಂಗಳೂರು, ಸೆ.6–ಮಕ್ಕಳ ಮಾನಸಿಕ ಮತ್ತು ದೈಹಿಕ ಸದೃಢತೆಗಾಗಿ ಕ್ಷೀರಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಯೋಜನೆ ಅನುಷ್ಠಾನದಿಂದ ಮಕ್ಕಳ ದೈಹಿಕ ಸದೃಢತೆ ಒಂದೆಡೆಯಾದರೆ, ರೈತರಿಗೂ ಅನುಕೂಲವಾಗಲಿದೆ ಎಂಬ ಕಾರಣಕ್ಕೆ ಕ್ಷೀರ ಭಾಗ್ಯ ತಂದಿದ್ದೇವೆ.

ಕ್ಷೀರಭಾಗ್ಯ ಜಾರಿಗೆ ತಂದು ರಾಜ್ಯದ 54 ಲಕ್ಷಕ್ಕೂ ಅಧಿಕ ಮಕ್ಕಳು ಪೌಷ್ಟಿಕ ಆಹಾರವನ್ನು ಪ್ರತಿ ದಿನ ಸೇವಿಸುವಂತಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಪಾರ ಮೆಚ್ಚುಗೆ ಗಳಿಸಿದೆ ಎಂದಿದ್ದಾರೆ.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ ಕ್ಷೀರಭಾಗ್ಯ ಯೋಜನೆಯ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳು ಮಾನಸಿಕ ಮತ್ತು ದೈಹಿಕವಾಗಿ ಸದೃಢರಾಗಿದ್ದರೆ ಮಾತ್ರ ಆರೋಗ್ಯವಂತರಾಗಿ ಉತ್ತಮ ಶಿಕ್ಷಣ ಪಡೆಯಲು ಸಾಧ್ಯ.

ಎಲ್ಲಾ ಜಾತಿಯ, ಎಲ್ಲಾ ಧರ್ಮದ ಬಡವರು ಮತ್ತು ಮಧ್ಯಮ ವರ್ಗದವರ ಮಕ್ಕಳ ಹಿತವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಕ್ಷೀರಭಾಗ್ಯ ಯೋಜನೆಯನ್ನು



ಜಾರಿಗೊಳಿಸಿದೆವು. ಹತ್ತು ವರ್ಷಗಳಿಂದ ಪ್ರತೀ ದಿನ ಲಕ್ಷಾಂತರ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗುವಂತೆ ಮಾಡಿದ್ದೇವೆ. ನಮ್ಮ ಹೆಮ್ಮೆಯ ಈ ಯೋಜನೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆ ಗಳಿಸಿದೆ ಎಂದು ವಿವರಿಸಿದ್ದಾರೆ.

ಬಡವರು, ಮಧ್ಯಮ ವರ್ಗದವರ ಬದುಕಿಗೆ ಅನುಕೂಲ ಆಗುವ ಕಾರ್ಯಕ್ರಮವನ್ನು ನಾವು ರೂಪಿಸಿದರೆ ಬಿಜೆಪಿಯವರು ಅಡ್ಡಗಾಲು ಹಾಕಿ ಕಾರ್ಯಕ್ರಮ ವಿಫಲಗೊಳಿಸಲು ಯತ್ನಿಸಿದರು. ಸ್ವತಃ ಪ್ರಧಾನಿ ನರೇಂದ್ರ ಮೋದಿಯವರು ಬಡವರ ಪರ ಕಾರ್ಯಕ್ರಮ ನೀಡಿದ್ದರಿಂದ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಅಪ್ಪಟ ಸುಳ್ಳು ಹೇಳಿದರು ಎಂದು ಟೀಕಿಸಿದ್ದಾರೆ.

ಅಂಬಾನಿ, ಅದಾನಿಗೆ ಕೊಟ್ಟರೆ ದೇಶದ ಆರ್ಥಿಕತೆಗೆ ನಷ್ಟ ಆಗುವುದಿಲ್ಲವೇ ಪ್ರಧಾನಿ ಮೋದಿಯವರೇ ಎಂದು ಖಾರವಾಗಿ ಪ್ರಶ್ನಿಸಿದ ಮುಖ್ಯಮಂತ್ರಿಗಳು, ಬಡವರು ಮಧ್ಯಮ ವರ್ಗದವರು ಸಮಾಧಾನದಿಂದ ಎರಡು ಹೊತ್ತು ಊಟ ಮಾಡಿದರೆ ವಿರೋಧಿಸಬೇಡಿ ಎಂದು ಹೇಳಿದ್ದಾರೆ.

ಪಶು ಪಾಲಕರಿಗೆ, ರೈತರಿಗೆ ಅನುಕೂಲ ಆಗಲಿ ಎನ್ನುವ ಕಾರಣದಿಂದ ಪ್ರತಿ ಲೀಟರ್ ಹಾಲಿನ ದರವನ್ನು 3 ರೂ ಹೆಚ್ಚಳ ಮಾಡಲಾಯಿತು. ಹೈಸ್ಕೂಲಿಗೆ ಹೋಗುವವರೆಗೂ ನನ್ನ ಕಾಲಲ್ಲಿ ಚಪ್ಪಲಿ ಇರಲಿಲ್ಲ. ನನ್ನ ಪರಿಸ್ಥಿತಿ ಉಳಿದ ಮಕ್ಕಳಿಗೆ ಬರಬಾರದು ಎನ್ನುವ ಕಾರಣದಿಂದ ಶೂ ಭಾಗ್ಯ ಜಾರಿಗೊಳಿಸಿದೆ.

ತುಂಗಾ ಮೇಲ್ದಂಡೆ ಯೋಜನೆಗೆ ಹಿಂದಿನ ಬಿಜೆಪಿ ಸರ್ಕಾರ ನೆರವು ನೀಡಲಿಲ್ಲ. ಇದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಬೇಕು ಎನ್ನುವ ನಮ್ಮ ಬೇಡಿಕೆಗೆ ಕೇಂದ್ರ ಸರ್ಕಾರ ಒಪ್ಪುತ್ತಿಲ್ಲ ಎಂದು ಆರೋಪಿಸಿದ್ದಾರೆ.

ಶ್ರೀ ಆಚಾರ್ಯತ್ರಯರ ಜಯಂತಿ ಆಚರಣೆ



ಮೈಸೂರು, ಸೆ.6–ಕೊಳ್ಳೇಗಾಲ ತಾಲೂಕು ಬ್ರಾಹ್ಮಣ ಮಹಾಸಭಾ ವತಿಯಿಂದ ಶ್ರೀ ಆಚಾರ್ಯತ್ರಯರ ಜಯಂತಿ ಆಚರಿಸಲಾಯಿತು. ಈ ವೇಳೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಂಗದ ಸಹ ನಿರ್ದೇಶಕರಾದ ಡಾ. ಬಿ.ಎಸ್.ಅನಿಲ ಕುಮಾರ ಅವರು, ಇಂದಿನ ಬದುಕಿಗೆ ಜೀವನಾದರ್ಶಗಳು ಬಹಳ ಮುಖ್ಯ. ಜೀವನಾದರ್ಶಗಳನ್ನು ರೂಢಿಸಿಕೊಳ್ಳುವ ಮಾರ್ಗಗಳನ್ನು ಆಚಾರ್ಯತ್ರಯರು ತಾವು ಆಚರಿಸಿ, ತಮ್ಮ ಶಿಷ್ಯ ಬಳಗವೂ ಆಚರಿಸುವಂತೆ ಉಪದೇಶಿಸಿದರು. ಶುದ್ಧ ನಡೆ, ಆಚಾರ–ವಿಚಾರ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಗತ್ಯ ಗೌರವ ನೀಡುವುದು ಅಂದಂದಿನ ಸಮಾಜದ ಕ್ಷೋಭೆಗೆ ಪರಿಹಾರಾತ್ಮಕ ಮಾರ್ಗಗಳನ್ನು ಕಂಡುಕೊಂಡು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಕಾರ್ಯನಿರ್ವಹಿಸುವುದು ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಮಧ್ವಾಚಾರ್ಯರ ಜೀವನ ಸಾಧನೆಗಳು ಮತ್ತು ಅವರ ಶಿಷ್ಯರಾದ ವ್ಯಾಸರಾಯರು ಶ್ರೀ ರಾಘವೇಂದ್ರ ಸ್ವಾಮಿಗಳವರು ನುಡಿದಂತೆ ನಡೆದು ಸರ್ವಕಾಲಕ್ಕೂ ಆದರ್ಶಪ್ರಾಯವಾಗಿ ಕಂಡರು ಎಂದು ತಿಳಿಸಿದರು.

ಇಂತಹ ಬದುಕಿಗೆ ಶುದ್ಧ ಚಾರಿತ್ರ್ಯ, ಧರ್ಮದ ಆಚರಣೆ, ಕೌಟುಂಬಿಕ ಸಾಮರಸ್ಯ ಮತ್ತು ಜೀವನಾದರ್ಶಗಳನ್ನು ರೂಢಿಸಿಕೊಂಡರೆ ಅದೇ ಸ್ವರ್ಗ. ಇಲ್ಲದಿದ್ದರೆ ಅದೇ ನರಕ ಎಂದು ಹರಿದಾಸರ ಅನುಭವದ ವಾಣಿಯ ಹಿನ್ನೆಲೆಯಲ್ಲಿ ಅನಿಲ್ ಕುಮಾರ ವಿಶ್ಲೇಷಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ನಂ ಶ್ರೀಕಂಠಕುಮಾರ್‌ರವರು ಮಾತನಾಡಿ, ವಿಪ್ರ ಸಂಘಟನೆಯ ಅವಶ್ಯಕತೆಯನ್ನು ತಿಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಹಾಸಭಾ ಸದಸ್ಯರಾಗುವಂತೆ ಕೋರಿದರು. ಕಾರ್ಯಕ್ರಮದಲ್ಲಿ ರಾಜ್ಯ ಉಪಾಧ್ಯಕ್ಷ ಡಿ.ವಿ. ರಾಜೇಂದ್ರ ಪ್ರಸಾದ್, ಸಂಘಟನಾ ಕಾರ್ಯದರ್ಶಿ ಹೆಚ್.ಸಿ.ಪುರುಷೋತ್ತಮ, ಚಾಮರಾಜನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಜಿ.ಎಂ.ಹೆಗಡೆ, ವಾಗ್ದೇವಿ ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಮಲ್ಲಿಕಾ, ಮಹಿಳಾ ಮುಖಂಡರಾದ ಗೀತಕ್ಕ, ಕಾರ್ಯದರ್ಶಿ ಚಂದ್ರಚೂಡ, ಖಜಾಂಚಿ ವೆಂಕಟೇಶ್, ರಾಜ್ಯ ಸಮಿತಿ ಸದಸ್ಯರಾದ ಸುರೇಶ್ ಋಗ್ವೇದಿ, ಶಂಕರನಾರಾಯಣ, ಬಾಲಸುಬ್ರಮಣ್ಯಂ ಹಾಗೂ ತಾಲೂಕು ಸಂಘದ ಅಧ್ಯಕ್ಷ ಆರ್.ಶೇಖರ್ ಶಾಸ್ತ್ರಿ ಮತ್ತಿತರರು ಉಪಸ್ಥಿತರಿದ್ದರು.

ಸಮತಾ ಸೈನಿಕ ದಳದ ಜಿಲ್ಲಾ ಶಾಖೆ ಉದ್ಘಾಟನೆ



ಮೈಸೂರು, ಸೆ. 6– ಜೀವನದಲ್ಲಿ ಶಿಸ್ತು ಬದ್ಧತೆ, ಕ್ರಿಯಾಶೀಲತೆ, ಸಾಮಾಜಿಕ ಕಳಕಳಿ, ಆರೋಗ್ಯ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂಬುದು ಡಾ.ಅಂಬೇಡ್ಕರ್ ಅವರ ಆಶಯವಾಗಿತ್ತು ಎಂದು ಭಂತೆ ಡಾ.ಕಲ್ಯಾಣ ಸಿರಿ ಹೇಳಿದರು.

ನಗರದ ರೋಟರಿ ಶಾಲೆಯಲ್ಲಿ ಕರ್ನಾಟಕ ಸಮತಾ ಸೈನಿಕ ದಳದ (1924ರಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಸ್ಥಾಪಿಸಿದ ಸಂಘಟನೆ) ಮೈಸೂರು ಜಿಲ್ಲಾ ಶಾಖೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದುಳಿದ ಸಮುದಾಯಗಳಲ್ಲಿ ಸಾಮಾಜಿಕ ಜಾಗೃತಿ ಮೂಡಿಸುವುದು, ದೌರ್ಜನ್ಯ, ದಬ್ಬಾಳಿಕೆಗೆ ಒಳಗಾದ ನೊಂದ ಜನರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವುದು, ಪ್ರಬುದ್ಧ ಭಾರತದ ನಿರ್ಮಾಣ ಮಾಡಬೇಕೆಂಬ ಸಂಕಲ್ಪ ಅಂಬೇಡ್ಕರ್ ಅವರದ್ದಾಗಿತ್ತು. ದೌರ್ಜನ್ಯ, ಅಸಮಾನತೆ, ಅನ್ಯಾಯದ ವಿರುದ್ಧ ಸಂಘಟನೆಗಳು ಧ್ವನಿ ಎತ್ತುವ ಕೆಲಸ ಮಾಡಬೇಕು ಎಂಬುದೇ ಅಂಬೇಡ್ಕರ್ ಅವರ ಉದ್ದೇಶವಾಗಿತ್ತು ಎಂದು ಹೇಳಿದರು. ಪ್ರತಿಯೊಂದು ಸಂಘಟನೆಯೂ ಮಹಿಳೆಯರ ಪರವಾಗಿ ನಿಲ್ಲಬೇಕು. ಹಿಂದುಳಿದ ಸಮುದಾಯಗಳ ಜನರಲ್ಲಿ ವೈಚಾರಿಕತೆ, ವೈಜ್ಞಾನಿಕ ಪ್ರಜ್ಞೆಯನ್ನು ಮೂಡಿಸಬೇಕು. ಸತ್ಯ, ವಾಸ್ತವಕ್ಕೆ ಹೆಚ್ಚಿನ ಒತ್ತು ಕೊಡಬೇಕು, ಇಂದಿನ ಮಕ್ಕಳಿಗೆ ಶಿಕ್ಷಣ, ಉದ್ಯೋಗದ ಬಗ್ಗೆ ಅರಿವು ಮೂಡಿಸಬೇಕು. ಸಂವಿಧಾನ ಮತ್ತು ಬುದ್ಧರ ಬೋಧನೆಯೇ ಜಗತ್ತಿನ ಮಾರ್ಗವಾಗಿದೆ ಎಂದು ಹೇಳಿದರು.

ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷ ಬಿ.ಚನ್ನಕೃಷ್ಣಪ್ಪ ಮಾತನಾಡಿದರು. ಮಹಿಳಾ ಘಟಕದ ರಾಜ್ಯಾಧ್ಯಕ್ಷರಾದ ಕಮಲಮ್ಮ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ರಾಜೇಶ್ವರಿ, ಖಜಾಂಚಿ ಈರಭದ್ರ, ವಿಜಯಕುಮಾರ್, ಜಿಲ್ಲಾ ಅಧ್ಯಕ್ಷ ಗೋವಿಂದರಾಜು, ಗಾಯಕ ಅಮ್ಮ ರಾಮಚಂದ್ರ, ಮುಖಂಡರಾದ ಎಚ್.ಡಿ.ಕೋಟೆ ಆಲುಂ, ಹೋರಾಟಗಾರ ಕನ್ನಹಳ್ಳಿ ಕೃಷ್ಣಪ್ಪ, ಬಾಲರಾಜು, ಪುಟ್ಟರಾಜು, ಸಿ.ಕೆ.ಕುಮಾರ್, ಎಂ.ನಾಗರಾಜು, ಚಿಕ್ಕಬೋರಯ್ಯ ಮತ್ತಿತರರು ಹಾಜರಿದ್ದರು.

ವಿದ್ಯೆ ಎಂಬುದು ಸದಾ ಸಾಧಕನ ಸ್ವತ್ತು

ಸಾಹಿತಿ ಬನ್ನೂರು ಕೆ.ರಾಜು

ಮೈಸೂರು, ಸೆ. 6–ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಪದವಿಪೂರ್ವ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ ನಡೆಯಿತು.

ಸಾಹಿತಿ ಹಾಗೂ ಅಂಕಣಕಾರ ಬನ್ನೂರು ಕೆ.ರಾಜು ಅವರು ಜ್ಯೋತಿ ಬೆಳಗಿಸಿ ಮಾತನಾಡಿ, ವಿದ್ಯೆ ಎಂಬುದು ಸಾಧಕನ ಸ್ವತ್ತು. ಜ್ಞಾನಕ್ಕೆ ಸಮಾನವಾದುದ್ದು ಇಡೀ ಜಗತ್ತಿನಲ್ಲಿ ಯಾವುದು ಇಲ್ಲ. ಪ್ರಕೃತಿಯಿಂದ ಸಿಗುವ ಎಲ್ಲ ಸೌಲಭ್ಯಗಳು ಒಂದು ರೀತಿ ಗುರು ಕಾಣಿಕೆ ಆಗಿದೆ. ಗುರುಗಳ ಸ್ಮರಣೆ ಹಾಗೂ ಮಾರ್ಗದರ್ಶನ ಪಡೆದ ಸಾವಿರಾರು ಮಂದಿ ಬದುಕನ್ನು ಕಟ್ಟಿಕೊಂಡ ಅನೇಕ ನಿದರ್ಶನಗಳು ನಮ್ಮ ಮುಂದೆ ಇದೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಹಿಂದೆ ಗುರು ಇದ್ದರೆ ಮುಂದೆ ಗುರಿಯಿದ್ದಾಗ ಮಾತ್ರ ಸಾಧನೆ ಸುಲಭವಾಗುತ್ತದೆ ಎಂದರು.



ನಾವು ಇಂದು ಶಿಕ್ಷಕರ ದಿನಾಚರಣೆಯ ಅಂಗವಾಗಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನ, ಇದೇ ದಿನ ಜನಿಸಿದ ಪತ್ರಿಕಾರಂಗದ ಭೀಷ್ಮ ಮೈಸೂರಿನ ತಾತಯ್ಯ ಎಂದೇ ಹೆಸರಾದ ಶಿಕ್ಷಣ ತಜ್ಞ ಎಂ. ವೆಂಕಟಕೃಷ್ಣಯ್ಯ, ಹೆಣ್ಣು ಮಕ್ಕಳ ಬಾಳಿಗೆ ಶಿಕ್ಷಣ ನೀಡಿ ಬೆಳಕಾದ ಮೊದಲ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆರವರ ಜನ್ಮದಿನವನ್ನು ಆಚರಿಸುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಇಂತಹ ಮಹನೀಯರ, ಗುರುಹಿರಿಯರ ಆದರ್ಶವನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಂಡಾಗ ಸಮಾಜದಲ್ಲಿ ಅತ್ಯುತ್ತಮ ಪ್ರಜೆಯಾಗಿ, ಸಾಧಕನಾಗಿ ಮುಂದೆ ಬರಬಹುದೆಂದು ತಿಳಿಸಿ, ಇದಕ್ಕೆ ಸಾಕ್ಷಿಯಾಗಿ ಬಹಳ ಮುಖ್ಯವಾಗಿ ಕ್ಷಿಪಣಿ ಮಾಂತ್ರಿಕ ಅಬ್ದುಲ್ ಕಲಾಂ ಹಾಗೂ ಡಾ॥ ಎಸ್.ರಾಧಕೃಷ್ಣನ್‌ರವರೇ ಸಾಕ್ಷಿಯೆಂದು ತಿಳಿಸಿದರು. ವೇದಿಕೆಯಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ವಿದ್ಯಾರ್ಥಿಗಳಿಗೆ ಹಿತವಚನ ನುಡಿದರು.

ಶೈಕ್ಷಣಿಕ ಸಲಹೆಗಾರರಾದ ಕ್ಯಾಪ್ಟನ್ ಶ್ರೀನಿವಾಸ ರಾಘವಾಚಾರ್ ಅವರು ಶಿಕ್ಷಣದ ಮಹತ್ವ ಮತ್ತು ವಿದ್ಯಾರ್ಥಿಗಳ ಪಾತ್ರದ ಬಗ್ಗೆ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ್ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ತಾಯಿ ಜನ್ಮ ಕೊಟ್ಟರೆ ಗುರು ವಿದ್ಯೆ ಕೊಡುತ್ತಾನೆ. ಇವರಿಬ್ಬರ ಋಣ ತೀರಿಸಲಾಗದು ಎಂದು ತಿಳಿ ಹೇಳಿದರು. ಕಾರ್ಯಕ್ರಮಕ್ಕೆ ನೀರಜ್ ಶರ್ಮ ಪ್ರಾರ್ಥಿಸಿದರೆ, ಸಜನಾ ಸ್ವಾಗತಿಸಿದರು, ಪೂಜಾ ಅತಿಥಿಗಳನ್ನು ಪರಿಚಯಿಸಿದರೆ, ಧನವಂತ್ ವಂದಿಸಿದರು. ಮಂಜುನಾಥ್ ಸಿ.ಕೆ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು.

ಉಚಿತ ಕಂಪ್ಯೂಟರ್ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಸೆ.6–ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಹಾಗೂ ಎಸ್‌ಎಸ್ ಐಟಿ ಸಲ್ಯೂಷನ್ಸ್ ರಾಮಕೃಷ್ಣನಗರ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಕಂಪ್ಯೂಟರ್ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯಲ್ಲಿ ನುರಿತ ಉಪನ್ಯಾಸಕರುಗಳಿಂದ ಕಂಪ್ಯೂಟರ್ ಫಂಡಮೆಂಟಲ್, ಕನ್ನಡ ನುಡಿ, ಟೈಪಿಂಗ್ ಸ್ಕಿಲ್, ಟ್ಯಾಲಿ, ಸಿ,ಸಿ++, ಜಾವಾ, ಪೈಥಾನ್, ಫ್ರಂಟ್ ಎಂಡ್ ಡೆವಲಪರ್ಸ್‌ಗೆ ಸಂಬಂಧಿಸಿದಂತೆ 40ರಿಂದ 120ಗಂಟೆಗಳವರೆಗಿನ ಪ್ರಾಯೋಗಿಕ ತರಗತಿಗಳು ನಡೆಯಲಿವೆ.

ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸ ಮುಗಿಸಿರುವ ಎಲ್ಲಾ ವರ್ಗದ ಮಹಿಳೆಯರು, ಪುರುಷರು, ಹಿರಿಯ ನಾಗರಿಕರು, ಉದ್ಯೋಗಾಕಾಂಕ್ಷಿಗಳು ಹಾಗೂ ಉದ್ಯೋಗಸ್ಥರು ಇದರ ಫಲಾನುಭವಿಗಳಾಗಿರುತ್ತಾರೆ.

ಆಸಕ್ತರು ತಮ್ಮ ಇತ್ತೀಚಿನ ಸ್ವವಿವರಗಳು, ಆಧಾರ್‌ನ ಜೆರಾಕ್ಸ್‌ಪ್ರತಿ ಮತ್ತು ಭಾವಚಿತ್ರದೊಂದಿಗೆ ಶಾಖೆಯನ್ನು ಸೆ. 12ರೊಳಗೆ ನೋಂದಾವಣೆಗಾಗಿ ಸಂಪರ್ಕಿಸಬಹುದಾಗಿದೆ. ಅರ್ಜಿಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ 8310306882, 9964790442 ಸಂಪರ್ಕಿಸಬಹುದು.

ರುಡ್‌ಸೆಟ್ ಸಂಸ್ಥೆಯಲ್ಲಿ ಚಾಲನಾ ಪರವಾನಗಿ ಪತ್ರ ವಿತರಣೆ



ಮೈಸೂರು, ಸೆ. 6–ಮೈಸೂರಿನ ರುಡ್‌ಸೆಟ್ ಸಂಸ್ಥೆಯು ಎನ್‌ಆರ್‌ಎಲ್‌ಎಂ ಯೋಜನೆಯಡಿಯಲ್ಲಿ 30 ದಿನಗಳ ಉದ್ಯಮಶೀಲತಾಭಿವೃದ್ಧಿಯಲ್ಲಿ ಲಘು ಮೋಟಾರ್ ವಾಹನ ಚಾಲನಾ ತರಬೇತಿ ನಡೆಸಲಾಯಿತು. ಯಶಸ್ವಿಯಾಗಿ ತರಬೇತಿ ಪಡೆದು ಉದ್ಯೋಗಕ್ಕೆ ಸಿದ್ಧರಾದ ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲಿ ಒಕ್ಕೂಟದಿಂದ ಆಯ್ಕೆಯಾದ ಸ್ವ ಸಹಾಯ ಗುಂಪಿನ ಮಹಿಳಾ ಅಭ್ಯರ್ಥಿಗಳಿಗೆ ಘನ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ನಿಯೋಜನೆಗೊಂಡ ಆಟೋ/ವಾಹನ ಚಾಲನೆ ಮಾಡುವವರಿಗೆ ಚಾಲನಾ ಪರವಾನಗಿ ನೀಡುವ ಕಾರ್ಯಕ್ರಮವನ್ನು ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಬಿ.ಎಂ.ಸವಿತಾ, ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಮೈಸೂರು ಭಾಗವಹಿಸಿದ್ದರು.

ಶಿಬಿರಾರ್ಥಿಗಳಿಗೆ ಚಾಲನಾ ಪರವಾನಗಿ ಪತ್ರ ವಿತರಿಸಿ ಮಾತನಾಡಿದ ಅವರು, ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಎನ್‌ಆರ್‌ಎಲ್‌ಎಂ ಯೋಜನೆಯ ಮೂಲಕ ಹಮ್ಮಿಕೊಳ್ಳುತ್ತಲಿದೆ. ಅದರಲ್ಲಿ ಬಹಳ ಮಹತ್ತರ ಉದ್ದೇಶದ ಗ್ರಾಮೀಣ ಪ್ರದೇಶದಲ್ಲಿ ಘನ ತ್ಯಾಜ್ಯವಸ್ತುಗಳ ಕಸ ವಿಲೇವಾರಿಯು ಒಂದಾಗಿದೆ. ತ್ಯಾಜ್ಯ ವಿಲೇವಾರಿಯ ಜವಾಬ್ದಾರಿಯನ್ನು ಪ್ರತಿ ಗ್ರಾಮ ಪಂಚಾಯತಿಯ ಒಂದು ಒಕ್ಕೂಟವು ನಿರ್ವಹಿಸುವಂತೆ ತಿಳಿಸಲಾಗಿದೆ. ಅದರಂತೆ ಆಯಾ ಒಕ್ಕೂಟದ ವತಿಯಿಂದ ಆಯ್ಕೆಯಾದ ಸ್ವ ಸಹಾಯ ಸಂಘದ ಮಹಿಳಾ ಅಭ್ಯರ್ಥಿಗಳಿಗೆ ಲಘು ಮೋಟಾರ್ ವಾಹನ ಚಾಲನಾ ತರಬೇತಿ ನೀಡಿ ಅವರಿಗೆ ವಾಹನಗಳನ್ನು ವಿತರಿಸುವ ಕಾರ್ಯಕ್ಕೆ ಸಾಂಕೇತಿಕವಾಗಿ ಚಾಲನೆ ನೀಡುವ, ಸಾರ್ಥಕತೆ ಭಾವ ಮೂಡಿಸುವ ಕಾರ್ಯಕ್ರಮವಿದು ಎಂದು ಅಭಿಪ್ರಾಯಪಟ್ಟರು. ಆಶಾ ಎ.ಆರ್., ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ಎನ್‌ಆರ್‌ಎಲ್‌ಎಂ, ಬಸವರಾಜು, ಜಿಲ್ಲಾ ವ್ಯವಸ್ಥಾಪಕರು, ಎನ್‌ಆರ್‌ಎಲ್‌ಎಂ ಮತ್ತು ಸುಬ್ರಮಣ್ಯ, ಮ್ಯಾನೇಜರ್, ಮಾಂಡೋವಿ ಡ್ರೈವಿಂಗ್ ಸ್ಕೂಲ್ ಉಪಸ್ಥಿತರಿದ್ದರು.

ಟೀಂ ಮೈಸೂರು ತಂಡದಿಂದ ಶಿಕ್ಷಕರ ದಿನಾಚರಣೆ

ಮೈಸೂರು, ಸೆ. 6– ಟೀಂ ಮೈಸೂರು ತಂಡದಿಂದ ಮೈಸೂರಿನ ವಿವಿಧ ಶಾಲೆ–ಕಾಲೇಜುಗಳಲ್ಲಿ ವೃತ್ತಿಪರ ಉಪನ್ಯಾಸಕರು ಹಾಗೂ ಶಿಕ್ಷಕರಿಗೆ ಗೌರವ ಸಮರ್ಪಣೆ ಮಾಡುವ ಮೂಲಕ ಶಿಕ್ಷಕರ ದಿನವನ್ನು ಮಂಗಳವಾರ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ನಗರ ಪಾಲಿಕೆ ಸದಸ್ಯೆ ಛಾಯಾದೇವಿ, ಕರಗ ದೇವಸ್ಥಾನದ ಕವಿಟಿಯ ಸುಂದರ್ ಮೂರ್ತಿ, ಸ್ಥಳೀಯ ಮುಖಂಡರಾದ ದಾಮೋದರ್, ಹರೀಶ್ ಹಾಗೂ ಕುಮಾರ್ ಟೀಂ ಮೈಸೂರಿನ ಸದಸ್ಯರಾದ ಹಿರಿಯಣ್ಣ ಹಾಗೂ ಮುರುಳಿ ಉಪಸ್ಥಿತರಿದ್ದರು.



ಈ ವೇಳೆ ಮೇಯರ್ ಶಿವಕುಮಾರ್ ಅವರು ಮೌಲ್ಯವರ್ಧಿತ ಶಿಕ್ಷಣದ ಬಗ್ಗೆ ವಿಸ್ತಾರವಾಗಿ ತಿಳಿಸಿಕೊಟ್ಟರು, ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರದ ಹಾಗೂ ಅದರ ಮಹತ್ವದ ಬಗ್ಗೆಯೂ ವಿವರಿಸಿದರು. ಶಿಕ್ಷಕರು ಕೇವಲ ಬೋಧಿಸುವುದನ್ನು ವೃತ್ತಿಯೆಂದುಕೊಳ್ಳದೆ ಪ್ರವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮುಖಾಂತರ ಮುಂದಿನ ಪೀಳಿಗೆಯ ಮಕ್ಕಳಿಗೆ ನಮ್ಮ ದೇಶದ ಆಚಾರ, ವಿಚಾರ, ಸಂಸ್ಕೃತಿ, ಹಬ್ಬ ಹರಿದಿನಗಳ ಆಚರಣೆ, ದೇಶದ ಅಸ್ಮಿತೆಯ ಬಗ್ಗೆ ಮಕ್ಕಳಿಗೆ ತಿಳಿಸಿಕೊಡಿ ಎಂದು ಮನವಿ ಮಾಡಿಕೊಂಡು, ಎಲ್ಲ ಶಿಕ್ಷಕ ವೃಂದದವರಿಗೂ ಶುಭಾಶಯಗಳನ್ನು ತಿಳಿಸಿದರು.

ಟೀಂ ಮೈಸೂರು ತಂಡದ ಸದಸ್ಯ ಕಿರಣ್ ಜೈರಾಮ್, ಈ ಸುದಿನದಂದು ಎಲ್ಲ ಶಿಕ್ಷಕರಿಗೂ ಸದಾ ಪ್ರೇರಣೆಯಾದ ರಾಷ್ಟ್ರದ 2ನೇ ರಾಷ್ಟ್ರಪತಿಯಾಗಿದ್ದ ಅಜಾತಶತ್ರು ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜೀವನ ನಡೆದುಬಂದ ಹಾದಿ ಹಾಗೂ ಅವರ ಹುಟ್ಟುಹಬ್ಬದ ಬದಲಿಗೆ ಶಿಕ್ಷಕರ ದಿನಾಚರಣೆಗೆ ಪ್ರೇರಣೆ, ಆ ದಿನಗಳಲ್ಲಿ ಅವರಿಗೆ ದೊರೆತ ಸಂಬಳದಲ್ಲಿ ಅವರಿಗೆ ಬೇಕಿದ್ದ ಮೊತ್ತವನ್ನು ಇರಿಸಿಕೊಂಡು ಬಾಕಿಹಣವನ್ನು ಸಾಮಾಜಿಕ ಕಾರ್ಯದಲ್ಲಿ ಸದುಪಯೋಗ ಮಾಡಿದ ಬಗ್ಗೆ ತಿಳಿಸಿಕೊಟ್ಟರು.

ಟೀಂ ಮೈಸೂರು ತಂಡದ ಸಂಚಾಲಕ ಗೋಕುಲ್ ಗೋವರ್ಧನ ಮಾತನಾಡಿ, ಧ್ಯೇಯೋದ್ದೇಶ, ಸಾಮಾಜಿಕ ಕಳಕಳಿ, ಹಸಿರು ಕ್ರಾಂತಿ, ಸಾಧಕರಿಗೆ ಸನ್ಮಾನ, ರಾಷ್ಟ್ರೀಯ ಕಾರ್ಯಕ್ರಮಗಳ ಆಚರಣೆ, ವನ ಮಹೋತ್ಸವದ ಸಂದರ್ಭದಲ್ಲಿ ಗಿಡಗಳನ್ನು ನೆಟ್ಟು ಅದರ ಪಾಲನೆ ಹಾಗೂ ಪೋಷಣೆ ಮಾಡಿ ಜೊತೆಗೆ ಆ ಗಿಡಗಳು ಮರಗಳಾಗಿ ಬೆಳೆದು ನಿಲ್ಲುವ ಹಾಗೆ ಮಾಡಿದರೆ ಆ ಮರಗಳು ನಮ್ಮ ಜೀವನದ ನಂತರವೂ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ಆಮ್ಲಜನಕವನ್ನು ನೀಡಿ, ರಕ್ಷಣೆ ಮಾಡುವ ಬಗ್ಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ದೇವಕಿ, ಮೋಹನ್ ಕುಮಾರ್, ಸಚಿನ್, ಮನೋಹರ್, ಉಮಲತ, ದಿವ್ಯಪ್ರಭ, ಸಿಂಧು, ದಿವ್ಯಶ್ರೀ, ಪ್ರಸನ್ನಕುಮಾರ್, ರಂಜಿನಿ, ರಮ್ಯಾ, ಭಾನುಪ್ರಿಯ ಅವರನ್ನು ಸನ್ಮಾನಿಸಲಾಯಿತು. ತಂಡದ ಗೋಕುಲ್ ಗೋವರ್ಧನ್, ಯಶವಂತ, ಕಿರಣ್ ಜೈರಾಮ್ ಗೌಡ, ಅನಿಲ್ ಜೈನ್, ಯತೀಶ್ ಹರೀಶ್‌ಶೆಟ್ಟಿ, ಮಂಜು, (ಫಾರ್ಮ) ಅಭಿಷೇಕ್, ಅಮರ್, ಸಹನಾ, ಶಾಂತ, ಇಟ್ಟಿಗೆಗೂಡಿನ ಶೇಖರ್, ಸುಗುಣ ಶೇಖರ್ ಉಪಸ್ಥಿತರಿದ್ದರು.

ಕಾಡಾನೆ ಹಾವಳಿ ತಡೆಗೆ ಅತ್ಯಾಧುನಿಕ ಸೋಲಾರ್ ಕ್ಯಾಮರಾ ಅಳವಡಿಕೆ

ಮುಖ್ಯಮಂತ್ರಿ ಕಾನೂನು ಸಲಹೆಗಾರ ಪೊನ್ನಣ್ಣ ಆದೇಶದ ಮೇರೆಗೆ ಕಕ್ಕಬ್ಬೆಯಲ್ಲಿ ಪ್ರಾಯೋಗಿಕ ಪ್ರಯತ್ನ

ಮಡಿಕೇರಿ, ಸೆ.6– ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದ್ದು, ವನ್ಯಜೀವಿ, ಮಾನವ ಸಂಘರ್ಷ ತಾರಕಕ್ಕೇರಿದೆ. ಈ ಹಿನ್ನೆಲೆಯಲ್ಲಿ ಇದೀಗ ಅರಣ್ಯ ಇಲಾಖೆ ಅತ್ಯಾಧುನಿಕ ಉಪಕರಣಗಳ ಮೂಲಕ ಕಾಡಾನೆಗಳ ಜಾಡು ಪತ್ತೆ ಕಾರ್ಯಕ್ಕೆ ಮುಂದಾಗಿದೆ.

ಪ್ರಾಯೋಗಿಕವಾಗಿ ಅರಣ್ಯ ಇಲಾಖೆ ಕಕ್ಕಬ್ಬೆ ಶ್ರೀ ಪಾಡಿ ಇಗ್ಗುತ್ತಪ್ಪ ದೇವಾಲಯ ಸಮೀಪದ ನಾಲಾಡಿಗೆ ತೆರಳುವ ರಸ್ತೆ ಬದಿಯ ಎತ್ತರದ ಗುಡ್ಡದ ಮೇಲೆ ಸೋಲಾರ್ ವಿದ್ಯುತ್‌ನಿಂದ ಕಾರ್ಯಾಚರಿಸುವ ಅತ್ಯಾಧುನಿಕ ಕ್ಯಾಮರಾ ಅಳವಡಿಸಿದೆ. ಈ ಕ್ಯಾಮರಾ ದಿನದ 24 ಗಂಟೆಗಳ ಕಾಲ ಕಾರ್ಯಾಚರಿಸುತ್ತಿದ್ದು, 360 ಡಿಗ್ರಿ ಸುತ್ತುವ ಸಾಮರ್ಥ್ಯ ಹೊಂದಿದೆ. ದೂರದಿಂದಲೇ ಕಾಡಾನೆಗಳನ್ನು ಗುರುತಿಸಿ ಅವುಗಳ ಮಾಹಿತಿಯನ್ನು ಅರಣ್ಯ ಇಲಾಖೆಗೆ ನೀಡುವ ತಂತ್ರಜ್ಞಾನವನ್ನು ಈ ಕ್ಯಾಮರಾ ಹೊಂದಿದೆ.

ಇದರಿಂದಾಗಿ ಕಾಡಾನೆಗಳ ಸಂಚಾರ ಮಾರ್ಗ, ಅವುಗಳ ಸಂಖ್ಯೆ, ಕಾಡಾನೆಗಳ ಚಲನ ವಲನ ಮತ್ತಿತ್ತರ ಮಾಹಿತಿಗಳನ್ನು ಅರಣ್ಯ ಇಲಾಖೆ ಗ್ರಾಮಸ್ಥರಿಗೆ ನೀಡಲು ಸಹಕಾರಿಯಾಗಿದೆ. ಇದರಿಂದಾಗಿ ಮಾನವ ಜೀವ ಹಾನಿ ತಡೆಯಬಹುದು ಎಂಬುವು ಅರಣ್ಯ ಇಲಾಖೆ ಲೆಕ್ಕಾಚಾರವಾಗಿದೆ. ಮಾತ್ರವಲ್ಲದೇ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆಗೂ ಈ ಕ್ಯಾಮರಾಗಳು ಸಹಕಾರಿಯಾಗಿವೆ. ಕಕ್ಕಬ್ಬೆ ವ್ಯಾಪ್ತಿಯಲ್ಲಿ ಒಟ್ಟು 3 ಸೋಲಾರ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಈ ಕ್ಯಾಮರಾ ಮೂಲಕವೇ ಫಸಲು ನಾಶ ಮತ್ತು ಮಾನವ–ಕಾಡಾನೆ ಸಂಘರ್ಷಕ್ಕೆ ಕಾರಣವಾಗಿರುವ ಒಂದು ಒಂಟಿ ಪುಂಡಾನೆಯನ್ನು ಈಗಾಗಲೇ ಗುರುತಿಸಲಾಗಿದೆ.



ಶಾಸಕರ ಆದೇಶ ಪಾಲನೆ: ಕಳೆದ ಆಗಸ್ಟ್ 16ರಂದು ಕಕ್ಕಬ್ಬೆ ಗ್ರಾಮದಲ್ಲಿ ಕಂಬೇಯಂಡ ಅನು ಸುಬ್ಬಯ್ಯ ಎಂಬವರು ಕಾಡಾನೆ ದಾಳಿಗೆ ತುತ್ತಾಗಿ ಗಾಯಗೊಂಡಿದ್ದರು. ಗ್ರಾಮ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ಮಿತಿ ಮೀರಿರುವುದನ್ನು ವಿರೋಧಿಸಿ ಅಲ್ಲಿನ ಗ್ರಾಮಸ್ಥರು ಕಕ್ಕಬ್ಬೆ ಗ್ರಾಮದಲ್ಲಿ ಸಾಮೂಹಿಕ ಪ್ರತಿಭಟನೆ ನಡೆಸಿ ಅರಣ್ಯ ಇಲಾಖೆ ವಿರುದ್ಧ ಆಕ್ರೋಷ ಹೊರಗೆಡವಿದ್ದರು. ಈ ವೇಳೆ ಸ್ಥಳಕ್ಕೆ ಧಾವಿಸಿದ್ದ ಪೊನ್ನಣ್ಣ ಕಾಡಾನೆಗಳನ್ನು ಕಾಡಿಗಟ್ಟಲು ಕಾರ್ಯಾಚರಣೆ ನಡೆಸುವಂತೆ ಸೂಚಿಸಿದ್ದರು. ಮಾತ್ರವಲ್ಲದೇ ಕಾಡಾನೆಗಳ ಜಾಡು ಪತ್ತೆ ಹಚ್ಚಲು ಅವುಗಳು ಸಂಚರಿಸುವ ಮಾರ್ಗಗಳಲ್ಲಿ ಕ್ಯಾಮರಾ ಅಳವಡಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಕಕ್ಕಬ್ಬೆ ವ್ಯಾಪ್ತಿಯಲ್ಲಿ ಒಟ್ಟು 3 ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಈ ನಡುವೆ ಸೋಲಾರ್ ಕ್ಯಾಮರಾ ಅಳವಡಿಸಿದ ಕಕ್ಕಬ್ಬೆ ಗ್ರಾಮಕ್ಕೆ ಭೇಟಿ ನೀಡಿದ್ದ ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಪರಿಶೀಲನೆ ನಡೆಸಿದ್ದರು. ಈ ಕುರಿತು ಮೈಸೂರು ಮಿತ್ರನೊಂದಿಗೆ ಮಾತನಾಡಿದ ಸಂಕೇತ್ ಪೂವಯ್ಯ, ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್.ಪೊನ್ನಣ್ಣ ಸದನದಲ್ಲಿ ಕಾಡಾನೆ ಹಾವಳಿ ತಡೆಯಲು ವೈಜ್ಞಾನಿಕ ಕ್ರಮ ಅಳವಡಿಕೆ ಕುರಿತು ಸರಕಾರದ ಗಮನ ಸೆಳೆದಿದ್ದರು. ಮಾತ್ರವಲ್ಲದೇ ಈ ಕುರಿತು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿದ್ದಾರೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಮೇಲೆ ಒತ್ತಡ ಹೇರಿ ಜಿಲ್ಲೆಗೆ ಕರೆಸಿಕೊಂಡು ಕಾಡಾನೆ ಹಾವಳಿ ಮಿತಿ ಮೀರಿರುವ ಪ್ರದೇಶಗಳಿಗೆ ಕರೆದೊಯ್ದು ಅಲ್ಲಿನ ವಾಸ್ತವ ವಿಚಾರಗಳನ್ನು ಸಚಿವರ ಗಮನಕ್ಕೂ ತಂದಿದ್ದಾರೆ. ವೈಜ್ಞಾನಿಕ ರೀತಿಯಲ್ಲಿ ಕಾಡಾನೆ ಹಾವಳಿ ತಡೆಗೆ ಶಾಸಕ ಪೊನ್ನಣ್ಣ ಮುಂದಾಗಿದ್ದು, ಮುಂದಿನ ದಿನಗಳಲ್ಲಿ ಕಾಡಾನೆ ಹಾವಳಿಗೆ ಕಡಿವಾಣ ಬೀಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಡಾನೆ ಹಾವಳಿಗೆ ಬ್ರೇಕ್

ಇನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್. ಪೊನ್ನಣ್ಣ ಅವರು ಕಾಡಾನೆಗಳ ಹಾವಳಿಗೆ ಕಡಿವಾಣ ಹಾಕುವ ಸಲುವಾಗಿ ವೈಜ್ಞಾನಿಕ ರೀತಿಯಲ್ಲಿ ಯೋಜನೆ ರೂಪಿಸಲು ಮುಂದಾಗಿದ್ದಾರೆ. ಕಂದಕಗಳು, ಸೋಲಾರ್ ಬೇಲಿ, ರೈಲ್ವೇ ಬ್ಯಾರಿಕೇಡ್, ರೇಡಿಯೋ ಕಾಲರ್ ಅಳವಡಿಕೆ ಮತ್ತಿತ್ತರ ಯೋಜನೆಗಳನ್ನು ವ್ಯವಸ್ಥಿತವಾಗಿ ಮಾಡುವಂತೆ ಅರಣ್ಯ ಇಲಾಖೆಗೆ ಸೂಚಿಸಿದ್ದಾರೆ. ಅದರಂತೆ ಕಾಡಾನೆಗಳನ್ನು ಕಾಡಿಗೆ ಅಟ್ಟುವುದು, ಪುಂಡಾನೆ ಸೆರೆ ಕಾರ್ಯಾಚರಣೆ ಮತ್ತಿತ್ತರ ಕಾರ್ಯಗಳನ್ನು ಅರಣ್ಯ ಇಲಾಖೆ ಮೂಲಕ ಜಿಲ್ಲೆಯಲ್ಲಿ ಮಾಡಲಾಗುತ್ತಿದೆ. ಹೀಗಿದ್ದೂ ಕೂಡ ಕಾಡಾನೆಗಳ ಉಪಟಳದಿಂದ ಅಹಿತಕರ ಘಟನೆಗಳು ನಡೆಯುತ್ತಿರುವುದು ವರದಿಯಾಗುತ್ತಿವೆ.

ಅರಣ್ಯ ಸಿಬ್ಬಂದಿಯನ್ನು ಬಲಿ ಪಡೆದಿದ್ದ ಕಾಡಾನೆ ಸೆರೆ



ಸಿದ್ದಾಪುರ, ಸೆ.6– ಕಳೆದ ಎರಡು ದಿನಗಳ ಹಿಂದೆ ಅರಣ್ಯ ಇಲಾಖೆ ಸಿಬ್ಬಂದಿಯನ್ನು ಬಲಿ ತೆಗೆದುಕೊಂಡಿದ್ದ ಕಾಡಾನೆಯನ್ನು ಹರಸಾಹಸದಿಂದ ಕಾರ್ಯಾಚರಣೆ ನಡೆಸಿ, ಕೊನೆಗೂ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಎರಡು ದಿನಗಳ ಹಿಂದೆ ಕೆದಕಲ್ ಬಳಿಯ ಕಾಫಿ ತೋಟದಲ್ಲಿ ಬೀಡು ಬಿಟ್ಟಿದ್ದ ಕಾಡಾನೆಯನ್ನು ಕಾಡಿಗಟ್ಟುವ ಕಾರ್ಯಾಚರಣೆ ಸಂದರ್ಭದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಗಿರೀಶ್ ಅವರ ಮೇಲೆ ಕಾಡಾನೆ ದಾಳಿ ನಡೆಸಿ ಬಲಿ ತೆಗೆದುಕೊಂಡಿತ್ತು.

ಕೂಡಲೇ ಕಾಡಾನೆಯನ್ನು ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ ಹಿನ್ನೆಲೆಯಲ್ಲಿ ಮಡಿಕೇರಿ ಕ್ಷೇತ್ರದ ಶಾಸಕ ಡಾ ಮಂಥರ್ ಗೌಡ ಕಾಡಾನೆ ಸೆರೆಹಿಡಿಯಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ದುಬಾರೆ ಸಾಕಾನೆ ಶಿಬಿರದ ಅಜಯ್, ವಿಕ್ರಂ, ಸುಗ್ರೀವ, ಲಕ್ಷ್ಮಣ, ಪ್ರಶಾಂತ್, ಹರ್ಷ ಎಂಬ ಸಾಕಾನೆಗಳೊಂದಿಗೆ 50ಕ್ಕೂ ಹೆಚ್ಚು ಸಿಬ್ಬಂದಿಗಳು ಎರಡು ದಿನಗಳ ಕಾಲ ಆನೆ ಸೆರೆ ಹಿಡಿಯಲು ಕಾರ್ಯಾಚರಣೆ ನಡೆಸಿದ್ದರು ಪತ್ತೆಯಾಗಿರಲಿಲ್ಲ.

ಇಂದು ಮಡಿಕೇರಿ ಸಮೀಪದ ಕಾರೆಕೊಪ್ಪ ಬಳಿಯ ಕಾಫಿ ತೋಟ ಒಂದರಲ್ಲಿ ಕಂಡು ಬಂದ 18 ವರ್ಷ ಪ್ರಾಯದ ಕಾಡಾನೆಯನ್ನು ಅರಣ್ಯ ಇಲಾಖೆಯ ಡಾ ವಾಸಿಂ ಬಂದೂಕಿನ ಮೂಲಕ ಅರವಳಿಕೆ ನೀಡಿ ಸಾಕಾನೆಗಳ ಸಹಕಾರದೊಂದಿಗೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಕಾರ್ಯಾಚರಣೆ ಸಂದರ್ಭ ರಂಪಾಟ ಮಾಡಿದ ಕಾಡಾನೆ ಸಿಬ್ಬಂದಿಗಳ ಮೇಲೆ ದಾಳಿಗೂ ಯತ್ನಿಸಿತ್ತು. ದುಬಾರೆ ಸಾಕಾನೆಗಳ ಸಹಕಾರದಿಂದ ಕಾಡಾನೆಯ ಕಾಲಿಗೆ ಹಗ್ಗ ಬಿಗಿದು ಮುಖ್ಯ ರಸ್ತೆಗೆ ತಂದು ಕ್ರೇನ್ ಮೂಲಕ ಲಾರಿಗೆ ಹತ್ತಿಸಿ ಶಿಬಿರಕ್ಕೆ ಕಳಿಸಲಾಯಿತು. ಕಾಡಾನೆ ಸೆರೆ ಹಿಡಿದ ವಿಷಯ ತಿಳಿದ ಸುತ್ತಮುತ್ತಲ ನಿವಾಸಿಗಳು ಸ್ಥಳದಲ್ಲಿ ಜಮಾಯಿಸಿದರು. ಡಿ ಎಫ್ ಓ ಪೂವಯ್ಯ, ಎಸಿಎಫ್ ಗೋಪಾಲ್, ಆರ್‌ಎಫ್‌ಒ ಚೇತನ್, ಡಿ ಆರ್ ಎಫ್ ಓ ರಂಜನ್, ಸುಬ್ರಯ, ಅನಿಲ್ ಡಿಸೋಜ ಸೇರಿದಂತೆ ಆರ್ ಆರ್ ಟಿ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕಳ್ಳತನಕ್ಕೆ ಬಂದವರು ಮಕ್ಕಳ ಪುಸ್ತಕ ಹರಿದು, ಮದ್ಯ ಸೇವಿಸಿದರು

ಸಿದ್ದಾಪುರ, ಸೆ.6– ಶಾಲೆಯ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ಕಳ್ಳತನಕ್ಕೆ ವಿಫಲ ಯತ್ನ ನಡೆಸಿ ಮಕ್ಕಳ ಪುಸ್ತಕಗಳನ್ನು ಹರಿದು ಹಾಕಿ ಮದ್ಯ ಸೇವಿಸಿ ಪರಾರಿಯಾಗಿರುವ ಘಟನೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಘಟ್ಟದಳ ಸರ್ಕಾರಿ ತಮಿಳು ಶಾಲೆಯಲ್ಲಿ ನಡೆದಿದೆ.

ಎಂದಿನಂತೆ ಶಾಲೆಗೆ ಆಗಮಿಸಿದ ಶಿಕ್ಷಕರಿಗೆ ಕೊಠಡಿಯೊಂದರ ಬೀಗವನ್ನು ಕಬ್ಬಿಣದ ರಾಡಿನಿಂದ ಮುರಿಯಲಾಗಿರುವ ದೃಶ್ಯ ಕಂಡು ಬಂದಿದ್ದು, ಶಾಲಾ ಮುಖ್ಯ ಶಿಕ್ಷಕ ಅಶ್ರಫ್ ಸಿದ್ದಾಪುರ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೊಠಡಿ ಒಂದರಲ್ಲಿ ಸಂಗ್ರಹಿಸಿ ಇಡಲಾಗಿದ್ದ ಪುಸ್ತಕಗಳನ್ನು ಹರಿದು ಹಾಕಿ ಚೆಲ್ಲಾಪಿಲ್ಲಿ ಮಾಡಿದ್ದಾರೆ. ಕೊಠಡಿಯಲ್ಲಿಯೇ ಮದ್ಯ ಸೇವಿಸಿರುವುದು ಕಂಡುಬಂದಿದ್ದು ಬಾಟಲಿ ಮುಚ್ಚಳ ಪತ್ತೆಯಾಗಿದೆ. ಬೆಲೆಬಾಳುವ ವಸ್ತುಗಳಿಗಾಗಿ ಹುಡುಕಾಟ ನಡೆಸಿ ವಿಫಲ ಯತ್ನ ನಡೆಸಿದ್ದಾರೆ ಎನ್ನಲಾಗಿದೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಮಾಲ್ದಾರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಾಲತಿ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪತ್ರಕರ್ತರು, ಪತ್ರಿಕಾ ವಿತರಕರ ಕಾಲ ಬುಡದಲ್ಲೇ ಕತ್ತಲೆ...

ಪತ್ರಿಕಾ ವಿತರಕರ ದಿನಾಚರಣೆಯಲ್ಲಿ ಮಲ್ಲಿಕಾರ್ಜುನ ಬಂಗ್ಲೆ ವಿಷಾದ



ಮಡಿಕೇರಿ, ಸೆ.6– ಸಮಾಜದ ಮೇಲೆ ಬೆಳಕು ಚೆಲ್ಲುವ ಪತ್ರಿಕಾ ಕ್ಷೇತ್ರದಲ್ಲಿ, ಜೋಡೆತ್ತಿನಂತೆ ಕಾರ್ಯ ನಿರ್ವಹಿಸುವ ಪತ್ರಕರ್ತರು ಮತ್ತು ಪತ್ರಿಕಾ ವಿತರಕರ ಕಾಲ ಬುಡದಲ್ಲೇ 'ಕತ್ತಲೆ' ಇದೆ. ಅವರ ಸಂಕಷ್ಟಗಳ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಬೇಕೆಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಂಗ್ಲೆ ಒತ್ತಾಯಿಸಿದ್ದಾರೆ.

ಕೊಡಗು ಪತ್ರಕರ್ತರ ಸಂಘ, ಅಖಿಲ ಕರ್ನಾಟಕ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಕೊಡಗು ಘಟಕ ಮತ್ತು ಕೊಡಗು ಪತ್ರಿಕಾ ಭವನ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ನಗರದ ಪತ್ರಿಕಾ ಭವನದಲ್ಲಿ ಆಯೋಜಿಸಿದ್ದ 'ಪತ್ರಿಕಾ ವಿತರಕರ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೀಪದ ಬುಡದಲ್ಲಿ ಕತ್ತಲಿರುವಂತೆ ಪತ್ರಿಕಾ ಕ್ಷೇತ್ರದಲ್ಲಿ ಅಹರ್ನಿಶಿ ದುಡಿಯುವ ಪತ್ರಕರ್ತರು ಮತ್ತು ಪತ್ರಿಕಾ ವಿತರಕ ಸಮುದಾಯಕ್ಕೆ ಸ್ವಾತಂತ್ರ್ಯ ನಂತರದ ಅವಧಿಯಲ್ಲಿ, ಅವರಿಗೆ ದೊರಕಬೇಕಾದ ಅಗತ್ಯ ಸೌಲಭ್ಯಗಳು ದೊರಕಿಲ್ಲ. ರಾಜ್ಯ ವ್ಯಾಪಿ ಪತ್ರಿಕಾ ಕ್ಷೇತ್ರದಲ್ಲಿ ದುಡಿಯುತ್ತಿರುವ 10 ಸಾವಿರಕ್ಕೂ ಹೆಚ್ಚಿನ ಪತ್ರಕರ್ತರು ಮತ್ತು ಪತ್ರಿಕಾ ವಿತರಕರಿದ್ದಾರೆ. ವಿಪರ್ಯಾಸವೆಂದರೆ ಸರ್ಕಾರದ ಮಾನ್ಯತೆ ಪಡೆದ ಪತ್ರಕರ್ತರ ಸಂಖ್ಯೆ ಕೇವಲ 1500 ಎಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಗತಗೊಳ್ಳದ ಕ್ಷೇಮನಿಧಿ: ಕಳೆದ 2018ರಲ್ಲಿ ಸಿದ್ದರಾಮಯ್ಯ ಅವರು ಅಂದಿನ ಆಡಳಿತಾವಧಿಯ ಕೊನೆಯ ಬಜೆಟ್‌ನಲ್ಲಿ 2 ಕೋಟಿ ರೂ.ಗಳ ಪತ್ರಿಕಾ ವಿತರಕರ ಕ್ಷೇಮನಿಧಿಯನ್ನು ಘೋಷಿಸಿದ್ದರು. ಆದರೆ, ನಂತರದ ಅವಧಿಯಲ್ಲಿ ಅದು ಅನುಷ್ಠಾನಕ್ಕೆ ಬರಲಿಲ್ಲವೆಂದು ಬೇಸರ ವ್ಯಕ್ತಪಡಿಸಿ, ಇಂದಿನ ಸರ್ಕಾರ ವಿವಿಧ ಜನಪರ ಯೋಜನೆಯ ಮೂಲಕ ಕೋಟ್ಯಂತರ ಹಣವನ್ನು ಶ್ರೀ ಸಾಮಾನ್ಯರಿಗೆ ನೀಡುತ್ತಿರುವುದು ಸ್ವಾಗತಾರ್ಹ. ಈ ಅವಧಿಯಲ್ಲಾದರು ಕ್ಷೇಮನಿಧಿಗೆ ಸೂಚಿತ ಮೊತ್ತವನ್ನು ಒದಗಿಸಬೇಕೆಂದು ಆಗ್ರಹ ಪೂರ್ವಕವಾದ ಮನವಿ ಮಾಡಿದರು.

ಸರಕಾರಕ್ಕೆ ತಿಂಗಳ ಗಡುವು: ಮುಂದಿನ 1 ತಿಂಗಳ ಅವಧಿಯಲ್ಲಿ ಪತ್ರಕರ್ತರ ಮತ್ತು ವಿತರಕರ ಮೂಲಭೂತ ಸೌಲಭ್ಯಗಳ ಬಗ್ಗೆ ಸರ್ಕಾರ ಅಗತ್ಯ ಕ್ರಮಗಳನ್ನು ಕೈ ಗೊಳ್ಳಬೇಕು. ಇಲ್ಲವಾದಲ್ಲಿ ನವೆಂಬರ್‌ನಲ್ಲಿ ನಮಗೆ ದೊರಕಬೇಕಾದ ಮೂಲ ಸೌಲಭ್ಯಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಕದ ತಟ್ಟಲಿದ್ದೇವೆಂದು ಮಲ್ಲಿಕಾರ್ಜುನ ಬಂಗ್ಲೆ ಸ್ಪಷ್ಟಪಡಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ವಿಧಾನ ಸಭೆಯ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ ಮಾತನಾಡಿ, ಬಜೆಟ್‌ನಲ್ಲಿ ಕಲ್ಯಾಣನಿಧಿಯನ್ನು ಘೋಷಿಸಿದ್ದಲ್ಲಿ ಅದು ಕಾರ್ಯಗತಗೊಳ್ಳಬೇಕು. ಅದಕ್ಕಾಗಿ ಹಣ ಮೀಸಲಾಗಿರುತ್ತದೆ. ಆದರೆ, ಈ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲ. ಈ ನಿಟ್ಟಿನಲ್ಲಿ ಪ್ರಸ್ತುತ ತಾನು ಮತ್ತು ತನ್ನ ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದರು, ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುವುದಾಗಿ ಸ್ಪಷ್ಟಪಡಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಶಕ್ತಿ ದಿನಪತ್ರಿಕೆಯ ಪ್ರಧಾನ ಸಂಪಾದಕ ಜಿ. ರಾಜೇಂದ್ರ ಮಾತನಾಡಿ, ಪತ್ರಿಕೆಗಳನ್ನು ಓದುಗನಿಗೆ ತಲುಪಿಸುವಲ್ಲಿ ಪ್ರಧಾನ ಪಾತ್ರ ವಹಿಸುವ 'ವಿತರಕ' ಹುದ್ದೆ ಅತ್ಯಂತ ದೊಡ್ಡ ಜವಾಬ್ದಾರಿಯನ್ನು ಹೊಂದಿದ ಗೌರವಯುತ ವೃತ್ತಿಯಾಗಿದೆ. ಪತ್ರಿಕೆ ಮತ್ತು ಓದುಗರ ನಡುವಿನ ಕೊಂಡಿಯೇ 'ವಿತರಕ' ಎಂದು ಬಣ್ಣಿಸಿದರು.

ಸಭಾಧ್ಯಕ್ಷತೆ ವಹಿಸಿದ್ದ ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ. ಮುರಳೀಧರ್ ಮಾತನಾಡಿ, ಮುಂಬರುವ ವರ್ಷಗಳಲ್ಲಿ ಪತ್ರಕರ್ತರು ಮತ್ತು ವಿತರಕರ ನಡುವಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ಕಾರ್ಯಕ್ರಮಗಳನ್ನು ಸಂಘದ ಮುಖೇನ ಹಮ್ಮಿಕೊಳ್ಳಲಾಗುತ್ತದೆ. ಸಂಘದ ವತಿಯಿಂದ ಜಿಲ್ಲೆಯಲ್ಲೆ ಮೊಟ್ಟಮೊದಲ ಬಾರಿಗೆ ಕಳೆದ ಸಾಲಿನಿಂದ ಪತ್ರಿಕಾ ವಿತರಕರ ದಿನಾಚರಣೆಯನ್ನು ಹಮ್ಮಿಕೊಂಡು ಬಂದಿರುವುದಾಗಿ ತಿಳಿಸಿದರು.

ಪತ್ರಿಕಾ ವಿತರಕರ ಪರವಾಗಿ ಚಿ.ನಾ. ಸೋಮೇಶ್ ಮಾತನಾಡಿ, ಕೊಡಗಿನಂತಹ ಗುಡ್ಡ ಗಾಡು ಪ್ರದೇಶದಲ್ಲಿ ಪತ್ರಿಕಾ ವಿತರಣೆ ಎನ್ನುವುದು ಅತೀ ದೊಡ್ಡ ಸವಾಲಿನ ಕೆಲಸವಾಗಿದ್ದು, ಇಲ್ಲಿನ ವಿತರಕರು ಅಷ್ಟೇ ಜವಾಬ್ದಾರಿಯಿಂದ ಆ ಕೆಲಸವನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ಅವರ ಬದುಕನ್ನು ಹಸನುಗೊಳಿಸುವ ನಿಟ್ಟಿನ ಕ್ಷೇಮನಿಧಿ ಜಾರಿಗೆ ಬರುವುದು ಅವಶ್ಯವೆಂದು ತಿಳಿಸಿದರು.

ಪತ್ರಿಕಾ ವಿತರಕರಿಗೆ ಸನ್ಮಾನ: ಜಿಲ್ಲೆಯಲ್ಲಿ ಪತ್ರಿಕಾ ವಿತರಕರಾಗಿ ಸುದೀರ್ಘ ಸೇವೆ ಸಲ್ಲಿಸುತ್ತಿರುವ ಶಕ್ತಿ ಪತ್ರಿಕೆಯ ಸುಬ್ಬಯ್ಯ ಅವರನ್ನು ಕಾರ್ಯಕ್ರಮದಲ್ಲಿ ಅತಿಥಿ ಗಣ್ಯರು ಸನ್ಮಾನಿಸಿ ಗೌರವಿಸಿದರು. ಇದೇ ಸಂದರ್ಭ ಜಿಲ್ಲೆಯ ವಿವಿಧೆಡೆಗಳ 70ಕ್ಕೂ ಹೆಚ್ಚಿನ ಪತ್ರಿಕಾ ವಿತರಕರು ಮತ್ತು ಏಜೆಂಟರಿಗೆ ಕಿರುಕಾಣಿಕೆ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಅಖಿಲ ಕರ್ನಾಟಕ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ಟಿ.ಜಿ.ಸತೀಶ್ ಇತರರು ಉಪಸ್ಥಿತರಿದ್ದರು.

ತಮಿಳುನಾಡಿಗೆ ನೀರು ಬಿಡುತ್ತಿರುವುದಕ್ಕೆ ಭಾರೀ ವಿರೋಧ

ಅರೆಬೆತ್ತಲೆ, ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಂಡು ಪ್ರತಿಭಟನೆ





ಚಾಮರಾಜನಗರ, ಸೆ.6– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡಿರುವುದನ್ನು ಖಂಡಿಸಿ ರೈತ ಸಂಘ ಹಾಗೂ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಅರೆಬೆತ್ತಲೆ ಪ್ರತಿಭಟನೆ ಮತ್ತು ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿಕೊಂಡು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.

ರೈತರ ಪ್ರತಿಭಟನೆ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡಿರುವುದನ್ನು ಖಂಡಿಸಿ ನಗರದಲ್ಲಿ ಬುಧವಾರ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಮುಖ್ಯ ಗೇಟ್ ಬಳಿ ಸಮಾವೇಶಗೊಂಡ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮಳೆ ಕೊರತೆಯಿಂದ ಅನ್ನದಾತರು ಸಂಕಷ್ಟದಲ್ಲಿದ್ದಾರೆ. ಇದನ್ನು ರಾಜ್ಯದ ಸರ್ಕಾರ ಅರಿತು ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಬೇಕು. ಇಲ್ಲಿನ ವಸ್ತುಸ್ಥಿತಿಯನ್ನು ನ್ಯಾಯಾಲಯಕ್ಕೆ ತಿಳಿಸಬೇಕು. ನ್ಯಾಯಾಲಯದಿಂದ ಕಾವೇರಿ– ಕಬಿನಿ ನೀರಿನ ವಿಚಾರಣೆ ವಿಳಂಬವಾಗುತ್ತಿರುವುದರಿಂದ ರೈತರ ಬೆನ್ನಿಗೆ ಬರೆ ಹಾಕಿದಂತಾಗಿದೆ. ಇಂತಹ ವಿಶೇಷ ಪ್ರಕರಣಗಳನ್ನು ಶೀಘ್ರವೇ ಇತ್ಯಾರ್ಥಗೊಳಿಸಬೇಕು ಎಂದು ಒತ್ತಾಯಿಸಿದರು.

ಸಚಿವ ಶಿವಾನಂದ ಪಾಟೀಲ್ ವಿರುದ್ಧ ಆಕ್ರೋಶ: ಇದೇ ವೇಳೆ ಸುದ್ದಿಗಾರರೊಂದಿಗೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, 5 ಲಕ್ಷ ಪರಿಹಾರ ನೀಡುತ್ತಿರುವುದರಿಂದ ರೈತರು ಆತ್ಮಹತ್ಯೆ ಹೆಚ್ಚಳವಾಗುತ್ತಿದೆಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ್ ನೀಡಿರುವ ಹೇಳಿಕೆ ಸರಿಯಲ್ಲ. ನಾವೇ ಸಚಿವರಿಗೆ 50 ಕೋಟಿ ನೀಡುತ್ತೇವೆ. ಅವರು ಆತ್ಮಹತ್ಯೆ ಮಾಡಿಕೊಳ್ಳಿ ಎಂದು ಸವಾಲು ಹಾಕಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಪದಾಧಿಕಾರಿಗಳಾದ ಮಹದೇವಪ್ಪ, ಹರ್ಷ, ಕುವರ್, ಹಾಲಿನ ನಾಗರಾಜು, ಹರ್ಷ, ಕುವರ್, ನಂದೀಶ್, ಶ್ರೀಕಂಠಪ್ಪ, ಪ್ರಭು, ಮಹೇಂದ್ರ, ಸಿದ್ದಲಿಂಗಪ್ಪ, ಮಹೇಶ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿಕೊಂಡು ಪ್ರತಿಭಟನೆ: ನಗರದ ಜಿಲ್ಲಾಧಿಕಾರಿ ಕಚೇರಿಯ ಮುಖ್ಯ ಗೇಟ್ ಮುಂಭಾಗ ಕರ್ನಾಟಕ ಸೇನಾ ಪಡೆಯ ಕಾರ್ಯ ಕರ್ತರು ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿಕೊಂಡು ವಿನೂತನ ಪ್ರತಿಭಟನೆ ನಡೆಸಿದರು. ಇದೇ ವೇಳೆ ತಮಿಳುನಾಡು, ಕರ್ನಾಟಕ ಸರ್ಕಾರ, ಕಾವೇರಿ ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ, ಕನ್ನಡ ಪರ ಸಂಘಟನೆಗಳ ಒಕ್ಕೂಟ ಅಧ್ಯಕ್ಷ ಶಾ. ಮುರಳಿ, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಮಹೇಶ್‌ಗೌಡ, ಸಾಗರ್‌ರಾವತ್, ಗು. ಪುರುಷೋತ್ತಮ್, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಚಾ.ರಾ. ಕುಮಾರ್, ಚಾ.ಸಿ. ಸಿದ್ದರಾಜು, ಲಿಂಗರಾಜು, ತಾಂಡವಮೂರ್ತಿ, ಆಟೋ ನಾಗೇಶ್ ಇದ್ದರು.



ಜಿಲ್ಲೆಯಾದ್ಯಂತ ಕೃಷ್ಣ ಜನ್ಮಾಷ್ಟಮಿಯ ಸಂಭ್ರಮ

ಚಾಮರಾಜನಗರ, ಸೆ.6– ಜಿಲ್ಲೆಯಾದ್ಯಂತ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಶ್ರದ್ಧಾ–ಭಕ್ತಿಯಿಂದ ಆಚರಿಸಲಾಯಿತು.

ಜಿಲ್ಲೆಯ ಯಳಂದೂರು, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ಹಾಗೂ ಚಾಮರಾಜನಗರದ ಹಲವು ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಹೋಮ–ಹವನಗಳು ನೆರವೇರಿದವು. ಕೆಲವಡೆ ಭಜನೆ ಕಾರ್ಯಕ್ರಮ ನಡೆಯಿತು.

ಬೆಳಗ್ಗೆಯಿಂದಲೇ ಭಕ್ತರು ದೇವಾಲಯಗಳಿಗೆ ತೆರಳಿ ಶ್ರೀಕೃಷ್ಣನ ಸ್ಮರಣೆ ಮಾಡುವ ಮೂಲಕ ವಿಶೇಷ ಪೂಜೆ ಸಲ್ಲಿಸಿದರು. ಯಳಂದೂರು ತಾಲೂಕಿ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ, ನಗರದ ಕರಿವರದರಾಜಸ್ವಾಮಿ ದೇವಸ್ಥಾನ, ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ ಸೇರಿದಂತೆ ಜಿಲ್ಲೆಯ ಹಲವೆಡೆ ಇರುವ ಶ್ರೀಕೃಷ್ಣನ ದೇವಾಲಯಗಳಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ ನಡೆಯಿತು.

ಕೃಷ್ಣ– ರಾಧೆ ವೇಷ ತೊಟ್ಟ ಚಿಣ್ಣರು: ಶ್ರೀಕೃಷ್ಣನ ಜನ್ಮದಿನದ ಅಂಗವಾಗಿ ನಗರದ ವಿಶ್ವಹಿಂದೂ ಪರಿಷತ್ ಸೇರಿದಂತೆ ವಿವಿಧ ಶಾಲೆಗಳಲ್ಲಿ, ಅಂಗನವಾಡಿ ಕೇಂದ್ರಗಳು ಸೇರಿದಂತೆ ಜಿಲ್ಲೆಯ ಹಲವು ಶಾಲೆಗಳಲ್ಲಿ ನಾನಾ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಪುಟ್ಟ–ಪುಟ್ಟ ಮಕ್ಕಳು ಶ್ರೀಕೃಷ್ಣ ಹಾಗೂ ರಾಧೆಯ ವೇಷವನ್ನು ಧರಿಸಿಕೊಂಡು ಬಂದು ಸಂಭ್ರಮಿಸಿದರು.

ಶ್ರೀಕೃಷ್ಣ– ರಾಧೆಯ ವೇಷಧಾರಿಗಳಾದ ಮಕ್ಕಳನ್ನು ಕಂಡು ಪೋಷಕರು, ಶಿಕ್ಷಕರು, ನೆರೆದಿದ್ದ ಸಾರ್ವಜನಿಕರು ಖುಷಿಪಟ್ಟರು. ಪುಟ್ಟ ಮಕ್ಕಳಿರುವ ಪ್ರತಿಯೊಂದು ಮನೆಗಳಲ್ಲೂ ಜನ್ಮಾಷ್ಟಮಿಯ ಸಂಭ್ರಮ ಕಂಡುಬಂತು. ತಮ್ಮ ಮುದಿನ ಮಕ್ಕಳಿಗೆ ಶ್ರೀಕೃಷ್ಣ, ರಾಧೆಯ ವೇಷ ತೊಡಿಸಿದ ಪಾಲಕರು ಸಾಮಾಜಿಕ ಜಾಲತಾಣಗಳಲ್ಲಿ ಫೋಟೋ–ವಿಡಿಯೋ ಹಾಕಿ ಸಂಭ್ರಮಿಸಿದರು.

ಶ್ರೀ ಮುದುಕುಮಾರಮ್ಮ ತಾಯಿ ದೇವಸ್ಥಾನದಲ್ಲಿ ಗಣಪತಿ, ಚಂಡಿಕಾ ಹೋಮ



ಚಾಮರಾಜನಗರ, ಸೆ.6– ಚಾಮರಾಜನಗರದ ಹಳೆ ಬಸ್ ನಿಲ್ದಾಣದ ಬಳಿ ಇರುವ ಮುದುಕು ಮಾರಮ್ಮನವರ ದೇವಸ್ಥಾನದಲ್ಲಿ ಸೆ.8ರ ಶುಕ್ರವಾರದಂದು ಲೋಕ ಕಲ್ಯಾಣಕ್ಕಾಗಿ ವಿಶೇಷ ಪೂಜೆ ಏರ್ಪಡಿಸಲಾಗಿದೆ. ಬೆಳಗ್ಗೆ ಗಣಪತಿ ಹೋಮ ಮತ್ತು ಚಂಡಿಕಾ ಹೋಮ, ಪೂಣ್ಯಾಹ, ಕಳಸ ಸ್ಥಾಪನೆ, ಸೂಕ್ತ ಪಾರಾಯಣಗಳು, ಮಾರಮ್ಮ ತಾಯಿಗೆ ಪಂಚಾಮೃತ ಅಭಿಷೇಕ, ಪೂರ್ಣಾಹುತಿ, ನಂತರ ಪ್ರಸಾದ ವಿನಿಯೋಗ ಇರುತ್ತದೆ.

ಮನೆ ಖಾಲಿ ಮಾಡುವಂತೆ ತಾಯಿ ಕಿರುಕುಳ

ದಯಾಮರಣಕ್ಕಾಗಿ ಮಗ–ಸೊಸೆಯಿಂದ ಡಿಸಿಗೆ ಮನವಿ

ಕೊಳ್ಳೇಗಾಲ, ಸೆ.6– ತಾಯಿಯ ಕಿರುಕುಳಕ್ಕೆ ಬೇಸತ್ತು ಮಗ ಮತ್ತು ಸೊಸೆ ದಯಾಮರಣಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.



ತಾಲೂಕಿನ ಜಕ್ಕಳ್ಳಿ ಗ್ರಾಮದ ಅರುಳ್ ಸೆಲ್ವಂ ಮತ್ತು ಆತನ ಪತ್ನಿ ಲ್ಯಾನ್ಸಿ ದಯಾಮರಣಕ್ಕೆ ಮನವಿ ಸಲ್ಲಿಸಿದವರಾಗಿದ್ದು, ಅರುಣ್ ಸೆಲ್ವಂನ ತಾಯಿಯ ಮೋಕ್ಷರಾಣಿ ಕಿರುಕುಳವೇ ದಂಪತಿಯ ಈ ನಿರ್ಧಾರಕ್ಕೆ ಕಾರಣ ಎನ್ನಲಾಗಿದೆ.

ಕಳೆದ 5 ವರ್ಷದ ಹಿಂದೆ ಪ್ರೀತಿಸಿ ವಿವಾಹವಾಗಿದ್ದ ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಅರುಳ್ ಸೆಲ್ವಂ ತನ್ನ ತಾಯಿಯ ಜಾಗದಲ್ಲಿ ಆಕೆಯ ಒಪ್ಪಿಗೆಯ ಮೇರೆಗೆ ಸಾಲ ಮಾಡಿ ಮನೆ ಕಟ್ಟಿಕೊಂಡಿದ್ದ ಎನ್ನಲಾಗಿದ್ದು, ಇತ್ತೀಚೆಗೆ ಮೋಕ್ಷರಾಣಿ ತನ್ನ ಜಾಗದಲ್ಲಿ ಕಟ್ಟಿರುವ ಮನೆ ಖಾಲಿ ಮಾಡುವಂತೆ ಮಗ ಮತ್ತು ಸೊಸೆಗೆ ತಾಕೀತು ಮಾಡಿದ್ದಲ್ಲದೆ, ಈ ಸಂಬಂಧ ಪೊಲೀಸರಿಗೂ ದೂರು ನೀಡಿದ್ದು, ಮನೆ ಖಾಲಿ ಮಾಡಲು ಪೊಲೀಸರು ದಂಪತಿಗೆ ಸೆ.10 ಗಡುವು ನೀಡಿದ್ದಾರೆ ಎನ್ನಲಾಗಿದೆ.

ಇದರಿಂದ ಬೇಸತ್ತ ಅರುಳ್ ಸೆಲ್ವಂ ಮತ್ತು ಲ್ಯಾನ್ಸಿ ದಂಪತಿ ದಯಾಮರಣಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಸಬ್ ಇನ್ಸ್‌ಪೆಕ್ಟರ್ ಗಣೇಶ್, ಈ ವಿಚಾರವಾಗಿ ಯಾರೂ ತಮ್ಮ ಬಳಿ ಬಂದಿಲ್ಲ. ಮನೆ ಖಾಲಿ ಮಾಡುವಂತೆ ಪೊಲೀಸರು ಯಾರಿಗೂ ಹೇಳುವುದಿಲ್ಲ ಎಂದರಲ್ಲದೆ, ದಂಪತಿ ದಯಾಮರಣಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ ಎಂಬ ವಿಚಾರ ಮಾಧ್ಯಮದ ಮೂಲಕವಷ್ಟೇ ತಮಗೆ ತಿಳಿದಿದೆ ಎಂದರು.

ಉದಯನಿಧಿ ಸ್ಟಾಲಿನ್, ಮಹದೇವಪ್ಪ, ಪ್ರಕಾಶ್‌ರೈ ವಿರುದ್ಧ ಪ್ರತಿಭಟನೆ

ಚಾಮರಾಜನಗರ, ಸೆ.6– ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರ ಪುತ್ರ ಸಚಿವ ಉದಯನಿಧಿ ಸ್ಟಾಲಿನ್, ರಾಜ್ಯ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ ಹಾಗೂ ಚಿತ್ರನಟ ಪ್ರಕಾಶ್‌ರೈ ವಿರುದ್ಧ ನಗರದಲ್ಲಿ ಬುಧವಾರ ಆಜಾದ್ ಹಿಂದೂ ಸೇನೆಯಿಂದ ಪ್ರತಿಭಟನೆ ನಡೆಯಿತು.



ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಸಮಾವೇಶಗೊಂಡ ಕಾರ್ಯಕರ್ತರು ಅಲ್ಲಿಂದ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ನಂತರ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸೇನೆಯ ರಾಜ್ಯಾಧ್ಯಕ್ಷ ಎಂ.ಎಸ್. ಪೃಥ್ವಿರಾಜ್ ಮಾತನಾಡಿ, ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಸನಾತನ ಧರ್ಮವು ಡೆಂಘೀ, ಮಲೇರಿಯಾ ರೋಗಗಳ ರೀತಿಯಲ್ಲಿ ನಿರ್ಮೂಲನೆ ಆಗಬೇಕು ಎಂದು ಹೇಳಿಕೆ ನೀಡುವ ಮೂಲಕ ಹಿಂದೂ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ. ಅವರ ಹೇಳಿಕೆಯನ್ನು ಸಮರ್ಥನೆ ಮಾಡಿಕೊಂಡಿರುವ ರಾಜ್ಯದ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು. ಜೊತೆಗೆ ಚಿತ್ರನಟ ಪ್ರಕಾಶ್‌ರೈ ಸೇರಿದಂತೆ ಮೂವರ ಮೇಲೆ ಮೊಕದ್ದಮೆ ದಾಖಲು ಮಾಡಿ ದೇಶದಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಸುರೇಶ್‌ನಾಯಕ, ಬಸವಣ್ಣ, ವೆಂಕಟೇಶ್, ಎಸ್. ಚಂದ್ರಶೇಖರ್, ಮಹದೇವಸ್ವಾಮಿ, ಪ್ರಭು, ಶಮಿತ್, ಮಹೇಶ್, ನಾಗೇಂದ್ರ, ರವಿ, ಶ್ರೀನಿವಾಸ, ಮೂರ್ತಿ, ಮಹೇಶ್, ನಾಗರಾಜು, ಗುರು, ಆನಂದ್, ರಾಜೇಂದ್ರ, ಶೇಖರ್, ನಾಗು, ಮಣಿಕಂಠ, ಶಿವು, ಜಯ ಸೂರ್ಯ, ದೀಪು, ಪ್ರಾಶ, ಭಾಸ್ಕರ್, ಆನಂದ್, ರಾಚಪ್ಪ ದೇವರಾಜು, ಕೃಷ್ಣ ಮೆಂಕಿ ಇತರರಿದ್ದರು.

ಸೆ. 11, ನಗರದಲ್ಲಿ ಅರಣ್ಯ ಹುತಾತ್ಮರ ದಿನ ಆಚರಣೆ

ಚಾಮರಾಜನಗರ, ಸೆ.6– ಅರಣ್ಯ ಇಲಾಖೆಯಲ್ಲಿ ಅರಣ್ಯ ಸಂಪತ್ತನ್ನು ಕಳ್ಳ–ಕಾಕರಿಂದ ರಕ್ಷಿಸುವ ಸಂದರ್ಭದಲ್ಲಿ ಕೆಚ್ಚೆದೆಯಿಂದ ಹೋರಾಡಿ ವೀರ ಮರಣವನ್ನಪ್ಪಿದ ದಿವಂಗತರ ನೆನಪಿಗಾಗಿ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನವನ್ನು ಸೆ.11ರಂದು ಬೆಳಿಗ್ಗೆ 9 ಗಂಟೆಗೆ ನಗರದ ಅರಣ್ಯ ಕೇಂದ್ರ ಸಸ್ಯಕ್ಷೇತ್ರದ ಅರಣ್ಯ ಹುತಾತ್ಮರ ಸ್ಮಾರಕದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.13, ಲೋಕಾಯುಕ್ತದಿಂದ ಸಾರ್ವಜನಿಕರಿಂದ ದೂರು ಸ್ವೀಕಾರ

ಚಾಮರಾಜನಗರ, ಸೆ.6– ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳು ಸೆ.13ರಂದು ಕೊಳ್ಳೇಗಾಲಕ್ಕೆ ಭೇಟಿ ನೀಡಿ ಅಲ್ಲಿನ ಪ್ರವಾಸಿಮಂದಿರದಲ್ಲಿ (ಐ.ಬಿ) ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ.

ಅಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕೊಳ್ಳೇಗಾಲದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸುವರು. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕ ಕೆಲಸ ಮಾಡಿ ಕೊಡಲು ಅಧಿಕಾರಿ, ಸಿಬ್ಬಂದಿಯಿಂದ ಲಂಚದ ಬೇಡಿಕೆ, ಕಚೇರಿ ಕೆಲಸದಲ್ಲಿ ಅನಗತ್ಯ ವಿಳಂಬ, ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ಹಾಗೂ ನೌಕರರ ವಿರುದ್ಧ ಸಾರ್ವ ಜನಿಕರು ಲೋಕಾಯುಕ್ತ ಕಾಯ್ದೆಯಡಿ ದೂರುಗಳನ್ನು ನಿಗದಿತ ನಮೂನೆ–1 ಮತ್ತು 2ರಲ್ಲಿ ಭರ್ತಿ ಮಾಡಿ ನೀಡಬಹುದು. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಚಾಮರಾಜನಗರದ ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬಾಡಿಗೆಗೆ ಇದೆ

ಮೈಸೂರಿನ ವಿಜಯನಗರದಲ್ಲಿ ಬ್ಯಾಂಕ್, ಹೋಟೆಲ್ ಮತ್ತು ಶಿಕ್ಷಣ ಸಂಸ್ಥೆ ನಡೆಸಲು ಕಮರ್ಷಿಯಲ್ ಸ್ಥಳ ನೆಲ ಮತ್ತು ಮೊದಲ ಮಹಡಿಯಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ:

9900197397

30x40 ಸೈಟ್ ದಟ್ಟಗಳ್ಳಿ
30x50 ಆದಿತ್ಯ ಸರ್ಕಲ್ ಹತ್ತಿರ
20x30 ಸೈಟ್ ದಟ್ಟಗಳ್ಳಿ
ಹಳೆಮನೆ+ಹೊಸಮನೆ ಸೈಟ್ ಮಾರುವವರು ಕೊಳ್ಳುವವರು ಸಂಪರ್ಕಿಸಿ:

9945042875



ಜಾದೂಗಾರ್ ಗುರುಸ್ವಾಮಿ ರವರಿಂದ ಶ್ರೀ ಗಣೇಶ ಸಂಘದವರಲ್ಲಿ ವಿನಂತಿ ಗೌರಿ ಗಣೇಶ ಹಬ್ಬದ ಪ್ರಯುಕ್ತ ಮಾತಾನಾಡುವ ಗೊಂಬೆ ಹಾಗೂ ಮ್ಯೂಜಿಕ್ ಷೋ(ಜಾದೂ) ಪ್ರದರ್ಶನವನ್ನು ಪ್ರದರ್ಶಿಸಲಾಗುತ್ತದೆ.

9886818529
9448553806

INDUSTRIAL SHEDS FOR RENT OR LEASE IN MYSORE

3000 sqft & 4000 sqft sheds for Rent or lease in one location with all facilities & 3 phase HP power, Labours Room etc.. contact

9845300069

BROKERS ALSO WELCOME

ಮಂಟಪ ಮನೆ



ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ ಸಂಪರ್ಕಿಸಿ: ಶ್ರೀನಗರ ಮೈಸೂರು

9448207634
9036742526

YUKTHA CONSTRUCTIONS HOUSE FOR SALE @

20x30 at Railway Layout
20x30 at J.P.Nagar
30x40 at Sri Rampura
30x40 at Sri Nagara
Sites are available

7892381659
9986603572

ಆರ್ಕೇಸ್ಟ್ರಾ

ಕಾರ್ಯಕ್ರಮಕ್ಕಾಗಿ ಸಂಪರ್ಕಿಸಿ:



P.R.K. ಮ್ಯೂಸಿಕ್ ಆರ್ಕೇಸ್ಟ್ರಾ, ಮೈಸೂರು

9902639553

WANTED

Lady Office Assistant for a Doctor's Clinic residing near Kuvempunagar

8762277008

with a minimum qualification of SSLC and a computer knowledge

---

WANTED

We require Helpers, no Qualification Required. We also Require B.Com Graduates (Males Only)

0821-2582668
7204445679

Address: - Mystech Machines #Q113, 4th Cross, 8th Main, Hebbal Industrial Estate, Mysore-570016

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.

9590491194,9606783264

WANTED

SECURITY SUPERVISORS (MALE)
08 hrs Duty, Age : 30 to 45 Yrs, Edu: SSLC/PUC
SECURITY GUARDS (MALE)
12 hrs Duty, Age : 30 to 50 Yrs, Edu: SSLC/PUC
Location: Mysore (Hebbal, Vijayanagar, Belavadi)

9844235981
9739199355

ಬೇಕಾಗಿದ್ದಾರೆ

ಹಾರ್ಡ್‌ವೇರ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸ್ಥಳ: ನಂಜುಮಳಿಗೆ

9380997148

DUPLEX HOUSE FOR RENT

20x30,
3BHK Vijayanagar
4th Stage, 1st Phase
Near Ring Road

9845028614

SITES FOR SALE

30x40 (Sites)
Old Kesare Main Road (7 kms from City), adjacent to Army Layout, Mysore.

Mob: 9900375763

ಬೇಕಾಗಿದ್ದಾರೆ

ಗ್ರಾಫಿಕ್ ಡಿಸೈನರ್ ಮತ್ತು ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

9743466251

For Sale our 40x30 North facing constructed house under Mysore Corporation Khata. Location: JP Nagar, Manandawadi road, Sangeet silks, Mysore. Details: Ground 3 Bachelors Room rented out. top is the Triplex house with 1 Kitchen, 4 Bedrooms with Attached bath & Toilet Hall having 250sft for Home theatre, Gym. Party Hall etc. ICICI Loan LAP - Rs. 41,00,000/. Quoting Price : 1,85,00,000/-

8095444834

ಸಂಪು ಕ್ಲೀನಿಂಗ್

ಸಂಪರ್ಕಿಸಿ:

8431541631

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:

7406375196, 9880548596

Alpha School of Fashion Design Mysore



Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE

ADMISSION OPEN
*HOSTEL AND PG AVAILABLE

Alpha School of Fashion Design No.66/2, Manandavadi Road, Near Ring Road Signal Junction, Srirampura, Mysore **7829937469**

WANTED

Experienced Sales Boys & Sales Girls for Textile Shop.
Attractive salary + ESI, PF + Incentive.
Gandhi Circle, Mysore.

Mob: 9740309995

Call after 10.30 am

AFFIDAVIT

I, MOHAMMED SULAIMAN S/o Late MOHAMMED PEER Residing at no.392, 2nd Cross, Siddiq Nagar, Bannimantap 'B' layout, Mysore-570015. Declared that my name has been changed from NADEEM PASHA to MOHAMMED SOLAIMAN on my own free will sworn in before notary L.N. RAJENDRAN Vide Affidavit date 4-9-23

Sd/- MOHAMMED SULAIMAN

ಬೇಕಾಗಿದ್ದಾರೆ

ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ

ಶೇಖರ್: **9945911118**
ಅನಿಲ್: **7026996123**

ARTHOR SERVICES PVT. LTD
L-89, 2nd Floor, 'M' Block, Opp. Karuna Hospital, Kuvempunagar, Mysore-570023

40×60 SITE FOR SALE

MUDA APPROVED
East facing
Rajeev Nagar 2nd Stage
Near Gupta Store, MYSORE
Rs. 1 Crore

Call : 9845286583

AFFIDAVIT

I, Nikitha Malode D/o Prakash Malode, residing at D.No. 468/E, 1st Stage, 2nd Phase, near Triveni Bakery, Gayathripuram, Udayagiri, Mysore-570 019. State that my name has been mentioned as **Nikhita Prakash Malode,** in passport. But in my Adhaar card & in My SSLC Marks card my name has been mentioned as **Nikita Malode.** The above said, names are one & the same and also in Future correspondence my name is **Nikita Malode,** in future I will sing as **Nikita Malode,** Before Notary C.R. Seetharam, Mysore on 5.9.2023.

Sd/- Nikita Malode

AFFIDAVIT

I, **Vaishali P Malode** W/o Prakash Malode, residing at D.No. 463/E, 1st Stage 2nd Phase, near Triveni Bakery, Gayathripuram, Mysore-570 019. State that my name has been mentioned as **Vyshali Prakash Malode,** in passport. But in my Adhaar card & all other documents my name has been mentioned as **Vaishali P Malode.** The above said, names are one & the same, also in future correspondence my name is **Vaishali P Malode,** in future I will sign as **Vaishali P Malode.** Before Notary C.R. Seetharam, Mysore on 5.9.2023.

Sd/- Vaishali P Malode

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING
574, 9th Cross, Anikethara Road, kuvempunagar, Mysuru

MYSURU **9611028523** MANGALORE **9343142258**

ಬೇಕಾಗಿದ್ದಾರೆ/ Wanted

ಮೈಸೂರಿನ KD ರೋಡ್‌ನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ 1) ಸಪ್ಲೈಯರ್ (Supplier) ವೇಯಿಟರ್ (Waiter), 2) Assistant Cooks, 3) ಕೌಂಟರ್ ಪಾರ್ಸೆಲ್ (Parcel), 4) Tea, Cofee (ಚೇಫ್) ಬೇಕಾಗಿದ್ದಾರೆ. ಆಕರ್ಷಕ ಸಂಬಳ ಹಾಗೂ ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ

8884066266

ಪ್ರಗತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು

ನಂ.ಸಿಹೆಚ್18, 1ನೇ ಮಹಡಿ, 6ನೇ ಮೇನ್, 3ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–570009

ನಮ್ಮ ಸಂಘದ 2022–23ನೇ ಸಾಲಿನ 8ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 15–09–2023 ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ಸಂಘದ ಆವರಣದಲ್ಲಿ ಅಧ್ಯಕ್ಷರಾದ ಶ್ರೀ ಕುಮಾರ್.ಎನ್ ಇವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರು ಸಭೆಯಲ್ಲಿ ಭಾಗವಹಿಸಲು ಕೋರಿದೆ.

ಸಹಿ/– ಶ್ರೀಮತಿ ಎಸ್.ಶೈಲಜಾ, ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ

ಬ್ರಾಹ್ಮಣ ಅಥವಾ ಆರ್ಯವೈಶ್ಯ ಜನಾಂಗದ ಮಹಿಳೆ ಸಸ್ಯಾಹಾರ ಅಡುಗೆ ಕೆಲಸಕ್ಕಾಗಿ ಬೇಕಾಗಿದ್ದಾರೆ. ಸಂಬಳ ಹತ್ತು ಸಾವಿರ, ಊಟ ಮತ್ತು ವಸತಿ ನೀಡಲಾಗುತ್ತದೆ. ವಯಸ್ಸಿನ ಮಿತಿ 40 ವರ್ಷ.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಶ್ರೀ ವಾಸವಿ ಶಾಂತಿಧಾಮ, Archives, ಮೈಸೂರು

9353267509

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್

21–9–23: ನೇಪಾಳ್ ಮುಕ್ತಿನಾಥ್, ಕಠ್ಮಂಡು, ಮನೋಕಾಮನ, ಪೋಕ್ರ, ಲುಂಬಿನಿ, ಜೋಮೋ ಸೋಮ್, ಪಶುಪತಿನಾಥ್, ಸ್ವಯಂಭುನಾಥ್, ಅಯೋಧ್ಯೆ, ಗೋರಖ್‌ಪುರ್.
30–9–23: ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್.
25–10–23: ಗುಜರಾತ್, ಸೋಮ್‌ನಾಥ್, ನಾಗನಾಥ್, ದ್ವಾರಕಾ, ಸರ್ದಾರ್ ವಲ್ಲಭ್‌ಭಾಯ್ ಪಟೇಲ್ ಸ್ಟ್ಯಾಚ್ಯು. ಸಂಪರ್ಕಿಸಿ:

9591017782, 9964527782

WANTED

1) Door man
2) Security Supervisors
3) Security Guard.
4) Housekeeper (only female). Contact:

9242406261, 9686422400

WANTED

English and Maths teaching staff for reputed institution. Send your resume through WhatsApp / Message.

8971577685, 9980631121

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗ ಬೇಕಾಗಿದ್ದಾರೆ.
ಇಚ್ಚೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್, ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು

WANTED

LADY CUSTOMER CARE EXECUTIVES

Age 27-42 years, any PUC / Degree / Diploma with computer knowledge must. Vanajarao Matrimony, Sarawswathipuram.

Mob: 9343175000

ಬೇಕಾಗಿದ್ದಾರೆ

ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ಆಸಕ್ತಿಯುಳ್ಳ 18 ವರ್ಷ ಮೇಲ್ಪಟ್ಟ ಯುವಕ ಯುವತಿಯರು ಕೂಡಲೇ ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ ತಿಂಗಳ ವೇತನ 12000 ರಿಂದ 18000 ತನಕ ಕೊಡಲಾಗುವುದು. ಮೊದಲು ಬಂದವರಿಗೆ ಆದ್ಯತೆ, ನಿಮ್ಮ ದಾಖಲಾತಿ ಸಮೇತ ಸಂಪರ್ಕಿಸಿ

9035324777
7259306665

ಖಾಲಿ ನಿವೇಶನ ಮಾರಾಟಕ್ಕಿದೆ

ಸ್ಥಳ: ಪಾಂಡವಪುರ ಪಟ್ಟಣ, ಕೃಷ್ಣನಗರ,
ಅಳತೆ : ಪೂರ್ವ–ಪಶ್ಚಿಮ: 48',
ಉತ್ತರ–ದಕ್ಷಿಣ: 40'

8073589849

SITES FOR SALE

30x40, 20x40, 30x35 sites,
Bank loan upto 80%
near Gurur Bus Stop,
Ramabainagar, Mysore.
DTCP Approved
(Corporation limits)
1.5 kms from JP Nagar Ring Road

Mob: 8660105902

SITE FOR SALE

30x40, West facing, #5378, MUDA property, clear documents, near Raju Corner, Vijayanagar 4th Stage, 2nd Phase.

Mob: 7406351328

Old Age Home

For bedridden and senior citizens we offer accommodation, Veg. food, Nursing Care, Medical Services at our Centre in Gokulam, Mysore at a reasonable cost.

Mob: 98801-02700

ಸಂಪು ಕ್ಲೀನಿಂಗ್‌ಗಾಗಿ

ಸಂಪರ್ಕಿಸಿ:

8861612486

ಸೈಟುಗಳು ಮಾರಾಟಕ್ಕಿವೆ ಮುಡಾ ಅಪ್ರೂವ್ಡ್

30x40 - North West, 40x60 N/F, 40x60 W/F.
ರಿಂಗ್ ರಸ್ತೆ ಹತ್ತಿರ, ಯೂನಿವರ್ಸಿಟಿ ಲೇಔಟ್ ಎದುರು.
30x50 E/F ATME Engineering ಕಾಲೇಜ್ ಪಕ್ಕ.
40x60 East face ವರುಣ ಹತ್ತಿರ.

Mob: 900372792

ಬಾಡಿಗೆಗೆ

ಮೈಸೂರು ಸಿಟಿ ವಿದ್ಯಾರಣ್ಯಪುರಂ 4ನೇ ಮುಖ್ಯ ರಸ್ತೆಯ 27ನೇ ಕ್ರಾಸಿನ ಕಾರ್ನರ್‌ನಲ್ಲಿ 2 ಅಂಗಡಿಗಳು (10x10) ಅಡಿ ಪಶ್ಚಿಮ ದಿಕ್ಕಿನಲ್ಲಿ ಲಭ್ಯವಿದೆ.
(Near Sterling Theatre)

9448872684
9900079871

GRAB GOLDEN BUSINESS OPPURCHUNITY RECOGNIZED BY AAA RATED COMPANY RETIRED OFFICER, SR. CITIZEN, HOUSEWIVES, BUSINESS MEN BENEFITS-BASIC SALARY, PF, ESI, UNLIMITED INCENTIVE, FOREIGN TRIPS

9845452922
9845233998

SITE FOR SALE

WEST FACING 30X40 SITE AT ROYAL CLARIE LAYOUT BOGADI GADDIGE ROAD

9342182275

ಉದ್ಯೋಗ ಅವಕಾಶ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-

9740733021, 9535028750

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು

Famous Astrologer
ಪಂಡಿತ್ ಸಂತೋಷ್. **9741250896**

ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು

ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: **9741806990**

ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

CHAMUDESHWARI MATRIMONY

ಎಲ್ಲಾ ಜಾತಿಯ ವಧುವರರು ಹಾಗೂ ವಧುಗಳು ಮರು ವಿವಾಹ ಹಾಗೂ ವಿಚ್ಛೇದಿತರು ವಿಧವೆಯರು ವಿಧುರರು ನೇರವಾಗಿ ಸಂಪರ್ಕಿಸಿ:
MA,BE, M.tech, MBA, Diploma SSLC, MBBS
ನಂ. 554, 1ನೇ ಮಹಡಿ, ಯೂನಿಯನ್ ಬ್ಯಾಂಕ್ ಹೂಟಗಳ್ಳಿ ಸಿಗ್ನಲ್ ಬಲಭಾಗ, ಕೆ.ಆರ್.ಎಸ್. ಮೈಸೂರು–18

8951241381

(ಮ್ಯಾನ್‌ಪವರ್ ಪ್ಲೇಸ್‌ಮೆಂಟ್)

ಬೇಕಾಗಿದ್ದಾರೆ

ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರಕ್ಕೆ ಸೇವಾ ಮನೋಭಾವವುಳ್ಳ ನುರಿತ ಆಪ್ತ ಸಮಾಲೋಚಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುತ್ತದೆ.

8803344999

(30X40) SALE

@ "Olive Enclave"
Mys-B'lore Highway
3 km from Columbia Hospital. Rs. 26 Lakhs.

95388-39926

ಹೊಸ ಮನೆ ಮಾರಾಟಕ್ಕಿದೆ

20x30, ಈಸ್ಟ್ ಫೇಸ್, ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್, ಶ್ರೀರಾಂಪುರ 2ನೇ ಹಂತ, ನಿಯರ್ ನಾಯ್ಡು ಸ್ಟೋರ್, ಮೈಸೂರು.

9845713284, 9141353309

40x60 ಅಳತೆಯ DTCP "A' ಖಾತೆಯುಳ್ಳ ಸೊಸೈಟಿ ಸೈಟು ಮಾರಾಟಕ್ಕಿದೆ. 23 ಲಕ್ಷಗಳು ಮಾತ್ರ W/F ನಂಜುಂಡೇಶ್ವರ ನಗರ TVS ಫ್ಯಾಕ್ಟರಿ ಹತ್ತಿರ, ಮೈಸೂರು. 20x30 ಅಳತೆಯ KHB ಸೈಟು ಮಾರಾಟಕ್ಕಿದೆ. N/F, 8 ಲಕ್ಷದ 75000 ಸಾವಿರಗಳು. ಇಲವಾಲದ ಹತ್ತಿರ, ಮೈಸೂರು.

Mob: 9742198093

30x28 ಅಳತೆಯ MUDA ಖಾತೆಯುಳ್ಳ ಸೈಟು ಮಾರಾಟಕ್ಕಿದೆ. 21 ಲಕ್ಷದ 50 ಸಾವಿರಗಳು. ಯಶಸ್ವಿನಿ ದೃಷ್ಟಿ ಎನ್‌ಕ್ಲೇವ್, ಶ್ರೀನಗರದಿಂದ 1 ಕಿ.ಮೀ. ದಡದಹಳ್ಳಿ ರಸ್ತೆ, ಮೈಸೂರು.

9742198093

New House for Sale

20x30, GF & FF, West facing, Door West, MUDA, 65 Lakhs. Negotiable. Srirampura 2nd Stage, near Railway Workshop, Mysuru.

9538178676, 9141939392

ಕೆಲಸಕ್ಕೆ ಬೇಕಾಗಿದ್ದಾರೆ

ಶ್ರೀನಿಧಿ ಹಾಲಿಡೇಸ್ ಆಫೀಸ್‌ನಲ್ಲಿ ಕೆಲಸ ಮಾಡಲು ಇಂಗ್ಲೀಷ್ ಮಾತನಾಡಲು ಬರುವವರು, ಕಂಪ್ಯೂಟರ್ ಕಲಿತಿರುವವರು.
No age Limit. ಸಂಪರ್ಕಿಸಿ:

9740776666
7557553777

MATCH MAKERS, BRIDE / GROOMS ವಧು/ವರರ ಮದುವೆ ಆಯ್ಕೆ ಕೇಂದ್ರ

ಎಲ್ಲಾ ಜಾತಿಯ Govt Job, Private ಡಾಕ್ಟರ್, ಇಂಜಿನಿಯರ್, ಎಲ್ಲಾ ಡಿಗ್ರಿಗಳು Etc.
1) ವಧುಗೆ 34 ವರ್ಷ ಮನೆ ಅಳಿಯಬೇಕು.
2) ಒಂಟಿ ಸ್ವತಂತ್ರ್ಯ 280 ವಧುಗಳಿಗೆ ವರ ಬೇಕು. ಕರ್ನಾಟಕಾದ್ಯಂತ ಇರುವ ಲಕ್ಷಾಂತರ ವಧು/ವರರ ಆಯ್ಕೆಗೆ ನೇರ ಸಂಪರ್ಕಿಸಿ: 1st Marriage ಒಂಟಿ, ಸ್ವತಂತ್ರ್ಯರು Life Partner ಗಾಗಿ/ಮಧುವೆ ಆಯ್ಕೆಗಾಗಿ ನೇರ ಭೇಟಿ ನೀಡಿ

7975728012

WANTED SITES

@ Yelwala, Anandasagara, Nithyananada Sagara, Paramananda Sagara & Vijayanagar surroundings. Quick Regn.

Mob: 93421-25252

ಮನೆ ಬೋಗ್ಯಕ್ಕಿದೆ

ಮೈಸೂರಿನ ಜೆ.ಪಿ. ನಗರದ ಹಿಂಭಾಗ ಮಹದೇವಪುರದಲ್ಲಿ 2 ಬೆಡ್ ರೂಮಿನ ಮತ್ತು 1 ಬೆಡ್ ರೂಮಿನ ಹೊಸ ಮನೆ ಬೋಗ್ಯಕ್ಕಿದೆ ಮತ್ತು ವಿಜಯನಗರ 2ನೇ ಸ್ಟೇಜ್‌ನಲ್ಲಿ 3ನೇ ಅಂತಸ್ಥಿನಲ್ಲಿ 2 ಬೆಡ್ ರೂಮಿನ ಮನೆ ಬೋಗ್ಯಕ್ಕಿದೆ.
ಸಂಪರ್ಕಿಸಿ: ಸುರೇಶ್

Mob: 9206470833

ಬರವಣಿಗೆಯ ಕೆಲಸ

ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.

9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

Sudarshan Saur SOLAR WATER HEATER



ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available

SUNZONE SOLAR SYSTEM
Vishwamanava Double Road, Kuvempunagar, Mysuru

9845175443

ಪ್ರಮಾಣ ಪತ್ರ

ಚಾಮರಾಜನಗರ ತಾಲ್ಲೂಕು, ಹರದನಹಳ್ಳಿ ಹೋಬಳಿ, ಹರದನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀನಿವಾಸ ರವರ ಧರ್ಮಪತ್ನಿಯಾದ ಶ್ರೀಮತಿ ಎಸ್. ಜಯಲಕ್ಷ್ಮೀ (S. Jayalakshmi), ಆದ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ, ನನ್ನ ಆಧಾರ್ ಕಾರ್ಡ್, ರೇಷನ್‌ಕಾರ್ಡ್‌ಗಳಲ್ಲಿ ನನ್ನ ಹೆಸರು ಎಸ್. ಜಯಲಕ್ಷ್ಮೀ ಎಂದು ನಮೂದಾಗಿರುತ್ತದೆ, ಆದರೆ ಚಾಮರಾಜನಗರ ತಾಲ್ಲೂಕು, ಹರದನಹಳ್ಳಿ ಶಾಖೆಯ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನ ಉಳಿತಾಯ ಖಾತೆಯ ಸಂಖ್ಯೆ 64105870639. ಸದರಿ ನನ್ನ ಖಾತೆಯ ಪಾಸ್ ಪುಸ್ತಕದಲ್ಲಿ ನನ್ನ ಹೆಸರು ಮಣಿ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದರೆ ನನ್ನ ನಿಜವಾದ ಹೆಸರು ನನ್ನ ಎಲ್ಲ ದಾಖಲಾತಿಗಳಲ್ಲಿ ಇರುವಂತೆ ಎಸ್. ಜಯಲಕ್ಷ್ಮೀ ಎಂಬುದಾಗಿರುತ್ತದೆ ಎಂದು ನೋಟರಿ ನಾಗಣ್ಣ ರವರ ಎದುರು ದಿನಾಂಕ 1–9–2023ರಂದು ಪ್ರಮಾಣೀಕರಿಸುತ್ತೇನೆ.

ಸಹಿ/– ಎಸ್. ಜಯಲಕ್ಷ್ಮೀ

For Sale

1) 30x40 Preethi layout Srirampura
2) 30x40 Sky top layout yeliwala
3) 40x60 Commercial Hootagalli
4) 40x55 East Saraswathi Puram

Prakruthi Properties

95386 90359
90359 90359

SITE FOR SALE

30X40
SITE FOR SALE
Dattagalli
(near christ Public School)

9880273834

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್

ಮೊ.: **9731839596**

ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು

ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: **9880583804**

ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಮನೆಯಿಂದಲೇ ಕೆಲಸ

ಪಾರ್ಟ್ ಟೈಂ/ಫುಲ್ ಟೈಂ ಕನ್ನಡ, ಇಂಗ್ಲೀಷ್ ಬರವಣಿಗೆ ಮೊಬೈಲ್ ಟೈಪಿಂಗ್ ಹಾಗೂ ಮೆಹಂದಿ ಪ್ಯಾಕಿಂಗ್ ಕೆಲಸ.
ಗಳಿಸಿ 18000/– ದಿಂದ 35000/–

7022530827

100% TEAK WOOD FACTORY FINISH DOORS @ DEPOT RATES



10 YEARS WARRANTY
www.ssbuildmart.com

9731591267
9901291267

HOTEL FOR RENT / LEASE

(50 Seats Capacity) Located in good location in Mysore.

Mob: 9535601201

For Rent

1300 sq ft commercial shop available for rent at NE corner of Kittur Rani Channamma Circle, Hebbal second stage, suitable for office, godown, bekary and other commercial usage

7022150777
9380588302

ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಮತ್ತು ಹೂಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ ವಿದ್ಯಾರ್ಹತೆ : 7 ರಿಂದ PUC ಮತ್ತು ITI (Fitter)

9480404036

ಆದ್ಯ ಸೌಹಾರ್ದ ಸಹಕಾರಿ ನಿಯಮಿತ

ಸರ್ವ ಸದಸ್ಯರ ಗಮನಕ್ಕೆ

ಆದ್ಯ ಸೌಹಾರ್ದ ಸಹಕಾರಿ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿ.09–09–2023ನೇ ಶನಿವಾರ ಬೆಳಿಗ್ಗೆ 10 ಗಂಟೆಗೆ, ಶ್ರೀ ಗಣಪತಿ ದೇವಸ್ಥಾನದ ಆವರಣ, ರಾಮಕೃಷ್ಣನಗರ "ಐ" ಬ್ಲಾಕ್ ಮೈಸೂರು ಇಲ್ಲಿ ಸಂಘದ ಅಧ್ಯಕ್ಷರಾದ ಡಾ. ಜೆ.ಜಿ. ವಿಶ್ವನಾಥಯ್ಯ ಅವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಿದ್ದು ಈ ತಿಳುವಳಿಕೆ ಮೇರೆಗೆ ಮಹಾಸಭೆಗೆ ಹಾಜರಾಗಬೇಕೆಂದು ಕೋರುತ್ತೇವೆ.

ಸಹಿ/– ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

BUSINESS OPPORTUNITY

FULL TIME/PART TIME WORK WHO ARE INTERESTED TO EARN EXTRA INCOME THROUGH NETWORK MARKETING & SECURE THEIR FUTURE. CONTACT BELOW NO. FOR APPOINTMENT

7406910389

ಬೇಕಾಗಿದ್ದಾರೆ

ಮಗು ನೋಡಿಕೊಳ್ಳಲು 35 ವರ್ಷದ ಒಳಗಿನ ಮಹಿಳೆಯರು ಬೇಕಾಗಿದ್ದಾರೆ.
ಬೆಳಿಗ್ಗೆ 9.30 ರಿಂದ ಸಂಜೆ 6ರ ತನಕ ಇರಬೇಕು. ಗೋಕುಲಂ, ಒಂಟಿಕೊಪ್ಪಲ್, ಪಡುವಾರಹಳ್ಳಿ ಇಲ್ಲಿ ಇರುವವರಿಗೆ ಮೊದಲ ಆದ್ಯತೆ

9916623340

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕೆಆರ್‌ಎಸ್, ಕಬಿನಿ ಜಲಾಶಯದಲ್ಲಿ ಭಾರಿ ಪ್ರಮಾಣದ ಹೂಳು ಶೇಖರಣೆ

ಜಲಾಶಯಗಳಲ್ಲಿ ನೀರಿನ ಶೇಖರಣಾ ಸಾಮರ್ಥ್ಯ ಭಾರಿ ಕುಸಿತ

● ಕೆಆರ್‌ಎಸ್‌ನ 131 ಚದರ ಕಿಲೋಮೀಟರ್ ವ್ಯಾಪ್ತಿ ಹೂಳು ● ಇಲ್ಲಿತನಕ ಹೂಳೆತ್ತುವ ಗೋಜಿಗೆ ಯಾವ ಸರ್ಕಾರವೂ ಹೋಗಿಲ್ಲ ● ಕೆಆರ್‌ಎಸ್, ಕಬಿನಿ, ಹಾರಂಗಿ, ಹೇಮಾವತಿ ಜಲಾಶಯಗಳ ಹೂಳೆತ್ತಿದ್ದರೆ 8 ಟಿಎಂಸಿ ಅಧಿಕ ನೀರಿನ ಶೇಖರಣೆ


ಕೆಆರ್‌ಎಸ್


ಕಬಿನಿ


ಹಾರಂಗಿ


ಹೇಮಾವತಿ

ಬಾಪುಲಿಂಗರಾಜ್ ಅರಸ್

ಮೈಸೂರು, ಸೆ.6– ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಹಾಗೂ ಮೈಸೂರು ಜಿಲ್ಲೆಯ ಕಬಿನಿ ಜಲಾಶಯದಲ್ಲಿ ಭಾರಿ ಪ್ರಮಾಣದಲ್ಲಿ ಹೂಳು ತುಂಬಿದೆ. ಜಲಾಶಯ ನಿರ್ಮಾಣ ಮಾಡಿದ ದಿನದಿಂದ ಇಲ್ಲಿ ತನಕ ಹೂಳು ತೆಗೆದಿಲ್ಲ. ಇದರಿಂದ ಜಲಾಶಯದಲ್ಲಿ ನೀರಿನ ಸಂಗ್ರಹ ಸಾಮರ್ಥ್ಯ ಕಡಿಮೆಯಾಗುತ್ತಿದೆ. ನೀರಾವರಿ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡುವ ಸರ್ಕಾರ, ಆದರೆ ಸಮರ್ಪಕ ನೀರು ಸಂಗ್ರಹಕ್ಕೆ ಅನಿವಾರ್ಯವಾಗಿರುವ ಹೂಳೆತ್ತುವ ಗೋಜಿಗೆ ಹೋಗುತ್ತಿಲ್ಲ.

> ಕೆಆರ್‌ಎಸ್‌ನಲ್ಲಿ ಹೂಳು ತುಂಬಿರುವ ಬಗ್ಗೆ ಈಗಾಗಲೇ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದಿಂದ ಸರ್ವೆ ಮಾಡಿಸಲಾಗಿದೆ. ಎಷ್ಟು ಹೂಳು ತುಂಬಿದೆ ಎಂಬ ಬಗ್ಗೆ ಸರ್ವೆ ರಿಪೋರ್ಟ್ ಸಹಿತ ನೀರಾವರಿ ಇಲಾಖೆಯಿಂದ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಲಾಗಿದೆ. ಆದರೆ ಹೂಳೆತ್ತುವ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶ ಬಂದಿಲ್ಲ. ಹಾರಂಗಿ ಜಲಾಶಯದಲ್ಲಿ ಮಾತ್ರ ಹೂಳಿನ ಪ್ರಮಾಣ ಹೆಚ್ಚಾಗಿರುವ ಕಾರಣ ಅಲ್ಲಿ ಹೂಳೆತ್ತಲು ತೀರ್ಮಾನಿಸಲಾಗಿದೆ.
> **– ರಘುನಾಥ್, ಜಲಸಂಪನ್ಮೂಲ ಇಲಾಖೆಯ ಡೆಪ್ಯುಟಿ ಚೀಫ್ ಇಂಜಿನಿಯರ್**

> ಒಂದು ಸಣ್ಣ ಕೆರೆಯಲ್ಲೇ ಹೂಳು ತುಂಬಿರುತ್ತದೆ. ಇನ್ನು ನದಿಯಲ್ಲಿ ಭಾರಿ ಪ್ರಮಾಣದಲ್ಲಿ ಹೂಳು ತುಂಬುವುದಿಲ್ಲವೆ. ಹೂಳು ತುಂಬಿರುವುದರಿಂದ ಜಲಾಶಯದಲ್ಲಿ ನೀರಿನ ಸಾಮರ್ಥ್ಯ ಕಡಿಮೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವು ಕೂಡ ಹೂಳೆತ್ತುವಂತೆ ಬಹಳಷ್ಟು ವರ್ಷಗಳಿಂದ ಒತ್ತಾಯ ಮಾಡುತ್ತಿದ್ದೇವೆ. ಆದರೆ ಸರ್ಕಾರ ಗಮನ ಹರಿಸುತ್ತಿಲ್ಲ.
> **– ಬಡಗಲಪುರ ನಾಗೇಂದ್ರ, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ**

ನಾಲ್ವಡಿ ಸಾಹಸದ ಕಾರ್ಯ: ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪರಿಶ್ರಮದ ಫಲವಾಗಿ ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣವಾಯಿತು. ಕನ್ನಂಬಾಡಿ ಬಳಿ 1906ರಲ್ಲಿ ಕೃಷ್ಣರಾಜ ಅಣೆಕಟ್ಟು ನಿರ್ಮಾಣ ಕಾಮಗಾರಿ ಆರಂಭಿಸಲಾಯಿತು. ಆರಂಭದಲ್ಲಿ ಬ್ರಿಟಿಷ್ ಸರ್ಕಾರದ ಕ್ಯಾಡೇವಿಸ್ ಚೀಫ್ ಇಂಜಿನಿಯರ್ ಆಗಿದ್ದರು. ಆದರೆ ಕ್ಯಾಡೇವಿಸ್ ಅಕಾಲಿಕ ಮರಣಕ್ಕೀಡಾದರು. ಇದರಿಂದ ಕೃಷ್ಣರಾಜ ಸಾಗರ ಅಣೆಕಟ್ಟು ಕಾಮಗಾರಿಯ ಮುತುವರ್ಜಿಯಿಂದ ಮುನ್ನಡೆಸುವ ಚೀಫ್ ಇಂಜಿನಿಯರ್ ಯಾರೂ ಇರಲಿಲ್ಲ.

ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣಕ್ಕೆ ಸಮರ್ಥ ಚೀಫ್ ಇಂಜಿನಿಯರ್ ಹುಡುಕಾಟದಲ್ಲಿದ್ದಾಗ, ಸರ್ ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಮಾಹಿತಿ ದೊರೆಯಿತು. ಆಗ ಕನ್ನಡದವರೇ ಆದ ಡಾ. ವಿಶ್ವೇಶ್ವರಯ್ಯ ಅವರನ್ನು ಮುಂಬೈನಿಂದ ಮೈಸೂರಿಗೆ ಕರೆಸಿಕೊಂಡ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣ ಕಾರ್ಯದ ಪೂರ್ಣ ಜವಾಬ್ದಾರಿಯನ್ನು ಅವರಿಗೆ ವಹಿಸಿದರು. 1909ರಿಂದ ಡಾ.ವಿಶ್ವೇಶ್ವರಯ್ಯ, ಅಧಿಕೃತವಾಗಿ ಕಾರ್ಯಾರಂಭ ಮಾಡಿದರು. ಸ್ವಯಂ ಚಾಲಿತ ಗೇಟ್‌ಗಳನ್ನು ಅಳವಡಿಸಿ ಅತ್ಯಾಧುನಿಕ ತಂತ್ರಜ್ಞಾನದಿಂದ ಅಣೆಕಟ್ಟು ನಿರ್ಮಾಣ ಭರದಿಂದ ಸಾಗಿತು. ಆದರೆ ಅಣೆಕಟ್ಟು ನಿರ್ಮಾಣ ಪೂರ್ಣಗೊಳಿಸಲು ಹಣಕಾಸಿನ ತೊಂದರೆ ಎದುರಾಯಿತು. ಆ ವೇಳೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅರಮನೆಯಲ್ಲಿದ್ದ ಚಿನ್ನಾಭರಣ ಮಾರಾಟ ಮಾಡಿ ಅಣೆಕಟ್ಟು ನಿರ್ಮಾಣಕ್ಕೆ ನೆರವು ನೀಡಿದರು.

ಕಾನೂನು ತೊಡಕು: ಇನ್ನು ಯಾವುದೇ ತೊಡಕು ಇಲ್ಲ ಎನ್ನುವಾಗಲೇ ಅಂದಿನ ಮದ್ರಾಸ್ ಸರ್ಕಾರ, ಕೆಆರ್‌ಎಸ್ ಜಲಾಶಯ ನಿರ್ಮಾಣಕ್ಕೆ ಕ್ಯಾತೆ ತೆಗೆಯಿತು. ತರುವಾಯ 1924ರಲ್ಲಿ ಕಾವೇರಿ ನೀರು ಹಂಚಿಕೆ ಒಪ್ಪಂದ ಮಾಡಿಕೊಂಡು ಅಣೆಕಟ್ಟು ನಿರ್ಮಾಣ ಕಾರ್ಯ ಪುನಾರಂಭಿಸಲಾಯಿತು. ಎಲ್ಲಾ ರೀತಿಯ ತೊಂದರೆಗಳನ್ನು ಸಮರ್ಥವಾಗಿ ಎದುರಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಡಾ.ವಿಶ್ವೇಶ್ವರಯ್ಯ ಅವರು 1932ರಲ್ಲಿ ಕೃಷ್ಣರಾಜ ಸಾಗರ ಜಲಾಶಯದ ಅಣೆಕಟ್ಟು ಕಾಮಗಾರಿ ಪೂರ್ಣಗೊಳಿಸಲಾಯಿತು.

124.80 ಅಡಿ ಎತ್ತರದ ಕೆಆರ್‌ಎಸ್ ಜಲಾಶಯದಲ್ಲಿ 25 ಮೈಲಿಗಳಷ್ಟು ದೂರದ ತನಕ ನೀರು ನಿಲ್ಲುತ್ತದೆ. 8,800 ಅಡಿ ಉದ್ದದ ಅಣೆಕಟ್ಟು ವ್ಯಾಪ್ತಿಯಲ್ಲಿ ನೀರು ಆವರಿಸಿರುತ್ತದೆ. 49.45 ಟಿಎಂಸಿ ಸಾಮರ್ಥ್ಯದ ಕೆಆರ್‌ಎಸ್ ಜಲಾಶಯದಿಂದ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪಾಂಡಿಚೇರಿ ರಾಜ್ಯಗಳಿಗೆ ನೀರು ದೊರೆಯುತ್ತದೆ.

ಕೃಷ್ಣರಾಜಸಾಗರ ಜಲಾಶಯದ 131 ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಈಗ ಹೂಳು ತುಂಬಿದೆ. ಜಲಾಶಯ ನಿರ್ಮಾಣ ಮಾಡಿದ ದಿನದಿಂದ ಇಲ್ಲಿ ತನಕ ಹೂಳೆತ್ತಿಲ್ಲ. ವರ್ಷಗಳು ಉರುಳಿದಂತೆ ಜಲಾಶಯದಲ್ಲಿ ಹೂಳಿನ ಪ್ರಮಾಣ ಹೆಚ್ಚಾಗುತ್ತಿದೆ. ಕೊಡಗಿನಿಂದ ಹರಿದು ಬರುವ ಕಾವೇರಿ, ಬೆಟ್ಟಗುಡ್ಡಗಳಿಂದ ಮಣ್ಣು, ಕಲ್ಲು ಸೇರಿದಂತೆ ಇತರೆ ವಸ್ತುಗಳನ್ನು ಹೊತ್ತು ತರುತ್ತಾಳೆ. ಇದೆಲ್ಲಾ ತುಂಬಿರುವ ಕಾರಣ ಕೆಆರ್‌ಎಸ್ ಜಲಾಶಯದಲ್ಲಿ ಹೂಳಿನ ಪ್ರಮಾಣ ಹೆಚ್ಚಾಗಿದೆ.

ಕೆಆರ್‌ಎಸ್‌ನಲ್ಲಿರುವ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದವರು ಆಧುನಿಕ ತಂತ್ರಜ್ಞಾನ ಬಳಸಿ ಕೃಷ್ಣರಾಜಸಾಗರ ಜಲಾಶಯದಲ್ಲಿರುವ ಹೂಳಿನ ಬಗ್ಗೆ ಸರ್ವೆ ಮಾಡಿದ್ದಾರೆ. ಇಂಟಿಗ್ರೇಟೆಡ್ ಬೆಥಿಮೆಟ್ರಿಕ್ ಸಿಸ್ಟಂ(ಐಬಿಎಸ್) ಉಪಕರಣದ ಮೂಲಕ ಹೂಳಿನ ಪ್ರಮಾಣವನ್ನು ಅಳೆದಿದ್ದಾರೆ.

ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದವರು ನಡೆಸಿರುವ ಸರ್ವೆ ಪ್ರಕಾರ ಕೃಷ್ಣರಾಜ ಸಾಗರ ಜಲಾಶಯದಲ್ಲಿ 2.34 ಟಿಎಂಸಿಯಷ್ಟು ನೀರಿನ ಸಾಮರ್ಥ್ಯವಿರುವಷ್ಟು ಹೂಳು ತುಂಬಿದೆ. ಹೂಳಿನ ಪ್ರಮಾಣ ಹೆಚ್ಚಾಗುತ್ತಿದ್ದರೂ ಅದನ್ನು ತೆಗೆಸಲು ಈ ತನಕ ಸರ್ಕಾರ ಗಮನ ಹರಿಸಿಲ್ಲ.

ಕೆಆರ್‌ಎಸ್ ಜಲಾಶಯ ಮಾತ್ರ ತುಂಬಿರುವಂತೆ ಕಂಡು ಬರುತ್ತದೆ. ಆದರೆ ಜಲಾಶಯದಲ್ಲಿರುವ ಹೂಳಿನಿಂದ ಅಲ್ಲಿರುವ ನೀರಿನ ಸಾಮರ್ಥ್ಯ ಕಡಿಮೆ ಇದೆ ಎಂಬ ವಾಸ್ತವ ಸ್ಥಿತಿ ತಮಿಳುನಾಡಿಗೆ ತಿಳಿದಿಲ್ಲ.

ಕಬಿನಿಯಲ್ಲೂ ಇದೇ ಪರಿಸ್ಥಿತಿ: ಮೈಸೂರಿನ ಹೆಚ್.ಡಿ. ಕೋಟೆಯ ಬೀಚನಹಳ್ಳಿ ಬಳಿಯ ಕಬಿನಿ ಜಲಾಶಯದಲ್ಲೂ ಕೂಡ ಹೂಳಿನ ಪ್ರಮಾಣ ಹೆಚ್ಚಾಗಿದೆ. 1974ರಲ್ಲಿ ನಿರ್ಮಾಣ ಮಾಡಿರುವ ಕಬಿನಿ ಜಲಾಶಯದಲ್ಲಿ ಕೂಡ ಈ ತನಕ ಹೂಳು ತೆಗೆದಿಲ್ಲ. ಈ ಜಲಾಶಯದಲ್ಲಿ ಸುಮಾರು 1.35 ಟಿಎಂಸಿ ನೀರಿನ ಸಾಮರ್ಥ್ಯದಷ್ಟು ಹೂಳು ತುಂಬಿದೆ. ನಾಗರಹೊಳೆ ಹಾಗೂ ಬಂಡಿಪುರ ಅಭಯಾರಣ್ಯ ಪಕ್ಕದಲ್ಲೇ ಇರುವ ಕಾರಣ ಭಾರಿ ಮಣ್ಣು, ಕಲ್ಲು, ಹಾಗೂ ಮರಗಳು ನೀರಿನ ಜೊತೆ ಹರಿದು ಬಂದು ಜಲಾಶಯ ಸೇರಿದೆ.

ಹಾರಂಗಿ, ಹೇಮಾವತಿಯಲ್ಲೂ ಹೂಳು: ಕಾವೇರಿ ಜಲಾನಯನ ಪ್ರದೇಶದ ಹಾರಂಗಿ ಹಾಗೂ ಹೇಮಾವತಿ ಜಲಾಶಯದಲ್ಲಿ ಕೂಡ ಹೂಳಿನ ಪ್ರಮಾಣ ಹೆಚ್ಚಾಗಿದೆ. ಈಗ ಹಾರಂಗಿ ಜಲಾಶಯದ ಹೂಳೆತ್ತಲು ಸರ್ಕಾರ ತೀರ್ಮಾನಿಸಿದೆ. ಕೆಆರ್‌ಎಸ್, ಕಬಿನಿ, ಹಾರಂಗಿ ಹಾಗೂ ಹೇಮಾವತಿ ಜಲಾಶಯಗಳಲ್ಲಿ ಹೂಳೆತ್ತಿದರೆ ಸುಮಾರು 8 ಟಿಎಂಸಿ ನೀರಿನ ಸಾಮರ್ಥ್ಯ ಹೆಚ್ಚಾಗುತ್ತದೆ. ದಕ್ಷಿಣ ಕರ್ನಾಟಕದ ಜಲಾಶಯಗಳಲ್ಲಿ ಹೂಳಿನ ಪ್ರಮಾಣ ಕಡಿಮೆ ಇದೆ. ಆದರೆ ತುಂಗಭದ್ರ ಜಲಾಶಯದಲ್ಲಿ 30 ಟಿಎಂಸಿ ನೀರಿನ ಸಾಮರ್ಥ್ಯದ ಹೂಳು ಇದ್ದರೆ, ನಾರಾಯಣಪುರ ಜಲಾಶಯದಲ್ಲಿ 37 ಟಿಎಂಸಿ ನೀರಿನ ಸಾಮರ್ಥ್ಯದ ಹೂಳು ಇದೆ. ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಇರುವ ಸಮಯದಲ್ಲಿ ಹೂಳೆತ್ತಬಹುದು. ಆದರೆ ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಬಂದ ಯಾವ ಸರ್ಕಾರಕ್ಕೂ ಕರ್ನಾಟಕದ ಜಲಾಶಯಗಳಲ್ಲಿನ ಹೂಳೆತ್ತಿ ನೀರಿನ ಸಾಮರ್ಥ್ಯ ಹೆಚ್ಚು ಮಾಡುವ ಬದ್ಧತೆ ಇಲ್ಲ. ನೀರಾವರಿ ಯೋಜನೆಗಳಿಗೆ ಸಾವಿರಾರು ಕೋಟಿ ಖರ್ಚು ಮಾಡುವ ಸರ್ಕಾರ ಕೆಲವೇ ಕೋಟಿಯಲ್ಲಿ ಹೂಳೆತ್ತಲು ಮೀನಾ–ಮೇಷ ಎಣಿಸುತ್ತಿದೆ.

ಮೈಸೂರಲ್ಲಿ ತಂಪನ್ನೆರೆದ ಮಳೆರಾಯ



ಮೈಸೂರು, ಸೆ. 6(ಆರ್‌ಕೆ) –ಹಲವು ದಿನಗಳಿಂದ ಬಿಸಿಲಿನ ಬೇಗೆ ಅನುಭವಿಸಿದ ಜನರಿಗೆ ಮೈಸೂರಿನಲ್ಲಿ ಇಂದು ಸುರಿದ ಮಳೆಯು ತಂಪೆರೆದಿದೆ.

ಬೆಳಗ್ಗೆಯಿಂದಲೇ ಮೋಡ ಕವಿದ ವಾತಾವರಣವಿದ್ದ ಮೈಸೂರಲ್ಲಿ ಮಧ್ಯಾಹ್ನ 12.15ರಿಂದ ಸಂಜೆವರೆಗೂ ನಾಲ್ಕೈದು ಬಾರಿ ಅಲ್ಲಲ್ಲಿ ಮಳೆ ಸುರಿಯಿತು. ಕೆ.ಆರ್. ಸರ್ಕಲ್, ದೇವರಾಜ ಮೊಹಲ್ಲಾ, ಸಿದ್ಧಾರ್ಥ ಬಡಾವಣೆ, ಸರಸ್ವತಿಪುರಂ, ಬನ್ನಿ ಮಂಟಪ ಸೇರಿದಂತೆ ನಗರದ ಹಲವೆಡೆ ಸುರಿದ ಧಾರಾಕಾರ ಮಳೆಯಿಂದಾಗಿ ವ್ಯಾಪಾರಸ್ಥರು, ಸಾರ್ವಜನಿಕರಿಗೆ ತೊಂದರೆಯಾಯಿತಲ್ಲದೆ, ದ್ವಿಚಕ್ರ ವಾಹನ ಸವಾರರು ಪರದಾಡುವಂತಾಯಿತು. ರಸ್ತೆಬದಿ, ತಗ್ಗು ಪ್ರದೇಶಗಳಲ್ಲಿ ನೀರು ನಿಂತು ಸಂಚಾರಕ್ಕೆ ಕೆಲ ಸಮಯ ಅಡ್ಡಿಯುಂಟಾಗಿದ್ದು, ಪಾದಚಾರಿಗಳು ಪರದಾಡಿದರು. ದೇವರಾಜ ಮಾರುಕಟ್ಟೆ, ಎಪಿಎಂಸಿ, ಹಳೇ ಆರ್‌ಎಂಸಿ, ಮಂಡಿ, ಕೆ.ಆರ್.ಮಾರುಕಟ್ಟೆಗಳಲ್ಲಿ ಮಳೆಯಿಂದ ಗ್ರಾಹಕರು, ವ್ಯಾಪಾರಸ್ಥರಿಗೆ ತೊಂದರೆಯಾಯಿತಾದರೂ, ವಾತಾವರಣ ತಣ್ಣಗಾಯಿತು. ಮಧ್ಯಾಹ್ನದಿಂದ ಸಂಜೆವರೆಗೂ ಬಿಟ್ಟು ಬಿಟ್ಟು ಮಳೆ ಬಂದಿದ್ದರಿಂದ ಸಾರ್ವಜನಿಕರು ಆಟೋಗಳನ್ನು ಅವಲಂಬಿಸುವಂತಾಯಿತು. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕಚೇರಿ ಸಿಬ್ಬಂದಿ ಬಸ್ ನಿಲ್ದಾಣ, ರೈಲ್ವೇ ಸ್ಟೇಷನ್‌ಗಳಿಗೆ ತೆರಳಲು ಮಳೆ ಅಡ್ಡಿಯಾಗಿ ಕಟ್ಟಡಗಳು, ಮರದಡಿ ಆಶ್ರಯ ಪಡೆಯುತ್ತಿದ್ದುದು ಸಾಮಾನ್ಯವಾಗಿತ್ತು. ಫುಟ್‌ಪಾತ್ ಮೇಲೆ ಹೂ, ಹಣ್ಣು, ತರಕಾರಿ, ಆಟಿಕೆ ವಸ್ತುಗಳನ್ನು ಮಾರುವವರಿಗೆ ಮಳೆ ಅಡ್ಡಿಯುಂಟು ಮಾಡಿತು. ಹಾಗೆಯೇ ಫುಟ್‌ಪಾತ್ ಊಟ–ತಿಂಡಿ ಸೇವೆಗೂ ತೊಂದರೆಯಾಯಿತು.

ಕರುಣಾಮಯಿ ವಿಶೇಷಚೇತನ ಮಕ್ಕಳಿಂದ ವಿಶಿಷ್ಟ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ



ಮೈಸೂರು, ಸೆ.6(ಎಸ್‌ಪಿಎನ್)–ಕರುಣಾಮಯಿ ಸಂಸ್ಥೆಯ ವಿಶೇಷಚೇತನ ಮಕ್ಕಳು ಶ್ರೀಕೃಷ್ಣನ ವೇಷಭೂಷಣಗಳನ್ನು ಧರಿಸಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಬುಧವಾರ ವಿಶೇಷವಾಗಿ ಆಚರಿಸಿದರು.

ಮೈಸೂರು ನಿವೇದಿತಾನಗರದ ಸುಬ್ಬರಾವ್ ಉದ್ಯಾನವನದಲ್ಲಿ ಕರುಣಾಮಯಿ ಟ್ರಸ್ಟ್ ವತಿಯಿಂದ ವಿಶೇಷಚೇತನ ಮಕ್ಕಳಿಗಾಗಿ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಶ್ರೀ ಕೃಷ್ಣ ಮತ್ತು ರಾಧೆಯರ ವೇಷಭೂಷಣ ಸ್ಪರ್ಧೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಜಿಲ್ಲಾ ಅಂಗವಿಕಲರ ಸಂಘದ ಅಧ್ಯಕ್ಷ ಎನ್.ಶ್ರೀಧರ್ ದೀಕ್ಷಿತ್ ಚಾಲನೆ ನೀಡಿ, ಮಾತನಾಡಿದರು. ವಿಶೇಷಚೇತನ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕರುಣಾಮಯಿ ಟ್ರಸ್ಟ್ ಪದಾಧಿಕಾರಿಗಳು ಸಾಕಷ್ಟು ಶ್ರಮಿಸುತ್ತಿದ್ದಾರೆ. ಶ್ರೀ ಕೃಷ್ಣಜನ್ಮಾಷ್ಟಮಿ ಪ್ರಯುಕ್ತ ವಿಶೇಷಚೇತನ ಮಕ್ಕಳಿಗೆ ಬಗೆಬಗೆಯ ವೇಷಭೂಷಣಗಳನ್ನು ತೊಡಿಸಿ, ವಿವಿಧ ಸಿನಿಮಾ ಗೀತೆಗಳಿಗೆ ನೃತ್ಯ ಮಾಡಲು ಮಕ್ಕಳನ್ನು ಸಜ್ಜುಗೊಳಿಸುವುದು ಸಾಮಾನ್ಯ ಸಂಗತಿಯಲ್ಲ ಎಂದರು.

ಈ ಮಕ್ಕಳನ್ನು ಮುಖ್ಯವಾಹಿನಿ ತರಲು ಶ್ರಮಿಸುತ್ತಿರುವ ಶಿಕ್ಷಕರು ಮತ್ತು ಪೋಷಕರ ಶ್ರಮ ನಿಜಕ್ಕೂ ಶ್ಲಾಘನೀಯ. ಮಾಮೂಲಿ ವಿದ್ಯಾರ್ಥಿಗಳಂತೆಯೇ ತರಗತಿಯಲ್ಲಿ ವಿಶೇಷಚೇತನ ಮಕ್ಕಳನ್ನು ಸಜ್ಜುಗೊಳಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿ. ಅದರಲ್ಲೂ ಇಂತಹ ಮಕ್ಕಳ ಜೀವನ ರೂಪಿಸಲು ಸಹಕಾರಿ ಎಂದರು. ಈ ವೇಳೆ ಕರುಣಾಮಯಿ ಸಂಸ್ಥೆಯ ಅಧ್ಯಕ್ಷ ಜಿ.ಸಿ.ಚರಣ್ ಕುಮಾರ್, ಕಾರ್ಯದರ್ಶಿ ಕೆ.ವಿ.ಸೌಮ್ಯ, ಸಿಬ್ಬಂದಿ ವರ್ಗ, ಪೋಷಕರು ಭಾಗವಹಿಸಿದ್ದರು.

ಮೈಸೂರಲ್ಲಿ ಹೆಚ್‌ಐವಿ ಏಡ್ಸ್ ಜಾಗೃತಿಗಾಗಿ ಮ್ಯಾರಥಾನ್



ಮೈಸೂರು, ಸೆ. 6(ಆರ್‌ಕೆ)–ಹೆಚ್‌ಐವಿ/ಏಡ್ಸ್ ಮಾರಕ ರೋಗ ನಿಯಂತ್ರಣಕ್ಕಾಗಿ ಬುಧವಾರ ಮೈಸೂರಿನಲ್ಲಿ ಜನ ಜಾಗೃತಿ ಮ್ಯಾರಥಾನ್ ನಡೆಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕವು ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಟೆರೆಷಿಯನ್ ಕಾಲೇಜು, ಲಯನ್ಸ್ ಬ್ಲಡ್ ಸೆಂಟರ್ ಹಾಗೂ ಜೀವಧಾರ ಸಹಯೋಗದೊಂದಿಗೆ ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಆಯೋಜಿಸಿದ್ದ ಮ್ಯಾರಥಾನ್‌ಗೆ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ. ದಿನೇಶ್ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಕೆ.ಆರ್. ಸರ್ಕಲ್, ಡಿ. ದೇವರಾಜ ಅರಸು ರಸ್ತೆ ಮೂಲಕ ಸಾಗಿದ ಮ್ಯಾರಥಾನ್ ಜಿಲ್ಲಾಧಿಕಾರಿ ಕಚೇರಿ ಬಳಿಯ ಓವೆಲ್ ಮೈದಾನದಲ್ಲಿ ಅಂತ್ಯಗೊಂಡಿತು. ಮೈಸೂರು ಮಹಾನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ, ಜಿಲ್ಲಾ ಏಯ್ಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮಾಧಿಕಾರಿ ಡಾ. ಶಿರಾಜ್ ಅಹಮದ್, ಲಯನ್ಸ್ ಬ್ಲಡ್ ಸೆಂಟರ್ ಮ್ಯಾನೇಜಿಂಗ್ ಟ್ರಸ್ಟಿ ಗಿರೀಶ್, ಟೆರೆಷಿಯನ್ ಕಾಲೇಜು ಎನ್‌ಎಸ್‌ಎಸ್ ಅಧಿಕಾರಿ ಬಿ. ರೇಖಾ, ಡಾ. ಹೈದರಾಲಿ, ನಾಮ ನಿರ್ದೇಶಿತ ಪಾಲಿಕೆ ಸದಸ್ಯ ಜಗದೀಶ್ ಹಾಗೂ ಇತರರು ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದರು.

2023–24ರಲ್ಲಿ ಯುವ ಜನೋತ್ಸವ ಮತ್ತು ಅಂತರರಾಷ್ಟ್ರೀಯ ಯುವ ದಿನಾಚರಣೆ ಪ್ರಯುಕ್ತ ಜಿಲ್ಲಾ ಮಟ್ಟದಲ್ಲಿ ಹೆಚ್‌ಐವಿ, ಏಯ್ಡ್ಸ್ ತಡೆ ಕಾಯ್ದೆ–2017, ರಾಷ್ಟ್ರೀಯ ಸಹಾಯವಾಣಿ 1097 ಹಾಗೂ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಬಗ್ಗೆ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದವರು ಘೋಷಣಾ ಫಲಕ ಪ್ರದರ್ಶಿಸಿದರು. ಲಯನ್ಸ್ ಸಂಸ್ಥೆ, ಟೆರೆಷಿಯನ್ ಕಾಲೇಜು, ಇನ್ನಿತರ ಸಂಘ–ಸಂಸ್ಥೆ ಪದಾಧಿಕಾರಿಗಳು, ಎನ್‌ಎಸ್‌ಎಸ್ ಸೇವಾ ಕಾರ್ಯಕರ್ತರು, ವಿದ್ಯಾರ್ಥಿಗಳು ಮ್ಯಾರಥಾನ್‌ನಲ್ಲಿ ಪಾಲ್ಗೊಂಡು ಮಾರಕ ರೋಗ ತಡೆಗೆ ಅನುಸರಿಸಬೇಕಾದ ಕ್ರಮದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಬಾಲಕನ ಜೀವ ಉಳಿಸಿದ 'ಸೇವ್ ಎ ಚೈಲ್ಡ್'ನ ಸಹಾಯಧನ

ರೋಟರಿ ಮೈಸೂರು ಪಶ್ಚಿಮದ ಈ ಉದಾತ್ತ ಯೋಜನೆ ಈವರೆಗೆ 700 ನವಜಾತ ಶಿಶುಗಳ ಜೀವ ಉಳಿಸಿದ ಶ್ರೇಯಸ್ಸು

ಮೈಸೂರು,ಸೆ.6(ಪಿಎಂ)–ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆಗೆ ಅಗತ್ಯವಿರುವ ಆರ್ಥಿಕ ನೆರವು ಒದಗಿಸುವ ಮೂಲಕ ರೋಟರಿ ಮೈಸೂರು ಪಶ್ಚಿಮದ 'ಸೇವ್ ಎ ಚೈಲ್ಡ್' ಕಾರ್ಯಕ್ರಮವು ಬಾಲಕನೊಬ್ಬನ ಜೀವ ಉಳಿಸಿದೆ. ವೃತ್ತಿಯಲ್ಲಿ ಹೂವಿನ ವ್ಯಾಪಾರಿಯಾದ ಎಂ.ಶ್ರೀಧರ್ ಅವರ ಏಕೈಕ ಪುತ್ರ ಜೀವನ್‌ನ ಜೀವ ಉಳಿಸುವಲ್ಲಿ ಈ ಕಾರ್ಯಕ್ರಮ ನೆರವಾಗಿದೆ.


ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ತನ್ನ ಪುತ್ರ ಜೀವನ್‌ಗೆ(ಬಲಚಿತ್ರ) ಕಿಡ್ನಿ ದಾನ ಮಾಡಿದ ಆತನ ತಂದೆ, ವೃತ್ತಿಯಲ್ಲಿ ಹೂವಿನ ವ್ಯಾಪಾರಿಯಾದ ಎಂ.ಶ್ರೀಧರ್ (ಎಡಚಿತ್ರ).

ಬಾಲಕ ಜೀವನ್‌ಗೆ ಶಸ್ತ್ರಚಿಕಿತ್ಸೆಗೆ ಆರ್ಥಿಕ ನೆರವು ಅಗತ್ಯವಿರುವುದನ್ನು ಉಲ್ಲೇಖಿಸಿ ಕಾಮಾಕ್ಷಿ ಆಸ್ಪತ್ರೆಯ ಡಾ.ಸಿ.ಉಮೇಶ್ ಕಾಮತ್ ಮತ್ತು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಡಾ.ಉಪೇಂದ್ರ ಶೆಣೈ ಅವರು ರೋಟರಿ ಮೈಸೂರು ಪಶ್ಚಿಮಕ್ಕೆ ಜೀವನ್ ಕುಟುಂಬದ ಪರವಾಗಿ ಮನವಿ ಸಲ್ಲಿಸಿದ್ದರು.

ರೋಟರಿ ಮೈಸೂರು ಪಶ್ಚಿಮದ 'ಸೇವ್ ಎ ಚೈಲ್ಡ್' ಕಾರ್ಯಕ್ರಮವನ್ನು ಕಳೆದ 13 ವರ್ಷಗಳ ಹಿಂದೆ ಅಂದಿನ ಅದರ ಅಧ್ಯಕ್ಷರಾಗಿದ್ದ ಸ್ಯಾಮ್ ಚೆರಿಯನ್ ಆರಂಭಿಸಿದ್ದರು. ಅಲ್ಲದೆ, ಅವರು ಈ ಯೋಜನೆಯ ಪ್ರಮುಖ ದಾನಿಯೂ ಆಗಿದ್ದಾರೆ. ಈವರೆಗೆ ಈ ಕಾರ್ಯಕ್ರಮವು ಹೃದಯ ಸಂಬಂಧಿ ಸಮಸ್ಯೆ ಸೇರಿದಂತೆ ವಿವಿಧ ಅನಾರೋಗ್ಯಗಳಿಗೆ ತುತ್ತಾಗಿದ್ದ ಸುಮಾರು 700 ನವಜಾತ ಶಿಶುಗಳ ಜೀವ ಉಳಿಸಲು ಈ ಸಹಾಯಧನದ ಕಾರ್ಯಕ್ರಮ ನೆರವಾಗಿದೆ. ಜೀವನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಾಯಧನದ ಮನವಿಯನ್ನು ಪರಿಗಣಿಸಿದ ಮೈಸೂರು ರೋಟರಿ ಪಶ್ಚಿಮ, ಕೂಡಲೇ 'ಸೇವ್ ಎ ಚೈಲ್ಡ್' ಕಾರ್ಯಕ್ರಮದಡಿ 4 ಲಕ್ಷ ರೂ.ಗೆ ಅನುಮೋದನೆ ನೀಡಿತು. ಇದರ ಜೊತೆಗೆ ರೋಟರಿ ಮೈಸೂರು ಪಶ್ಚಿಮದ ಮಾಜಿ ಅಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್ ಅವರು 50 ಸಾವಿರ ರೂ. ನೀಡಿದರೆ,



> ಸ್ಯಾಮ್ ಚೆರಿಯನ್, ಇವರು ರೋಟರಿ ಮೈಸೂರು ಪಶ್ಚಿಮದ ಅಧ್ಯಕ್ಷರಾಗಿದ್ದಾಗ 'ಸೇವ್ ಎ ಚೈಲ್ಡ್' ಸಹಾಯಧನದ ಕಾರ್ಯಕ್ರಮ ಸ್ಥಾಪಿಸಿದರು. 13 ವರ್ಷಗಳಿಂದ ಇದಕ್ಕೆ ದೊಡ್ಡ ಪ್ರಮಾಣದ ದೇಣಿಗೆಯನ್ನೂ ನೀಡುತ್ತಿದ್ದಾರೆ. ಈ ಕಾರ್ಯಕ್ರಮಕ್ಕೆ ಡಾ.ಎಂ. ಜಗನ್ನಾಥ ಶೆಣೈ ಅವರು ಮತ್ತೊಬ್ಬ ಪ್ರಮುಖ ದಾನಿಯಾಗಿದ್ದು, ಇವರು 15 ಲಕ್ಷ ರೂ. ನೀಡಿದ್ದಾರೆ.

ಇತರ ಸದಸ್ಯರು 82 ಸಾವಿರ ರೂ. ದೇಣಿಗೆ ನೀಡಿದರು. ಒಟ್ಟಾರೆ 5.32 ಲಕ್ಷ ರೂ. ಅನ್ನು ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಹಸ್ತಾಂತರಿಸಲಾಯಿತು.

ಇದರಿಂದ ಮೈಸೂರು ಮಣಿಪಾಲ್ ಆಸ್ಪತ್ರೆಯಲ್ಲಿ ಜೀವನ್‌ಗೆ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಜೀವನ್‌ಗೆ ಅವರ ತಂದೆ ಶ್ರೀಧರ್ ಅವರ ಒಂದು ಮೂತ್ರಪಿಂಡವನ್ನು ಕಸಿ ಮಾಡುವ ಮೂಲಕ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಆಸ್ಪತ್ರೆ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ಮಾಹಿತಿ ನೀಡಿದರು. ಮೂತ್ರಪಿಂಡ ತಜ್ಞವೈದ್ಯ ಡಾ.ಕಾವೇರಪ್ಪ ಹಾಗೂ ಶಸ್ತ್ರಚಿಕಿತ್ಸಾ ತಜ್ಞವೈದ್ಯರಾದ ಡಾ.ತಿಮ್ಮಯ್ಯ ಹಾಗೂ ಡಾ.ದಿನೇಶ್ ನೇತೃತ್ವದ ತಂಡವು ಈ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದೆ. ಈ ಸಹಾಯಕ್ಕಾಗಿ ಜೀವನ್ ಮತ್ತು ಅವರ ಪೋಷಕರು ರೋಟರಿ ಮೈಸೂರು ಪಶ್ಚಿಮದ 'ಸೇವ್ ಎ ಚೈಲ್ಡ್' ಕಾರ್ಯಕ್ರಮದ ಸಮಿತಿಗೆ ತಮ್ಮ ಕೃತಜ್ಞತೆ ಸಲ್ಲಿಸಿದ್ದಾರೆ. ಸಮಾಜದ ಆರ್ಥಿಕ ದುರ್ಬಲ ವರ್ಗಕ್ಕೆ ಸಮಯಕ್ಕೆ ಸರಿಯಾಗಿ ಸಹಾಯಹಸ್ತ ನೀಡುವಲ್ಲಿ ಸಕ್ರಿಯವಾಗಿರುವ ರೋಟರಿ ಮೈಸೂರು ಪಶ್ಚಿಮದ ಅಧ್ಯಕ್ಷರು ಮತ್ತು ಸದಸ್ಯರಿಗೆ ಮೈಸೂರಿನ ನಾಗರಿಕರು ಅಭಿನಂದನೆ ಸಲ್ಲಿಸಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ನಷ್ಟದಲ್ಲಿ ನರಸೀಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ

ಸರ್ವ ಸದಸ್ಯರ ಸಭೆಯಲ್ಲಿ ಸಂಘವನ್ನು ಪ್ರಥಮ ಸ್ಥಾನಕ್ಕೆ ಕೊಂಡೊಯ್ಯುವ ಭರವಸೆ



ತಿ.ನರಸೀಪುರ,ಸೆ.6– ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ತಾಲೂಕಿನಲ್ಲಿ ಪ್ರಥಮ ಸ್ಥಾನಕ್ಕೆ ಕೊಂಡೊಯ್ಯಲು ಸದಸ್ಯರ ಸಹಕಾರ ಅತ್ಯಗತ್ಯ ಎಂದು ತಿಳಿಸಿದ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಪ್ರಸ್ತುತ ಸಂಘವು ನಷ್ಟದಲ್ಲಿ ನಡೆಯುತ್ತಿದೆ ಎಂದರು.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 2022–23 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಹಕಾರ ಸಂಘಕ್ಕೆ ರೈತರೇ ಜೀವನಾಡಿಯಾಗಿದ್ದು ಸಂಘದಿಂದ ಪಡೆದ ಸಾಲವನ್ನು ಸದಸ್ಯರು ಸುಸ್ತಿದಾರರಾಗದೇ ಸಕಾಲಕ್ಕೆ ಪಾವತಿಸಿದಾಗ ಮಾತ್ರವೇ ಸಹಕಾರ ಸಂಘದ ಬೆಳವಣಿಗೆ ಸಾಧ್ಯ,ಹಾಗಾಗಿ ರೈತರು ಪಡೆದ ಸಾಲವನ್ನು ಕಾಲ ಕಾಲಕ್ಕೆ ಮರು ಪಾವತಿಸಿ ಸಂಘವು ನೀಡುವ ಇತರೆ ಸವಲತ್ತುಗಳನ್ನು ಬಳಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ಕರೆ ನೀಡಿದರು.

ಸಹಕಾರ ಸಂಘದಿಂದ ರೈತರು ಪಡೆದ 15 ಲಕ್ಷ ರೂ.ಗಳ ಸಾಲದ ಮೊತ್ತವನ್ನು ಮರುಪಾವತಿ ಮಾಡದೇ ಸುಸ್ತಿದಾರರಾದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸಂಘವು 1,58,571 ಲಕ್ಷ ರೂ.ಗಳ ನಿವ್ವಳ ನಷ್ಟ ಅನುಭವಿಸಿದೆ ಎಂದು ತಿಳಿಸಿದರು.

ಸಂಘವು ಪ್ರಸಕ್ತ ಸಾಲಿನ ಅಂತ್ಯಕ್ಕೆ ರೈತರಿಗೆ ಕೆಸಿಸಿ ಕಬ್ಬು ಬೆಳೆ ಸಾಲವಾಗಿ 566 ಸದಸ್ಯರಿಗೆ 5,57,74 ಕೋಟಿ ಸಾಲ ವಿತರಿಸಿದೆ. ಜಿಲ್ಲಾ ಬ್ಯಾಂಕಿಗೆ ನಮ್ಮ ಸಂಘವು 6,52,39, 750 ಕೋಟಿ ರು.ಗಳ ಸಾಲ ಪಾವತಿಸಬೇಕಿದ್ದು, ಸದಸ್ಯರಿಂದ ಸಂಘಕ್ಕೆ ವಿವಿಧ ಸಾಲಗಳ ಮೊತ್ತವಾಗಿ 6,60,60,881 ರೂ.ಗಳು ಬಾಕಿ ಬರಬೇಕಾಗಿದೆ ಎಂದು ಮಾಹಿತಿ ನೀಡಿದ ಅವರು ಸಹಕಾರ ಸಂಘದಲ್ಲಿ 3803 ಸದಸ್ಯರಿದ್ದು,ಅವರಿಂದ 77,83,390 ಲಕ್ಷ ರೂ.ಗಳ ಷೇರು ಬಂಡವಾಳ ಪಡೆಯಲಾಗಿದೆ ಎಂದು ತಿಳಿಸಿದರು.

ಈ ವೇಳೆ ಪಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಸಂಘದಲ್ಲಿ ರೈತರಿಗೆ ಎಕರೆಯೊಂದಕ್ಕೆ 75 ಸಾವಿರ ಸಾಲ ಮಾತ್ರ ನೀಡಲಾಗುತ್ತಿದ್ದು ಸಾಲದ ಮೊತ್ತವನ್ನು ಹೆಚ್ಚಿಸುವಂತೆ ಸಲಹೆ ನೀಡಿದರೆ, ಬಿಲಿಗೆರೆ ಹುಂಡಿ ಕುಮಾರ್ ಸಂಘದ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮಕ್ಕೆ 89,690 ರೂ.ಗಳನ್ನು ಖರ್ಚು ಮಾಡುವ ಅವಶ್ಯಕತೆ ಇತ್ತೇ ಎಂದು ಪ್ರಶ್ನಿಸಿದರು.ಇದಕ್ಕುತ್ತರಿಸಿದ ಅಧ್ಯಕ್ಷ ಮಲ್ಲಣ್ಣ ರೈತರಿಗೆ ಎಕರೆ ಜಮೀನಿಗೆ ಸಾಲದ ಮೊತ್ತವನ್ನು 90 ಸಾವಿರಕ್ಕೆ ಹೆಚ್ಚಿಸಲು ಮನವಿ ಮಾಡಿದ್ದೇವೆ ಎಂದರು. ಅಲ್ಲದೇ ಕಟ್ಟಡ ಉದ್ಘಾಟನೆ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚದ ಬಗ್ಗೆ ಮಾಹಿತಿ ನೀಡಿದರು.

ಈ ವೇಳೆ ನಿರ್ದೇಶಕರಾದ ಎಂ.ನಾಗರತ್ನ, ಎನ್.ಶೇಖರ್, ಟಿ.ಸಿ.ಫಣೀಶ್ ಕುಮಾರ್, ಮಹಾಲಿಂಗಪ್ಪ, ನಾಗಮ್ಮ, ಬಿ. ಚಂದ್ರಮ್ಮ, ದೊಡ್ಡ ಬಸವಯ್ಯ, ಸಾವಿತ್ರಮ್ಮ, ಮನ್ನೇಹುಂಡಿ ಪರಶಿವ, ಟಿ.ಜಿ.ಗುರುಪ್ರಸಾದ್, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಾಜಪ್ಪ. ಎನ್.ಎಂ.ರಮೇಶ್, ಪುರಸಭಾ ಸದಸ್ಯ ಕಿರಣ್, ಎಂ.ಶಿವಕುಮಾರ್, ದಿವ್ಯಶ್ರೀ,ಸಿ.ಮಹದೇವ,ಫ್ಯಾನ್ಸಿ ಮೋಹನ್, ಸಾಲೂರು ಸ್ವಾಮಿ ಮತ್ತಿತರರಿದ್ದರು.

ಅನುಮಾನಾಸ್ಪದವಾಗಿ ವ್ಯಕ್ತಿ ಸಾವು



ತಿ.ನರಸೀಪುರ, ಸೆ.6– ವ್ಯಕ್ತಿಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಕುಳ್ಳನಕೊಪ್ಪಲು ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಪ್ರೀತಮ್(45) ಅನುಮಾನಾಸ್ಪದವಾಗಿ ಸಾವನ್ನಪ್ಪಿದ ವ್ಯಕ್ತಿ. ಘಟನೆ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪ್ರೀತಮ್ ಮಂಗಳವಾರ ಸಂಜೆ 5.30ರಲ್ಲಿ ಬೈಕ್‌ನಲ್ಲಿ ಮನೆಯಿಂದ ಹೊರ ಹೋದವರು ರಾತ್ರಿಯಾದರೂ ಮನೆಗೆ ಬಾರದ ಹಿನ್ನೆಲೆಯಲ್ಲಿ ಹುಡುಕಾಟ ನಡೆಸಲಾಗಿದೆ. ಆನಂತರ ಗ್ರಾಮಸ್ಥರೊಬ್ಬರು ಪ್ರೀತಮ್ ಶವ ಗ್ರಾಮದ ಅರೆ ಮಲ್ಲೇಶ್ವರ ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ ಬಿದ್ದಿರುವುದಾಗಿ ತಿಳಿಸಿದ್ದಾರೆ. ಮೋಟಾರ್ ಸೈಕಲ್ ಸಮೇತ ಪ್ರೀತಮ್ ಮೃತಪಟ್ಟಿದ್ದು ಸಾವಿನ ಬಗ್ಗೆ ಸಂಶಯ ವ್ಯಕ್ತಪಡಿಸಿರುವ ಪ್ರೀತಮ್ ಅವರ ಬಾವ ಟಿ.ಎಚ್. ಶಿವಕುಮಾರ್ ಪಟ್ಟಣ ಪೋಲೀಸರಿಗೆ ದೂರು ನೀಡಿದ್ದಾರೆ.



ಹುಲಿ ದಾಳಿಗೆ ಬಲಿಯಾದ ತಾಲೂಕಿನ ಕಲ್ಲಟ್ಟಿ ಗ್ರಾಮದ ನಿವಾಸಿಗಳಾದ ರೈತ ಕೃಷ್ಣ ನಾಯಕ್ ಹಾಗೂ ಮಾದೇವಿಬಾಯಿ ಅವರ ಪುತ್ರ ಚರಣ್ ನಾಯಕ್ ಅವರ ನಿವಾಸಕ್ಕೆ ಬಿಜೆಪಿ ಮುಖಂಡ ಕೆ.ಎಂ. ಕೃಷ್ಣನಾಯಕ ಭೇಟಿ ನೀಡಿ, ಸಾಂತ್ವನ ಹೇಳಿ ವೈಯುಕ್ತಿಕವಾಗಿ 10 ಸಾವಿರ ರೂ.ಗಳ ಧನ ಸಹಾಯ ಮಾಡಿದರು.

ಸರಗೂರಲ್ಲಿ ಗಮನ ಸೆಳೆದ ರಾಧಾ–ಕೃಷ್ಣೆಯರು



ಸರಗೂರು, ಸೆ.6– ಶ್ರೀ ಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಜೆಎಸ್ಎಸ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ರಾಧಾ ಮತ್ತು ಕೃಷ್ಣನ ವೇಷ ಭೂಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ರಾಧಾ ಮತ್ತು ಕೃಷ್ಣ ವೇಷಧಾರಿಗಳು, ತೀರ್ಪುಗಾರರು ಮತ್ತು ಪ್ರೇಕ್ಷಕರ ಗಮನ ಸೆಳೆದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಶಾಲೆಯ ಮುಖ್ಯ ಶಿಕ್ಷಕ ಅಂಜುಂ ಪಾಷ ವಹಿಸಿದ್ದು ವಿದ್ಯಾರ್ಥಿಗಳು ಪ್ರಾರ್ಥನಾ ನೃತ್ಯ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಿವೃತ್ತ ಪ್ರೊಫೆಸರ್ ಅನುಸೂಯ ಮಾತನಾಡಿ, ಶ್ರೀ ಕೃಷ್ಣ ಜನ್ಮಾಷ್ಟಮಿಯ ದಿನದಂದು ಪ್ರತಿ ಮನೆಯಲ್ಲಿಯೂ ಶ್ರೀ ಕೃಷ್ಣನ ಉಡುಗೆ ತೊಡುಗೆ ಹಾಕಿ ಸಂಭ್ರಮಿಸುತ್ತಾರೆ, ಇಂದು ದೇಶಾದ್ಯಂತ ಕೃಷ್ಣ ಜನ್ಮಾಷ್ಟಮಿಯನ್ನು ಆಚರಣೆ ಮಾಡಲಾಗುತ್ತಿದೆ. ಇಲ್ಲಿ ಮಕ್ಕಳಿಗೆ ಶ್ರೀ ಕೃಷ್ಣನ ವೇಷ ತೊಡಿಸಿ ಬಂದಿರುವ ಪೋಷಕರಿಗೂ, ಮಕ್ಕಳಿಗೂ ಶ್ರೀ ಕೃಷ್ಣ ಜನ್ಮಾಷ್ಟಮಿಯ ಶುಭಾಶಯ ತಿಳಿಸಿದರು.

ಕಾರ್ಯಕ್ರಮದಲ್ಲಿ ತೀರ್ಪುಗಾರರು ಉತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಶಾಲೆಯ ಶಿಕ್ಷಕರಾದ ಅಂತೋಣಿ ಮೇರಿ, ಜಯಣ್ಣ, ಕೃಷ್ಣಮೂರ್ತಿ, ನಂದಿನಿ ಎಂ ಎಸ್, ಶ್ವೇತಾ, ಮಂಜುಳಾ, ಶಿಲ್ಪಾ, ಶೀಲಾ, ಶೋಭಾರಾಣಿ, ರಂಜಿನಿ ಅರಸ್, ಶಂಕರ್, ಗುರು ಪ್ರಸಾದ್, ಮಹದೇವಸ್ವಾಮಿ, ಪುಷ್ಪ, ಮಂಜುನಾಥ್, ಅನಿತಾ, ಶ್ವೇತಾ, ಅಶೋಕ್, ಪಾಲ್ಗೊಂಡಿದ್ದರು ಎಲ್ಲಾ ಮಕ್ಕಳು ಅತ್ಯುತ್ತಮ ರೀತಿಯಲ್ಲಿ ರಾಧಾ ಮತ್ತು ಕೃಷ್ಣ ವೇಷ ಭೂಷಣ ತೊಟ್ಟು ಅತ್ಯುತ್ತಮ ರೀತಿಯಲ್ಲಿ ಪ್ರದರ್ಶನ ನೀಡುವ ಮೂಲಕ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆಯಿತು. ಮಕ್ಕಳಿಗೆ ಸಿಹಿ ಹಂಚಲಾಯಿತು.

ಪ್ರೀತಿಸಿ ಮದುವೆಯಾಗಿದ್ದ ಯುವತಿ ನೇಣಿಗೆ ಶರಣು

ಮಗಳ ಸಾವಿಗೆ ವರದಕ್ಷಿಣೆ ಕಿರುಕುಳ ಕಾರಣ ಎಂದು ತಂದೆಯಿಂದ ದೂರು



ತಿ.ನರಸೀಪುರ,ಸೆ.6– ಮನೆಯವರ ವಿರೋಧದ ನಡುವೆ ಪ್ರೀತಿಸಿ ಮದುವೆಯಾಗಿದ್ದ ಯುವತಿಯೊಬ್ಬಳು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೊಮ್ಮನಹಳ್ಳಿ ಗ್ರಾಮದಲ್ಲಿ ಸಂಭವಿಸಿದ್ದು, ವರದಕ್ಷಿಣೆ ಕಿರುಕುಳವೇ ತಮ್ಮ ಮಗಳ ಸಾವಿಗೆ ಕಾರಣವೆಂದು ಯುವತಿ ತಂದೆ ಪಟ್ಟಣ ಪೋಲೀಸರಿಗೆ ದೂರು ನೀಡಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲೂಕಿನ ಎರೆವಾರ ಗ್ರಾಮದ ಧರ್ಮ ಎಂಬುವರ ಪುತ್ರಿ ಜ್ಯೋತಿಕಾ(19) ಎಂಬಾಕೆಯೇ ವರದಕ್ಷಿಣೆ ಕಿರುಕುಳದಿಂದ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿರುವ ಯುವತಿ.

ಈಕೆ ಎಸ್ಎಸ್ಎಲ್‌ಸಿ ವ್ಯಾಸಂಗ ಮಾಡುತ್ತಿದ್ದು, ಟಿ.ನರಸೀಪುರ ತಾಲೂಕಿನ ಗವಿಮಠದ ಅರೆಬೊಮ್ಮನಹಳ್ಳಿ ಗ್ರಾಮದ ರವಿ ಎಂಬುವರ ಪುತ್ರ ಸತೀಶ ಮದುವೆಯಾಗುವ ಸಲುವಾಗಿ ತನ್ನ ಸ್ನೇಹಿತರೊಂದಿಗೆ ಎರೆವಾರ ಗ್ರಾಮಕ್ಕೆ ಹೋಗಿ ಹುಡುಗಿ ನೋಡಿಕೊಂಡು ಬಂದಿದ್ದ. ಹುಡುಗ ಒಪ್ಪಿಗೆಯಾದ ಹಿನ್ನೆಲೆಯಲ್ಲಿ ಜ್ಯೋತಿಕಾ ತಂದೆ ಧರ್ಮ ಅರೆಬೊಮ್ಮನಹಳ್ಳಿಗೆ ಹೋದ ವೇಳೆ ಗ್ರಾಮಸ್ಥರು ಹುಡುಗನ ಬಗ್ಗೆ ಒಳ್ಳೆ ಅಭಿಪ್ರಾಯ ವ್ಯಕ್ತಪಡಿಸದ ಹಿನ್ನೆಲೆಯಲ್ಲಿ ವಾಪಸ್ ಬಂದಿದ್ದರು.

ಈ ನಡುವೆ ಸತೀಶ ಹುಡುಗಿಯ ದೂರವಾಣಿ ಸಂಖ್ಯೆ ಪಡೆದು ಆಗಾಗ ಆಕೆಗೆ ಫೋನ್ ಮಾಡುತ್ತಿದ್ದ ಹಿನ್ನೆಲೆಯಲ್ಲಿ ಇಬ್ಬರ ನಡುವೆ ಪ್ರೀತಿ ಬೆಳೆದಿತ್ತು ಕೆಲ ದಿನದ ನಂತರ ಸತೀಶ, ಜ್ಯೋತಿಕಾಳನ್ನು ಯಾರಿಗೂ ಗೊತ್ತಾಗದ ಹಾಗೆ ಅರೆಬೊಮ್ಮನಹಳ್ಳಿಗೆ ಕರೆದೊಯ್ದಿದ್ದ. ಈ ಬಗ್ಗೆ ತಿಳಿದುಕೊಳ್ಳಲು ಜ್ಯೋತಿಕಾ ತಂದೆ ಧರ್ಮ ಆಕೆಗೆ ಫೋನ್ ಮಾಡಿದ ವೇಳೆ ನಾವಿಬ್ಬರೂ ಪ್ರೀತಿಸುತ್ತಿದ್ದು ಗ್ರಾಮದ ಯಜಮಾನರ ಸಮ್ಮುಖದಲ್ಲಿ ಮದುವೆಯಾಗಿರುವುದಾಗಿ ತಿಳಿಸಿದ್ದಾಳೆ.

ಹಾಗಾಗಿ ಬೇಸರಗೊಂಡ ಧರ್ಮ ಆಕೆಯೊಂದಿಗೆ ಸಂಪರ್ಕ ಕಳೆದುಕೊಂಡಿದ್ದಾರೆ. ಕೆಲ ದಿನಗಳ ನಂತರ ಜ್ಯೋತಿಕಾಳನ್ನು ನೋಡಲು ಅರೆಬೊಮ್ಮನಹಳ್ಳಿಗೆ ಹೋದಾಗ ಮಗಳು ಅಲ್ಲಿ ತನಗಾಗುತ್ತಿರುವ ಚಿತ್ರ ಹಿಂಸೆಯ ಬಗ್ಗೆ ತಂದೆಗೆ ತಿಳಿಸಿ, ನಾನು ಇಲ್ಲಿರಲು ಸಾಧ್ಯವಿಲ್ಲ. ನನಗೆ ವರದಕ್ಷಿಣೆ ತರುವಂತೆ ಹಿಂಸೆ ನೀಡಲಾಗುತ್ತಿದೆ. ಮನೆಯವರೆಲ್ಲಾ ಸೇರಿ ಹಿಂಸೆ ನೀಡುತ್ತಿದ್ದಾರೆ ಎಂದು ತನ್ನ ನೋವು ತೋಡಿಕೊಂಡಿದ್ದಾಳೆ. ಇದರಿಂದ ನೊಂದ ತಂದೆ ಧರ್ಮ ಮಗಳನ್ನು ಸಮಾಧಾನ ಪಡಿಸಿ ವಾಪಸ್ ಮನೆಗೆ ಬಂದುಬಿಡು, ಗೌರಿ ಹಬ್ಬದ ನಂತರ ಬಂದು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದಾರೆ ಎನ್ನಲಾಗಿದೆ.

ಆದರೆ ಸ್ವಲ್ಪ ದಿನದ ನಂತರ ಮಗಳ ಯೋಗಕ್ಷೇಮ ವಿಚಾರಿಸಲು ಫೋನ್ ಮಾಡಿದ ವೇಳೆ ಜ್ಯೋತಿಕ ಫೋನ್ ಬ್ಲಾಕ್ ಆಗಿತ್ತು. ಈ ನಡುವೆ ಮಂಗಳವಾರ ರಾತ್ರಿ ಆಕೆ ನೇಣು ಹಾಕಿಕೊಳ್ಳಲು ಪ್ರಯತ್ನಪಟ್ಟ ವಿಷಯ ವ್ಯಕ್ತಿಯೊಬ್ಬರಿಂದ ತಿಳಿದು ಮಳವಳ್ಳಿ ಆಸ್ಪತ್ರೆಗೆ ಆಕೆಯನ್ನು ದಾಖಲಿಸಲಾಗಿದ್ದರಿಂದ ಅಲ್ಲಿ ಹೋಗಿ ನೋಡಲಾಗಿ ಅಲ್ಲಿಂದ ಆಕೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೇ ಆಕೆ ಮೃತ ಪಟ್ಟಿದ್ದಳು ಎಂದು ಹೇಳಲಾಗಿದೆ. ಈ ಸಂಬಂಧ ತನ್ನ ಮಗಳ ಸಾವಿಗೆ ವರದಕ್ಷಿಣೆ ಕಿರುಕುಳ ಕಾರಣವಾಗಿದ್ದು, ಆಕೆಗೆ ಹೊಡೆದು ಬಡಿದು ಹಿಂಸೆ ನೀಡಿ ನೇಣು ಹಾಕಿ ಕೊಲೆ ಮಾಡಲಾಗಿದೆ ಎಂದು ಮೃತಳ ತಂದೆ ಧರ್ಮ ಪಟ್ಟಣ ಪೊಲೀಸರಿಗೆ ದೂರು ನೀಡಿದ್ದಾರೆ.

ಹಾಲಿನ ಡೈರಿಗಾಗಿ ಕಿತ್ತಾಟ...

ನೂರಾರು ಲೀಟರ್ ಹಾಲು ಸುರಿದು ಆಕ್ರೋಶ...

ಬೆಟ್ಟದಪುರ, ಸೆ.6– ಮುಚ್ಚಿದ ಹಾಲಿನ ಡೈರಿ ಮತ್ತೆ ತೆರೆಯುವಂತೆ ಆಗ್ರಹಿಸಿ ಸ್ಥಳೀಯರು ನೂರಾರು ಲೀಟರ್ ಹಾಲನ್ನು ಬಸವನ ಪ್ರತಿಮೆ ಮೇಲೆ ಸುರಿದು ಆಕ್ರೋಶ ವ್ಯಕ್ತಪಡಿಸಿದ ಘಟನೆ ಪಿರಿಯಾಪಟ್ಟಣ ತಾಲೂಕು ಪೂನಾಡಹಳ್ಳಿಯಲ್ಲಿ ನಡೆದಿದೆ.

ಗ್ರಾಮದಲ್ಲಿರುವ ಬಸವೇಶ್ವರ ದೇವಸ್ಥಾನ ಮುಂಭಾಗದಲ್ಲಿರುವ ಬಸವನ ಪ್ರತಿಮೆ ಮೇಲೆ ಸುರಿದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಿಂದಿನ ಶಾಸಕ ಕೆ.ಮಹದೇವ್ ಅಧಿಕಾರದಲ್ಲಿದ್ದಾಗ ಗ್ರಾಮದಲ್ಲಿ ಎರಡು ಹಾಲಿನ ಡೈರಿ ಕಾರ್ಯನಿರ್ವಹಿಸುತ್ತಿದ್ದು ಗ್ರಾಮದ ಜನತೆ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದ್ದರು. ಸರ್ಕಾರ ಬದಲಾದ ನಂತರ ಕೆ.ವೆಂಕಟೇಶ್ ಸಚಿವರಾಗುತ್ತಿದ್ದಂತೆ ಒಂದು ಡೈರಿ ಮುಚ್ಚಲಾಗಿದೆ. ಈ ಬೆಳವಣಿಗೆ ಮುಚ್ಚಿದ ಡೈರಿಗೆ ಹಾಲು ಹಾಕುತ್ತಿದ್ದ ಪಶುಸಂಗೋಪಕರನ್ನ ಕೆರಳಿಸಿದೆ.

ಮುಚ್ಚಿದ ಡೈರಿಯನ್ನು ಮತ್ತೆ ತೆರೆಯುವಂತೆ ಆಗ್ರಹಿಸಿದ್ದಾರೆ. ಇದಕ್ಕೆ ಸೂಕ್ತ ಸ್ಪಂದನೆ ದೊರೆಯದ ಹಿನ್ನೆಲೆ ಒಂದು ಗುಂಪು ಇಂದು ನೂರಾರು ಲೀಟರ್ ಹಾಲನ್ನು ಬಸವನ ಪ್ರತಿಮೆ ಮೇಲೆ ಸುರಿಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವೇಳೆ ಹಾಜರಿದ್ದ ಪೊಲೀಸರು ಹಾಲು ಸುರಿಯುತ್ತಿರುವ ದೃಶ್ಯಗಳನ್ನು ತಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿಯುವ ಮೂಲಕ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಸಚಿವರ ಕೈವಾಡವಿಲ್ಲ: ಪಿರಿಯಾಪಟ್ಟಣ ತಾಲೂಕಿನ ಚಿಟ್ಟೆನಹಳ್ಳಿ ಹಾಗೂ ಪುಡನಾಹಳ್ಳಿ ಹಾಲಿನ ಡೈರಿ ತೆರವುಗೊಳಿಸಲು ಮೈಮುಲ್‌ನಿಂದ ಆದೇಶ ಬಂದಿರುವುದೇ ಹೊರತು ಇದರಲ್ಲಿ ಸಚಿವ ಕೆ ವೆಂಕಟೇಶ್ ಅವರ ಕೈವಾಡ ಇಲ್ಲ. ದುರುದ್ದೇಶದಿಂದ ಸಚಿವರ ಹೆಸರಿಗೆ ಕಳಂಕ ತರುತ್ತಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ತೆಲಗನುಕುಪ್ಪೆ ರವಿ, ಪುಡನಾಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಪಿ.ವಿ. ವಸಂತ ಕುಮಾರ್, ಮಾಜಿ ಗ್ರಾಪಂ ಅಧ್ಯಕ್ಷ ಜವರೇಗೌಡ, ಶುಭಸ್ವಾಮಿ, ಜಲೇಂದ್ರ, ಮಾಜಿ ತಾಪಂ ಸದಸ್ಯರಾದ ಆರ್.ಎಸ್.ಮಹಾದೇವ್, ಬೆಣಗಾಲು ಮಾಜಿ ಗ್ರಾಪಂ ಉಪಾಧ್ಯಕ್ಷ ಧನರಾಜ್, ಕಲ್ಲೇಶ್ ಕೊತ್ತವಳ್ಳಿ ಅವರುಗಳು ಸ್ಪಷ್ಟಪಡಿಸಿದರು.

ನಗರ್ಲೆ ಡೈರಿಯ ಕ್ಷೀರ ಭವನ ಉದ್ಘಾಟನೆ



ನಗರ್ಲೆ, ಸೆ6– ನಂಜನಗೂಡು ತಾಲೂಕಿನ ನಗರ್ಲೆಯಲ್ಲಿ ಪ್ರಸಕ್ತ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹಾಗೂ ಸಂಘದ ನೂತನ ಕ್ಷೀರ ಭವನವನ್ನು ಉದ್ಘಾಟಿಸಲಾಯಿತು.

ಡೈರಿ ಅಧ್ಯಕ್ಷ ಎನ್.ಬಿ.ವೀರೇಂದ್ರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಕೆ.ಜಿ.ಮಹೇಶ್ ಸಂಘದಿಂದ ದೊರೆಯುವ ಸವಲತ್ತುಗಳ ಬಗ್ಗೆ ತಿಳಿಸಿಕೊಟ್ಟರು. ನಿರ್ದೇಶಕ ಬಿ.ಎನ್. ಸದಾನಂದರಮು ಮಾತನಾಡಿ, ರಾಸುಗಳಿಗೆ ವಿಮಾ ಸೌಲಭ್ಯ ಹಾಗೂ ಸಂಘದಿಂದ ಉತ್ತಮ ಸಭಾಂಗಣ ನಿರ್ಮಾಣವಾಗಿದೆ ಸಂಘ ಅಭಿವೃದ್ಧಿಯತ್ತ ಸಾಗಲಿ ಎಂದು ಹಾರೈಸಿದರು.

ಸಂಘದ ಅಧ್ಯಕ್ಷ ಎನ್.ಬಿ.ವೀರೇಂದ್ರ ಮಾತನಾಡಿ, ಹಾಲು ಉತ್ಪಾದಕರು ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಈ ವೇಳೆ ಒಕ್ಕೂಟದ ನಿರ್ದೇಶಕಿ ನೀಲಾಂಬಿಕೆ, ಸಂಘದ ಉಪಾಧ್ಯಕ್ಷೆ ಜಯಮ್ಮ, ನಿರ್ದೇಶಕರಾದ ಆರ್.ಸರ್ವೇಶ, ಎನ್.ಇಗುರುಸ್ವಾಮಿ, ಮಹದೇವಯ್ಯ, ಶಂಭು ಚಿನ್ನಪ್ಪ, ಎನ್.ಎಂ.ರಾಜನಾಯಕ, ಜಯಮ್ಮ, ಸಾಕಮ್ಮ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಧಿಕಾರಿ ಆನಂದ್‌ಗೌಡ, ಸಿಇಓ ಎನ್.ಎಂ.ರಾಜೇಂದ್ರ, ಹಾಲು ಪರೀಕ್ಷಕ ಮಾದಪ್ಪ ಹಾಗೂ ಸಂಘದ ಸದಸ್ಯರಿದ್ದರು.

ಬಲಿಷ್ಠ ರಾಷ್ಟ್ರ ನಿರ್ಮಾಣ ಶಿಕ್ಷಕರ ಶಿಕ್ಷಣದಿಂದ ಸಾಧ್ಯ



ಕೆ.ಆರ್.ನಗರ, ಸೆ.6– ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕರು ಶ್ರಮಿಸುವ ಮೂಲಕ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಕಾರಣಕರ್ತರಾಗಬೇಕು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ಪುರಸಭೆ ಬಯಲು ರಂಗ ಮಂದಿರದಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ, ನಿವೃತ್ತ ಶಿಕ್ಷಕರಿಗೆ ಹಾಗೂ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಲಿಷ್ಠ ರಾಷ್ಟ್ರ ನಿರ್ಮಾಣ ಮಾಡಲು ಶಿಕ್ಷಕರ ಪಾತ್ರ ಪ್ರಮುಖವಾದದ್ದು. ಇದನ್ನು ಶಿಕ್ಷಕ ವೃಂದ ಅರ್ಥ ಮಾಡಿಕೊಂಡು ವಿದ್ಯಾರ್ಥಿಗಳನ್ನು ಯಾವ ದಿಕ್ಕಿಗೆ ತೆಗೆದುಕೊಂಡು ಹೋಗಬೇಕೆಂಬ ಹೊಣೆಗಾರಿಕೆಯನ್ನು ಬಹಳ ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಮನವಿ ಮಾಡಿದರು.

ಕ್ಷೇತ್ರದ ವಿದ್ಯಾರ್ಥಿಗಳು ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಗಣನೀಯ ಸಾಧನೆ ಮಾಡಬೇಕು. ಈ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳಿಗೆ ಬೋಧನೆ ಮಾಡುವುದರ ಜತೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಪರೀಕ್ಷಾರ್ಥಿಗಳಿಗೆ ಉತ್ತಮ ತರಬೇತಿ ನೀಡಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಶಾಲೆಗಳ ಜತೆಗೆ ಖಾಸಗಿ ಶಾಲೆಯ ವಿದ್ಯಾರ್ಥಿಗಳು ಫಲಿತಾಂಶದಲ್ಲಿ ಸಾಧನೆ ಮಾಡಬೇಕು. ಈ ಬಗ್ಗೆ ಆಯಾ ಶಾಲಾ ಆಡಳಿತ ಮಂಡಳಿ ಮತ್ತು ಸಂಬಂಧ ಅಧಿಕಾರಿಗಳು ಗಮನಹರಿಸಬೇಕು ಎಂದು ತಿಳಿಸಿದ ಶಾಸಕರು ಅಂಕ ಗಳಿಕೆಯ ಜತೆಗೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕಲಿಸಬೇಕು ಎಂದು ಕೋರಿದರು. ಶಾಲಾ ಕೊಠಡಿಗಳ ದುರಸ್ತಿಗಾಗಿ ಅನುದಾನ ಮಂಜೂರು ಮಾಡುವಂತೆ ಸದನದಲ್ಲಿ ಸರ್ಕಾರದ ಗಮನ ಸೆಳೆಯಲಾಗಿತ್ತು. ಇದಕ್ಕೆ ಸ್ಪಂದಿಸಿರುವ ಶಿಕ್ಷಣ ಸಚಿವರು, ಅನುದಾನ ಮಂಜೂರು ಮಾಡಿದ್ದು ಇಲಾಖೆಯವರು ತುರ್ತಾಗಿ ಆಗಬೇಕಾಗಿರುವ ಕಾಮಗಾರಿಗಳನ್ನು ಮಾಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ನಿವೃತ್ತಿ ಹೊಂದಿರುವ ಸುಮಾರು 40 ಮಂದಿ ಶಿಕ್ಷಕರುಗಳನ್ನು ಸನ್ಮಾನಿಸಲಾಯಿತು. ಇದರ ಜತೆಗೆ ಪ್ರಶಸ್ತಿ ಪುರಸ್ಕೃತ ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಿಕ್ಷಕರನ್ನು ಅಭಿನಂದಿಸಲಾಯಿತು. ಶಿಕ್ಷಕರ ದಿನಾಚರಣೆ ಅಂಗವಾಗಿ ಶಿಕ್ಷಕರಿಗಾಗಿ ನಡೆದ ಆಟೋಟ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸರ್ವಪಲ್ಲಿ ರಾಧಾಕೃಷ್ಣನ್‌ರವರ ಭಾವಚಿತ್ರವನ್ನು ಅಲಂಕೃತಗೊಂಡ ವಾಹನದಲ್ಲಿ ಕಾಲೇಜು ಮೈದಾನದಿಂದ ಬಯಲು ರಂಗ ಮಂದಿರದವರೆಗೆ ಮೆರವಣಿಗೆ ಮಾಡಲಾಯಿತು. ತಹಸೀಲ್ದಾರ್ ಸಿ.ಎಸ್.ಪೂರ್ಣಿಮ, ಬಿಇಒ ಆರ್.ಕೃಷ್ಣಪ್ಪ, ಹಿರಿಯ ಸಾಹಿತಿ ಕಾ.ತ.ಚಿಕ್ಕಣ್ಣ ಮಾತನಾಡಿದರು.

ಜಿಪಂ ಮಾಜಿ ಸದಸ್ಯ ಜಿ.ಆರ್.ರಾಮೇಗೌಡ, ಪುರಸಭೆ ಸದಸ್ಯರಾದ ಕೋಳಿಪ್ರಕಾಶ್, ಶಿವಕುಮಾರ್, ಶಂಕರ್, ಮಾಜಿ ಸದಸ್ಯ ಕೆ.ವಿನಯ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ.ಅರುಣ್‌ಕುಮಾರ್, ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಎಸ್.ನಾಗರಾಜು, ಪದಾಧಿಕಾರಿಗಳಾದ ರಾಜಶೇಖರ್, ಸಿ.ಎನ್.ಸ್ವಾಮಿ, ಮುತ್ತೇಶಚಾರ್, ಮಧುಕುಮಾರ್, ಲಕ್ಷ್ಮಿಕಾಂತ್, ಬಿ.ವಿ.ಪ್ರಸನ್ನಕುಮಾರ್, ಕುಮಾರೇಗೌಡ, ಜ್ಯೋತಿಕುಮಾರ್, ಸೈಯದ್‌ರಿಜ್ವಾನ್, ಮನೋಹರ್, ಕಮಲ, ಈಶ್ವರ್, ಶಿಕ್ಷಣ ಸಂಯೋಜಕರಾದ ದಾಸಪ್ಪ, ಜಗದೀಶ್ ಮತ್ತಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಮಿಸ್ಟೇಕ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕೌಶಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಖುಷಿ (ತೆ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜವಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.20ಕ್ಕೆ, ಮ.1.10ಕ್ಕೆ, ರಾ.7.15ಕ್ಕೆ, ರಾ.10.05ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ಲೂಸಿಯಾ (ಕ): ಬೆ.10.05ಕ್ಕೆ, ಜೈಲರ್ (ಕ): ಮ.12.45ಕ್ಕೆ, ಜೈಲರ್ (ತ): ಮ.3.55ಕ್ಕೆ, ಖುಷಿ (ತೆ): ರಾ.7.10ಕ್ಕೆ, ಜವಾನ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಬೆ.10.55ಕ್ಕೆ, ರಾ.10.10ಕ್ಕೆ, ಟೋಬಿ (ಕ): ಮ.1.10ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಸಂ.4.05ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ಸಂ.6.55ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು





2ನೇ ದಿನ, ಗುರುವಾರ 7–9–2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ವಿರಿಜ ಪ್ಲೇಟ್ ಡಿ2–1100 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್) ಮ.1.30ಕ್ಕೆ
1. ಟಾಪ್ ರ್‍ಯಾಂಕ್ 2. ವಾರ್‌ಸಾಂಗ್ 3. ಡಿ ಗೋಲ್ಡನ್ ಕಪ್

II. ವಿರಿಜ ಪ್ಲೇಟ್ ಡಿ1–1100 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್) ಮ.2.00ಕ್ಕೆ
1. ಮೆರಾಕಿ 2. ರೆಡ್ ಹಿಲ್ಸ್ 3. ಮಿಸ್ಟಿಕಲ್ ಮೆರ್ಲಿನ್

III. ಸೋಮನಾಥಪುರ ಪ್ಲೇಟ್ ಡಿ2–1400 ಮೀ. ಮ.2.30ಕ್ಕೆ
1 ಎಂಬೋಸವ್ 2. ರಾಜ್ 3 ಮೈಟಿಸ್ವಾಲೋ

IV. ಜೆ.ಹೆಚ್.ಫೋಲೆ ಮೆಮೋರಿಯಲ್ ಟ್ರೋಫಿ–1600 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1. ಐರಿಸ್ ಕಾಫಿ 2. ಲಾಚ್ ಲೊಮೊಂಡ್ 3. ಸಂಟೋರಿನಿ

V. ಉದಗಮಂಡಲಂ ಟ್ರೋಫಿ– 1100 ಮೀ. 3 ವರ್ಷ(ಟರ್ಮ್ಸ್). (ಮೈಸೂರ್ ಬೇಸ್ಡ್ ಹಾರ್ಸ್). ಮ.3.30ಕ್ಕೆ
1. ಅನುಷ್‌ಸ್ತುಭಾ 2. ಒನ್ ಡೈಮಂಡ್ 3. ಜೆನಿರೊ

VI. ಹೆಚ್.ಹೆಚ್. ಶ್ರೀಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ–1400 ಮೀ. (4 ವರ್ಷ ಟರ್ಮ್ಸ್). ಸಂ.4.00ಕ್ಕೆ
1 ಈವಾಲ್ಡೋ 2. ಫಾರೆಸ್ಟ್ ಫ್ಲೇಮ್ 3. ಓ ಹಾನ್ನಿನಿ

VII. ಪೂಣೆ ಪ್ಲೇಟ್– 1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಅಮರ್‍ಲಿ 2. ಶಾಬೆಲ್ಲಿ 3. ಗ್ರಾಮು

VIII. ಸೋಮನಾಥಪುರ ಪ್ಲೇಟ್ ಡಿ1–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಬರ್‌ಮೆಸಿ 2. ರಿವರ್ ಆಫ್ ಗೋಲ್ಡ್ 3 ಮೈಲೋಸ್

ದಿನದ ಅತ್ಯುತ್ತಮ..........	: ಮೆರಾಕಿ
ಡಬ್ಬಲ್..........	: ಅಮರ್ಲಿ, ಬರ್‌ಮೆಸಿ
ಜಾಕ್‌ಪಾಟ್..........	: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್..........	: 5, 6, 7 ಮತ್ತು 8
I ಟ್ರಿಬಲ್..........	: 1, 2 ಮತ್ತು 3
II ಟ್ರಿಬಲ್..........	: 3, 4 ಮತ್ತು 5
III ಟ್ರಿಬಲ್..........	: 6, 7 ಮತ್ತು 8
ಎಕ್ಸಲ್ಟ್..........	: 1 ರಿಂದ 8

ಟಿಪ್ಸ್ ಸ್ಟರ್ ಪಿಜಿಸಿ

ತಮಿಳುನಾಡಿಗೆ ನಿರಂತರ ನೀರು: ಕೆಆರ್‌ಎಸ್ ಜಲಾಶಯದ ಮಟ್ಟ 98 ಅಡಿಗೆ ಕುಸಿತ

ನೀರು ಬಿಡಿ, ಪರಿಹಾರ ನೀಡಿ, ಇಲ್ಲವೇ ಜೈಲಿಗೆ ತಳ್ಳಿ



ಮೈಸೂರು, ಸೆ.6(ಬಿಎಲ್‌ಯು)– ನಮ್ಮ ರೈತರ ಹಿತ ಕಾಪಾಡುತ್ತೇವೆ ಎಂದು ಪ್ರತಿ ದಿನ ಹೇಳುತ್ತಿರುವ ರಾಜ್ಯ ಸರ್ಕಾರ, ತಮಿಳುನಾಡಿಗೆ ನಿರಂತರವಾಗಿ ನೀರು ಹರಿಸುತ್ತಿರುವುದರಿಂದ ಕೆಆರ್‌ಎಸ್ ಜಲಾಶಯದ ಮಟ್ಟ 98 ಅಡಿಗೆ ಕುಸಿದಿದೆ.

ಪ್ರತಿ ದಿನ 25 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 21ಕ್ಕೆ ಮುಂದೂಡಿದೆ. ಇದರಿಂದ ಸುಪ್ರೀಂಕೋರ್ಟ್‌ನಿಂದ ಆದೂ ನೀರು ಬಿಡುಗಡೆ ಸ್ಥಗಿತಗೊಳ್ಳುತ್ತದೆ ಎಂಬ ಭರವಸೆ ಕೂಡ ಈಗ ಹುಸಿಯಾಗಿದೆ.

ಈಗ ಕಾವೇರಿ ನಿರ್ವಹಣಾ ಮಂಡಳಿ ಆದೇಶದಂತೆ ತಮಿಳುನಾಡಿಗೆ ಪ್ರತಿ ದಿನ ನೀರು ಹರಿದು ಹೋಗುತ್ತಿದೆ. ಇದರಿಂದ ದಿನ ಕಳೆದಂತೆ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಕುಸಿಯುತ್ತಾ ಹೋಗುತ್ತಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 98.60 ಅಡಿಗಳಾಗಿದೆ. ಜಲಾಶಯಕ್ಕೆ 2,432 ಕ್ಯೂಸೆಕ್ ನೀರು ಹರಿದು ಬರುತ್ತಿದ್ದರೆ, ಜಲಾಶಯದಿಂದ ತಮಿಳುನಾಡಿಗೆ 6,294 ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಕಬಿನಿಯ ನೀರಿನ ಮಟ್ಟವೂ ಕುಸಿತ: ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,273 ಅಡಿಗಳಾಗಿದೆ. ಜಲಾಶಯಕ್ಕೆ 788 ಕ್ಯೂಸೆಕ್ ಒಳಹರಿದಿದೆ. ಜಲಾಶಯದಿಂದ 500 ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿದೆ.

ಕಾವೇರಿ ನಿರ್ವಹಣಾ ಮಂಡಳಿ ಹೇಳಿರುವಂತೆ ಸೆಪ್ಟೆಂಬರ್ 11ರವರೆಗೆ ಕೆಆರ್‌ಎಸ್ ಹಾಗೂ ಕಬಿನಿಯಿಂದ ನೀರು ಬಿಡಬೇಕಾಗುತ್ತದೆ. ತರುವಾಯ ತಮಿಳುನಾಡು ಸರ್ಕಾರ ಮತ್ತೆ ಕಾವೇರಿ ನಿರ್ವಹಣಾ ಮಂಡಳಿಯ ಮುಂದೆ ನೀರು ಬೇಕೆಂದು ಪಟ್ಟು ಹಿಡಿಯುತ್ತದೆ. ನಮ್ಮ ಬೇಡಿಕೆ 25 ಸಾವಿರ ಕ್ಯೂಸೆಕ್ ಆಗಿರುವ ಕಾರಣ ನಮಗೆ ಈಗ ತಲುಪಿರುವ ನೀರು ಏನೇನು ಸಾಲದು ಎಂದು ಮತ್ತೆ ಕ್ಯಾತೆ ತೆಗೆಯುತ್ತದೆ. ಆಗ ಕಾವೇರಿ ನಿರ್ವಹಣಾ ಮಂಡಳಿ ಮತ್ತೆ ನೀರು ಬಿಡುವಂತೆ ಆದೇಶಿಸಿದರೆ ಕರ್ನಾಟಕ ಸರ್ಕಾರ ಏನು ಮಾಡಲಿದೆ ಎಂಬ ಕುತೂಹಲವಿದೆ.

ಸುಪ್ರೀಂಕೋರ್ಟ್ ವಿಚಾರಣೆಯನ್ನು ಸೆಪ್ಟೆಂಬರ್ 21ಕ್ಕೆ ಮುಂದೂಡಿರುವ ಕಾರಣ ರೈತರು ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಿದ್ದಾರೆ. ನಮ್ಮ ಬೆಳೆಗಳಿಗೆ ಪೂರ್ಣ ಪ್ರಮಾಣದಲ್ಲಿ ನೀರು ಕೊಡಿ, ಇಲ್ಲವೆ ಪರಿಹಾರ ನೀಡಿ, ಎರಡೂ ಆಗದಿದ್ದರೆ ನಮ್ಮನ್ನು ಜೈಲಿಗೆ ತಳ್ಳಿ ಎಂಬ ಘೋಷಣೆಯೊಂದಿಗೆ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ನೈಋತ್ಯ ಮಾನ್ಸೂನ್ ಮತ್ತೆ ಸಕ್ರಿಯ; ಈ ವಾರ ರಾಜ್ಯದಾದ್ಯಂತ ಮಳೆ

ಹವಾಮಾನ ಇಲಾಖೆ ಮುನ್ಸೂಚನೆ



ಬೆಂಗಳೂರು: ರಾಜ್ಯದಲ್ಲಿ ನೈಋತ್ಯ ಮಾನ್ಸೂನ್ (ಮುಂಗಾರು) ಮತ್ತೆ ಚುರುಕುಗೊಳ್ಳುತ್ತಿದ್ದು, ಈ ವಾರ ರಾಜ್ಯದಾದ್ಯಂತ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಮಂಗಳವಾರ ರಾತ್ರಿ 8.30 ರವರೆಗೆ ನಗರದಲ್ಲಿ 18 ಮಿಮೀ ಮಳೆಯಾಗಿದ್ದು, ಈ ಪೈಕಿ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ 15 ಮಿಮೀ ಮಳೆ ದಾಖಲಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಬಹುತೇಕ ಭಾಗಗಳಲ್ಲಿ ಸೆಪ್ಟೆಂಬರ್ 8 ರವರೆಗೆ ಮಳೆಯಾಗಲಿದೆ. ಮುಂದಿನ 48 ಗಂಟೆಗಳ ಕಾಲ, ಉತ್ತರ ಒಳನಾಡು, ಕರಾವಳಿ ಭಾಗ ಮತ್ತು ದಕ್ಷಿಣ ಒಳನಾಡಿನ ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ವಿಜ್ಞಾನಿ ಎ.ಪ್ರಸಾದ್ ಹೇಳಿದ್ದಾರೆ.

IMD ನೀಡಿರುವ ಪ್ರಕಾರ, ಮಂಗಳವಾರ ರಾತ್ರಿ 8.30 ರವರೆಗೆ, ಸೇಡಂ (ಕಲಬುರಗಿ) 8 ಸೆಂಮೀ, ಬೀದರ್ 6 ಸೆಂಮೀ, ಕೋಟ (ಉಡುಪಿ) ಮತ್ತು ಚಿಂಚೋಳಿ (ಕಲಬುರಗಿ)ನಲ್ಲಿ ತಲಾ 5 ಸೆಂ.ಮೀ ಮಳೆ ದಾಖಲಾಗಿದೆ.

ಮುಂದಿನ 24 ಗಂಟೆಗಳ ಕಾಲ ರಾಜ್ಯ ಕೆಲವು ಭಾಗಗಳಲ್ಲಿ ಮಿಂಚು ಮತ್ತು ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಗಳಿವೆ. ಬೀದರ್, ಕಲಬುರಗಿ, ಕೊಪ್ಪಳ ಮತ್ತು ರಾಯಚೂರಿನಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರಿ ಮಳೆಗೆ ಧರೆಗುರುಳಿದ ಮರಗಳು: ಈ ನಡುವೆ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಮಂಗಳವಾರ ಸಂಜೆ ಸುರಿದ ಭಾರಿ ಮಳೆಗೆ ನಾಲ್ಕು ಮರಗಳು ಧರೆಗುರುಳಿವೆ. ಜೆಪಿ ನಗರ, ರಾಜರಾಜೇಶ್ವರಿ ನಗರ, ಎಚ್‌ಎಎಲ್ 2 ಹಂತಗಳಲ್ಲಿ ಮೂರು ಮರಗಳು ಉರುಳಿದ್ದರೆ, ಕೆಸಿ ಜನರಲ್ ಆಸ್ಪತ್ರೆ ಬಳಿ ಮತ್ತೊಂದು ಮರ ಧರೆಗುರುಳಿದೆ. ಪರಿಣಾಮ ದ್ವಿಚಕ್ರ ವಾಹನ ಹಾಗೂ ಕಾರಿಗೆ ಹಾನಿಯಾಗಿದೆ. ಈ ಸಂದರ್ಭದಲ್ಲಿ ಅಂಗಡಿಯಲ್ಲಿ ಟೀ ಕುಡಿಯುತ್ತಿದ್ದ ಕಾರು ಚಾಲಕ ಹಾಗೂ ಬೈಕ್ ಸವಾರ ಅದೃಷ್ಟವಶಾತ್ ಪಾರಾಗಿದ್ದಾರೆ. ಮಳೆಯ ಪರಿಣಾಮ ಥಣಿಸಂದ್ರದ ಎರಡು ರಸ್ತೆಗಳು ಸೇರಿದಂತೆ ನಗರದ ಹಲವು ರಸ್ತೆಗಳು ಜಲಾವೃತಗೊಂಡಿದ್ದವು.

ಚುನಾವಣೆ ಹಿನ್ನೆಲೆಯಲ್ಲಿ ಭಾವನಾತ್ಮಕ ವಿಚಾರಗಳನ್ನು ಕೆದಕುತ್ತಿದ್ದಾರೆ



ಮಧುಗಿರಿ: ಚುನಾವಣೆ ಹತ್ತಿರ ಬರುತ್ತಿರುವುದರಿಂದ ಇಂಥ ಭಾವನಾತ್ಮಕ ವಿಚಾರಗಳನ್ನು ಕೆದಕುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಮಧುಗಿರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ದೇಶದ ಸಂವಿಧಾನವನ್ನು 26ನೇ ನವೆಂಬರ್ 1949 ರಂದು ಅಂಗೀಕಾರ ಮಾಡಿದ್ದಾರೆ. ಅಂದಿನಿಂದ ಭಾರತವನ್ನು ಇಂಡಿಯಾ ಎಂದೇ ಕರೆಯಲಾಗಿದೆ. ಈಗ ಬದಲಾವಣೆ ಮಾಡುವ ಅಗತ್ಯವೇನು ಎಂದರು. ಸಂವಿಧಾನದ ಪೀಠಿಕೆಯಲ್ಲಿಯೂ ಭಾರತದ ಪ್ರಜೆಗಳಾದ ನಾವು ಎಂದೇ ಹೇಳಿದ್ದೇವೆ. ಈಗ ಭಾರತ ಎಂದು ಮರುನಾಮಕರಣ ಮಾಡುವ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟರು. ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಹಿಂದೂ ಧರ್ಮದ ಕುರಿತು ನೀಡಿರುವ ಹೇಳಿಕೆಗೆ ಪ್ರತಿಕ್ರಿಯೆ ನೀಡಿ ಯಾವುದೇ ಧರ್ಮದಲ್ಲಿ ತಾರತಮ್ಯ ಮಾಡುವುದಿಲ್ಲ. ಹಿಂದೂ, ಇಸ್ಲಾಮ್, ಕ್ರೈಸ್ತ, ಸಿಖ್, ಬೌದ್ಧಧರ್ಮದಲ್ಲಿ ದಯವೇ ಧರ್ಮದ ಮೂಲವಯ್ಯ ಎಂದಿದ್ದಾರೆ ಎಂದರು.

ಆರ್‌ಟಿ ನಗರ ಬೀದಿದೀಪಗಳ ವಿದ್ಯುತ್ ಸಂಪರ್ಕಕ್ಕೆ ಪ್ರತಾಪ್ ಸಿಂಹ ಚಾಲನೆ



ಮೈಸೂರು, ಸೆ.6(ಸಿಎನ್)– ಮೈಸೂರಿನ ಹೊರವರ್ತುಲ ರಸ್ತೆಗೆ ಹೊಂದಿಕೊಂಡಿರುವ ಆರ್.ಟಿ.ನಗರದ ಬೀದಿದೀಪಗಳ ವಿದ್ಯುತ್ ಸಂಪರ್ಕಕ್ಕೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಬುಧವಾರ ಚಾಲನೆ ನೀಡಿದರು.

2015ರಲ್ಲಿ ಮುಡಾದಿಂದ 2000 ನಿವೇಶನಗಳಿರುವ ಈ ಬಡಾವಣೆ ನಿರ್ಮಿಸಲಾಗಿತ್ತು. ಆದರೆ ಮೂಲ ಸೌಲಭ್ಯಗಳ ಕೊರತೆಯಿಂದಾಗಿ ಕೇವಲ 60 ರಿಂದ 65 ಮಂದಿ ಮಾತ್ರ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. 15 ಮಂದಿ ಮನೆ ನಿರ್ಮಾಣ ಮಾಡುತ್ತಿದ್ದಾರೆ.

2022ರಲ್ಲಿ ಹಾಲಿ ಇರುವ ಮನೆಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಲಾಗಿತ್ತು. ಆದರೆ ಇಂದು ಬಡಾವಣೆಯ(ಎಬಿಸಿಡಿಇ) ಎಲ್ಲಾ ಭಾಗಗಳಿಗೂ ಅಧಿಕೃತವಾಗಿ ವಿದ್ಯುತ್ ಸಂಪರ್ಕ ನೀಡಲಾಗಿದ್ದು, ನಿವೇಶನದಾರರು ಮನೆಗಳನ್ನು ನಿರ್ಮಾಣ ಮಾಡಿಕೊಳ್ಳಲು ಸಹಕಾರಿಯಾಗಿದೆ ಎಂದು ಸ್ಥಳೀಯರು ಸಂತಸ ವ್ಯಕ್ತಪಡಿಸಿದರು.

ನೀರಿನ ಸಂಪರ್ಕಕ್ಕೆ ಮನವಿ: ವಿದ್ಯುತ್ ಸಮಸ್ಯೆ ಬಗೆಹರಿದಿದೆ. ನೀರಿನ ಸಂಪರ್ಕದ ವ್ಯವಸ್ಥೆ ಮಾಡಿಕೊಡಿ ಎಂದು ಸ್ಥಳೀಯ ನಿವಾಸಿಗಳು ಸಂಸದರಲ್ಲಿ ಮನವಿ ಮಾಡಿದರು. ಈ ವೇಳೆ ಮಾತನಾಡಿದ ಸಂಸದರು, ಬಡಾವಣೆಯಲ್ಲಿ 2 ಲಕ್ಷ ಲೀಟರ್ ಸಾಮರ್ಥ್ಯದ ನೆಲಮಟ್ಟದ ಜಲಸಂಗ್ರಹಗಾರ ನಿರ್ಮಿಸಲಾಗಿದೆ. ಕಬಿನಿಯಿಂದ ನೀರನ್ನು ಇಲ್ಲಿಗೆ ಬಿಡಲಾಗುತ್ತದೆ. ಇನ್ನು 5 ಲಕ್ಷ ಸಾಮರ್ಥ್ಯದ ಓವರ್‌ಹೆಡ್ ಟ್ಯಾಂಕ್ ಮೂಲಕ ಪಂಪ್ ಮಾಡಿಸಿ ಪೈಪ್‌ಲೈನ್ ಸಹಾಯದಿಂದ ಬಡಾವಣೆ ಮನೆಗಳಿಗೆ ನೀರು ಹರಿಸಲಾಗುವುದು. ಇದಕ್ಕೆ ಸ್ಥಳೀಯ ಶಾಸಕರಾದ ಜಿ.ಟಿ.ದೇವೇಗೌಡರು ಸಹಕರಿಸಿದ್ದಾರೆ. ಇನ್ನು ಕೆಲವೇ ತಿಂಗಳಲ್ಲಿ ನೀರು ಸರಬರಾಜು ಆಗಲಿದೆ ಎಂದು ಭರವಸೆ ನೀಡಿದರು.

ಶೀಘ್ರದಲ್ಲೇ ಪವರ್ ಸ್ಟೇಷನ್: 2000 ಮನೆಗಳಿಗೆ 7 ಮೆಗಾವ್ಯಾಟ್ ವಿದ್ಯುತ್ ಸಾಮರ್ಥ್ಯ ಬೇಕಾಗುತ್ತದೆ. ಹಾಗಾಗಿ ಒಂದು ಪವರ್ ಸ್ಟೇಷನ್ ನಿರ್ಮಾಣ ಮಾಡಬೇಕಾಗುತ್ತದೆ. ಈಗಾಗಲೇ 24 ಕೋಟಿ ರೂ. ಕೆಪಿಟಿಸಿಎಲ್‌ಗೆ ನೀಡಲಾಗಿದೆ. ಇನ್ನು 6 ತಿಂಗಳ ಅವಧಿಯಲ್ಲಿ ಪವರ್ ಸ್ಟೇಷನ್ ನಿರ್ಮಾಣವಾಗಲಿದೆ. ಸ್ಥಳೀಯರಿಗೆ ಮತ್ತಷ್ಟು ಅನುಕೂಲವಾಗಲಿದೆ ಸಂಸದರು ತಿಳಿಸಿದರು.

ನಿವಾಸಿಗರ ಸಂತಸ: ಸುಮಾರು 3 ಕಿ.ಮೀ. ವ್ಯಾಪ್ತಿಯ ಬೀದಿದೀಪಗಳಿಗೆ ವಿದ್ಯುತ್ ಚಾಲನೆ ಆಗುತ್ತಿದ್ದಂತೆ ಸ್ಥಳೀಯ ನಿವಾಸಿಗರು ಸಂತಸ ವ್ಯಕ್ತಪಡಿಸಿದರು. ವ್ಯಕ್ತಿಯೋರ್ವರು ಮಾತನಾಡಿ, ಬೀದಿದೀಪದ ಸಮಸ್ಯೆಯಿಂದಾಗಿ ಭಾರಿ ಅನಾನುಕೂಲ ಉಂಟಾಗಿತ್ತು. ಕಳ್ಳಕಾಕರ ಕಾಟ, ಪುಂಡರ ಹಾವಳಿ ಹೆಚ್ಚಿತ್ತು. ಆದರೆ ಈಗ ನಿರ್ಭೀತಿಯಿಂದ ಓಡಾಡಬಹುದು ಎಂದು ಸಂಸದರಿಗೆ ಧನ್ಯವಾದ ತಿಳಿಸಿದರು. ಈ ವೇಳೆ ಬಡಾವಣೆ ನಿವಾಸಿಗರಾದ ರಾಜೇಶ್, ರವೀಶ್, ಶ್ರೀಪಾದ್ ರಾವ್, ಕಿರಣ್ ಸೇರಿದಂತೆ ಇನ್ನಿತರರಿದ್ದರು.

2ನೇ ವರ್ಷದ ಸವಿನೆನಪು



ದೇವರು ನಿಮ್ಮ ಆತ್ಮಕ್ಕೆ ಶಾಂತಿ ಕೊಡಲಿ ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ಲಕ್ಷ್ಮಮ್ಮ

ದುಃಖತಪ್ತರು: ಯಜಮಾನರು, ಹೆಣ್ಣುಮಕ್ಕಳು, ಗಂಡುಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ರಾಜೀವ್‌ನಗರ, 1ನೇ ಹಂತ, ಬಸ್‌ಸ್ಟಾಪ್, ಮೈಸೂರು

BEFORE DISTRICT LEGAL SERVICE AUTHORITY, AT RAICHUR.
P.I.M.S. No. 3/2023

M/s. M.R.N. Agro Industries, Represented by its GP'A holder H.M. Ramesh V/s Smt. Sharadamma Basavegouda Bharati Proprietor of M/s, New Sri.Shivaparvathi Traders, Mysore.

Respondent: Smt. Sharadamma Basavegouda Bharati. Proprietor of M/s. New Sri. Shivaparvathi Traders, Mysore. Corresponding address: # 334/1, Malai Mahadeshwara Gate,"A" Block, APMC Yard, Bandipalya, Mysore. Mob. No. 8710059845.

Whereas applicant filed Pre-Institution Mediation as per provisions Section 12A of Commercial Court Establishment Act, 2015 against you for recovery of money of Rs. 18,53,907/-.

You are respondent hereby summoned to appear before Hon'ble Authority in person or by a pleader duly instructed and able to answer all material questions relating to above mentioned application on 12 day of october month 2023, at 3-00 P.M. in the afternoon and to state whether you ready to settle the dispute or not to the claim amount of the applicant and to receive further directions of authority..

Take notice that in default of your appearance on the day and time mentioned the above Petition will be heard and determined in your absence.

Given under my hand and the seal of the Court, this 04 day of September 2023.

By the order of the authority
Sd/-Member Secretary
District legal service authority
Raichur

Sd/- Indudhar.M.Patil
Advocate for the applicant

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ.ಮೈ.ನ.ಪ್ರಾ/ವಿ.ತ–4/2023–24 ದಿನಾಂಕ: 02.09.2023

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಹಿಂದಿನ ಸಿಐಟಿಬಿ) ದಿಂದ ಶ್ರೀ. ಶಂಕರ್ ಜವಳಿ ರವರಿಗೆ ದಿನಾಂಕ: 27.05.1960 ರಂದು ಜಯಲಕ್ಷ್ಮಿಪುರಂ 4ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ.46 ರ ಅಳತೆ **100x150=15,000** ಚ.ಅಡಿಗಳು ನಿವೇಶನವು ಮಂಜೂರಾಗಿರುತ್ತದೆ. ನಂತರ ಸದರಿ ನಿವೇಶನವು ದಿನಾಂಕ:25.01.1961 ರಂದು ಎಸ್.ಪಿ. ವೀರಭದ್ರ ಶೆಟ್ಟಿ ರವರಿಗೆ ವರ್ಗಾವಣೆಯಾಗಿದ್ದು, ಸದರಿಯವರು ಮುಚ್ಚಳಿಕೆ ಪತ್ರವನ್ನು ಬರೆದು ಕೊಟ್ಟಿರುತ್ತಾರೆ.

ವರ್ಗಾವಣೆದಾರರಾದ ಎಸ್.ಪಿ.ವೀರಭದ್ರ ಶೆಟ್ಟಿ ರವರು ದಿನಾಂಕ:26.04.1974 ರಂದು ಮೃತರಾಗಿದ್ದು, ಸದರಿಯವರ ಪತ್ನಿಯಾದ ಭಾಗ್ಯಲಕ್ಷ್ಮಮ್ಮ ಹಾಗೂ ಮಕ್ಕಳುಗಳಾದ 1).ಲೇಟ್. ಎಸ್.ವಿ. ಗೋವಿಂದಶೆಟ್ಟಿ 2). ಲೇಟ್. ಎಸ್.ವಿ. ಗೋಪಾಲ್ ಶೆಟ್ಟಿ 3). ಲೇಟ್. ಎಸ್.ವಿ. ರಂಗನಾಥ್ (ಮಗ) 4).ಲೇಟ್, ಮಂದಾರವಲ್ಲಿ (ಮಗಳು) 5).ಲೇಟ್. ಎಸ್.ವಿ. ವಿಶ್ವನಾಥ್ (ಮಗ) 6). ಲೇಟ್.ಎಂ.ವಿ.ರಾಮಕೃಷ್ಣಮ್ಮ 7). ಲೇಟ್. ಎಸ್.ವಿ. ಜಗದೀಶ್ ಇವರುಗಳು ಮೃತರಾಗಿರುತ್ತಾರೆ.

ವರ್ಗಾವಣೆದಾರರು ಮೃತರಾಗಿರುವುದರಿಂದ ಅವರ ಕುಟುಂಬದ ವಾರಸುದಾರರುಗಳಾದ ಸೊಸೆಯಂದಿರು 1). ಶ್ರೀಮತಿ, ಎಲ್ಲಮ್ಮ ಎಸ್ (ಸೊಸೆ), 2), ಶ್ರೀಮತಿ, ಚಂದ್ರಲಕ್ಷ್ಮಿ (ಸೊಸೆ), 3), ಶ್ರೀಮತಿ ಎಸ್.ವಿ.ಸುಮಿತ್ರ (ಸೊಸೆ), 4). ಶ್ರೀಮತಿ ಸುಜಾತ ಜಗದೀಶ್ (ಸೊಸೆ), ಮತ್ತು ಮೊಮ್ಮಕ್ಕಳುಗಳಾದ 5), ಶರತ್ ಶಿವಪೂಜ ಚಂದ್ರ, 6), ನಂದಕುಮಾರ್ ಜಿ. ಶಿವಪೂಜ 7). ಪ್ರಸನ್ನ ಕುಮಾರ್ ಶಿವಪೂಜ 8). ಎಸ್.ಜಿ. ರಾಮಕುಮಾರ್ 9). ಎಸ್.ಜಿ. ಶ್ರೀನಿವಾಸ್ 10). ಶ್ರೀ.ಎಸ್.ಜಿ. ಸುರೇಶ್ ಬಾಬು 11).ಎಸ್.ಜಿ. ಅಜಿತ್, 12). ಎಸ್.ಆರ್. ದೇವದತ್ತ ಕುಮಾರ್ 13). ಎಸ್.ಕೆ.ರಾಮಪ್ರಸಾದ್, 14).ಎಸ್.ಕೆ.ರಾಮದ್ಯಾನಿ, 15).ಜಯಲಕ್ಷ್ಮಿ ಕುಪ್ಪರಾಜ್, 16).ಎಸ್.ವಿ.ಶ್ರೀಧರ್, 17).ಎಂ.ವಿ.ನಾಗರಾಜ, 18).ಎಂ.ವಿ.ಸರೋಜಮ್ಮ 19), ಬಿಂದು ಜಗದೀಶ್, 20), ಚೈತ್ರ ಜಗದೀಶ್ ರವರುಗಳು ಸೇರಿ ತಮ್ಮಗಳ ಪರವಾಗಿ ವ್ಯವಹರಿಸಲು ಶ್ರೀ.ಎಸ್.ಜಿ.ಸುರೇಶ್ ಬಾಬು ಮತ್ತು ಎಸ್.ಆರ್.ದೇವದತ್ತ ಕುಮಾರ್ ರವರುಗಳಿಗೆ ಅಧಿಕಾರ ನೀಡುವ ಬಗ್ಗೆ **4ನೇ ಅಡಿಷಿನಲ್ ಸಿಟಿ ಸಿವಿಲ್ ನ್ಯಾಯಾಲಯ ಬೆಂಗಳೂರು ರಲ್ಲಿ ಪಿ&ಎಸ್.ಸಿ. ನಂ.25012/2014 ಅರ್ಜಿ ಸಲ್ಲಿಸಿ, ದಿನಾಂಕ:14.06.2016 ರಂದು ನ್ಯಾಯಾಲಯದಿಂದ Letters of Administration** ಪತ್ರ ಪಡೆದಿರುತ್ತಾರೆ.

ಮೇಲ್ಕಂಡ ನಿವೇಶನದ ಬಗ್ಗೆ ವ್ಯವಹರಿಸಲು ನ್ಯಾಯಾಲಯದಿಂದ Letters of Administration ಪತ್ರ ಪಡೆದಿರುವ ಶ್ರೀ.ಎಸ್.ಜಿ.ಸುರೇಶ್ ಬಾಬು ಮತ್ತು ಎಸ್.ಆರ್.ದೇವದತ್ತ ಕುಮಾರ್ ರವರುಗಳು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ನಿವೇಶನದ ವರ್ಗಾವಣೆ/ಕ್ರಯಪತ್ರ ಕೋರಿದ್ದು, ಸಂಬಂಧಿಸಿದಂತೆ ಕೆಲವು ದಾಖಲಾತಿಗಳಾದ ವಂಶವೃಕ್ಷ, ಮರಣ ಸಮರ್ಥನ ಪತ್ರಗಳು, ಗುರುತಿನ ಚೀಟಿ, ನ್ಯಾಯಾಲಯದ ಆದೇಶದ ಪ್ರತಿ, ವರ್ಗಾವಣೆ ಪತ್ರ, ದಿನಾಂಕ:04.09.2015 ರ ರಾಜ್ಯ ಪತ್ರದ ಪ್ರತಿ, ನಗರ ಪಾಲಿಕೆ ಖಾತಾ ಪತ್ರ, ಹಾಗೂ ಕಂದಾಯ ರಶೀದಿ ಸಲ್ಲಿಸಿದ್ದು, ನಿವೇಶನದ **ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಹಣ ಪಾವತಿಸಿರುವ ರಶೀದಿ ಹಾಗೂ ಮೂಲ ಮಂಜೂರಾತಿದಾರರ ಖಾತಾ ಪತ್ರ ಸಲ್ಲಿಸಿರುವುದಿಲ್ಲ.**

ಪ್ರಸ್ತುತ, ಮೇಲ್ಕಂಡ ವಾರಸುದಾರರುಗಳಿಗೆ ಪೈಕಿ **1)ಶ್ರೀ.ಎಸ್.ಜಿ.ಸುರೇಶ್ ಬಾಬು ವಿಳಾಸ ನಂ.12/2, ಲಾವೆಲ್ ರಸ್ತೆ, ಮ್ಯೂಸಿಯಂ ರಸ್ತೆ, ಬೆಂಗಳೂರು, ಮತ್ತು 2). ಎಸ್.ಆರ್.ದೇವದತ್ತ ಕುಮಾರ್ ರವರ ವಿಳಾಸ ನಂ.16/36, 1ನೇ ಕ್ರಾಸ್, ವಸಂತನಗರ, ಬೆಂಗಳೂರು ಇಲ್ಲಿ ವಾಸಿಸುವ ಇವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಜಯಲಕ್ಷ್ಮಿಪುರಂ 4ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ.46 ಅಳತೆ 100X150=15,000 ಚ.ಅಡಿಗಳ ನಿವೇಶನವನ್ನು ಎಸ್.ಪಿ.ವೀರಭದ್ರ ಶೆಟ್ಟಿ ರವರ ಎಲ್ಲಾ ವಾರಸುದಾರರುಗಳಿಗೆ ವರ್ಗಾವಣೆ ಹಾಗೂ ಕ್ರಯಪತ್ರ ನೀಡುವಂತೆ ಕೋರಿರುವುದರಿಂದ,** ವರ್ಗಾವಣೆ ಕೋರಿರುವ ಸ್ವತ್ತು ಖಾಲಿ ನಿವೇಶನವಾಗಿದ್ದು, ಗುಡಿಸಲುಗಳು ಇರುವ ಸ್ವತ್ತಾಗಿದ್ದು, ಸದರಿ ಸ್ವತ್ತಿನ ವರ್ಗಾವಣೆ /ಕ್ರಯಪತ್ರ ನೀಡುವ ಸಂಬಂಧಪಟ್ಟಂತೆ ಹಿತಾಸಕ್ತಿದಾರರಿಂದ ಅಥವಾ ಇತರೆ ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಹಾಗೂ ಮೇಲ್ಕಂಡ ನಿವೇಶನದ ಮೂಲ ಮಂಜೂರಾತಿಪತ್ರ, ಸ್ವಾಧೀನ ಪತ್ರ ಹೊಂದಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮಹಿಸಲಾಗುವುದೆಂದು ಈ ಮೂಲಕ

ಸಹಿ/– ವಿಶೇಷ ತಹಸಿಲ್ದಾರ್ –04
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಮೈಸೂರು ವಿಭಾಗ, ಮೈಸೂರು

ಸಂ: ಕರಾಸಾ/ಮೈವಿ/ಸಂ/ವಾ/1862/2023–24 ದಿನಾಂಕ: 04.09.2023

ಇ–ಟೆಂಡರ್ ಸಂಖ್ಯೆ: 03 2023/24
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಮೈಸೂರು ವಿಭಾಗದ ವ್ಯಾಪ್ತಿಯ ಸಾತಗಳ್ಳಿ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಗಳಿಗೆ "ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ" ಆಧಾರದ ಮೇಲೆ ಪರವಾನಗಿದಾರರನ್ನು ಆಯ್ಕೆಗಾಗಿ ಅರ್ಜಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಕರೆಯಲಾಗಿದೆ.

ಇ–ಟೆಂಡರ್ ವಿವರಗಳು

ವಿಷಯ	ದಿನಾಂಕ	ಸಮಯ
ಟೆಂಡರ್ ಕುರಿತು ವಿಚಾರಣೆಗೆ ಕೊನೆಯ ದಿನಾಂಕ	12.09.2023	12:00
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ	12.09.2023	15:30
ಇ.ಎಂ.ಡಿ & ಅರ್ಜಿ ಶುಲ್ಕಗಳ ಡಿ.ಡಿ. ಸಲ್ಲಿಸಲು ಕೊನೆಯ ದಿನಾಂಕ	12.09.2023	17:30
ಆರ್ಥಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ	14.09.2023	15:30

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮೈಸೂರು ವಿಭಾಗ (ಸಂಚಾರ ಶಾಖೆ), ಹನುಮಂತನಗರ ಮುಖ್ಯರಸ್ತೆ, ಬನ್ನಿಮಂಟಪ, ಮೈಸೂರು ರವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂರವಾಣಿ ಸಂಖ್ಯೆ: **7760990802, 7760990811, 7019026615, 9343554555**).

ಇ–ಪೋರ್ಟಲ್ ವಿಳಾಸ: ಇ–ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಅಂತರ್ ಜಾಲದ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/–,
ವಿಭಾಗೀಯ ನಿಯಂತ್ರಣಾಧಿಕಾರಿ
ಮೈಸೂರು ವಿಭಾಗ, ಮೈಸೂರು

ವಾಸಾಸಂಇ/ವಾಪ್ರ/ಎಲ್‌ಸಿ/1193/2023–24

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷೀದಾರರುಗಳಾದ, ನಂಬರ್ 194/1, ಸುಭಾಶ್ ನಗರ, ನರಸಿಂಹರಾಜ ಮೊಹಲ್ಲಾ, ಮೈಸೂರು– 570007, ವಿಳಾಸದಲ್ಲಿ ವಾಸವಾಗಿರುವ (1). ಶ್ರೀ. ಅನೀಸ್ ಉರ್ ರಹಮಾನ್ ಕಲ್ಲುಣಿ ಬಿನ್, ಹಫೀಜ್ ಉರ್ ರಹಮಾನ್ ಮತ್ತು (2). ಶ್ರೀಮತಿ, ರೇಷ್ಮ ಬಾನು ಕೋಂ, ಅನೀಸ್ ಉರ್ ರೆಹಮಾನ್ ಕಲ್ಲುಣಿ ರವರುಗಳು, ಸ್ವತ್ತಿನ ಮಾಲೀಕರಾದ, "ಶ್ರೀ ಆನಂದ್‌ಪುರ್ ಟ್ರಸ್ಟ್" (PAN: AAATS2629F), ವಿಳಾಸ: ತೆಹ್ಸಿಲ್ ಇಸಗರ್, ಜಿಲ್ಲೆ ಅಶೋಕನಗರ್, ಮಧ್ಯ ಪ್ರದೇಶ–473331, ಟ್ರಸ್ಟ್ ಅನ್ನು ಪ್ರತಿನಿಧಿಸುತ್ತಿರುವ, ಮ್ಯಾನೇಜಿಂಗ್ ಟ್ರಸ್ಟಿ: ಮಹಾತ್ಮ ವಿಚಾರ್ ನಿರ್ಲೇಪ್ ಆನಂದ್ ಜೀ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಾಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಪೂರಕ ದಾಖಾಲಾತಿಗಳೊಂದಿಗೆ, ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಬಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರಾದ "ಶ್ರೀ. ಆನಂದ್‌ಪುರ್ ಟ್ರಸ್ಟ್" ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ನಗರ, ವಿ. ವಿ. ಮೊಹಲ್ಲಾ, ಯಾದವಗಿರಿ, ವಿವೇಕಾನಂದ ರಸ್ತೆ, ಇಲ್ಲಿರುವ ಪೂರ್ವ–ಪಶ್ಚಿಮ: 105 ಅಡಿ, ಉತ್ತರ–ದಕ್ಷಿಣ: 121 ಅಡಿ, ಒಟ್ಟು ವಿಸ್ತೀರ್ಣ: 12705 ಚದರ ಅಡಿ ಅಳತೆಯ ಸ್ವತ್ತಿನ ಸಂಖ್ಯೆ: 176 D–105 (PID No. 149196) ಮತ್ತು ಇದರಲ್ಲಿ ಕಟ್ಟಿರುವ ಕಟ್ಟಡ ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ:– ಸಂಖ್ಯೆ: 175, ಪಶ್ಚಿಮಕ್ಕೆ:– ಸಂಖ್ಯೆ: 176/ಎ ಉತ್ತರಕ್ಕೆ: – ಸಂಖ್ಯೆ: 174 ಮತ್ತು 174/ಎ, ದಕ್ಷಿಣಕ್ಕೆ:–ವಿವೇಕಾನಂದ ರಸ್ತೆ

Sd/- M.N.Prakash kalappa, Advocate, KAR- 1996-2000,
2-3, First Floor, PRI Complex, 67/7A, New Sayyajirao Road,
Fort Mohalla, Mysore 570004, India. Cell: 93431 12535
ಮೈಸೂರು: 05/09/2023 E-mail: mnprakashkalappa@gmail.com